ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

ಸಮಾಜವಾದಿ ಚಿಂತಕ
ಪ್ರೊ. ಎಸ್.ಎಚ್.ಪಟೇಲ್
ಇನ್ನಿಲ್ಲ



ಸಂಪುಟ 11 | ಸಂಚಿಕೆ 02 | ಜನವರಿ 08, 2017 | ಪುಟ 16 | ರೂ.10/- Web : www.janashakthi.co.in e-mail : janashakthi2007@gmail.com







ಸಮತೆಯ ಅರಿವು ಸಾರಿದ ಜನನುಡಿ–2016

ಯಶಸ್ವಿ ದಿಡ್ಡಳ್ಳಿ ಹೋರಾಟ





ಕೇರಳ : ನೋಟು ನಿಷೇಧದ ವಿರುದ್ಧ 700 ಕಿ.ಮೀ. ಮಾನವ ಸರಪಳಿ



ಹೊಸ ವರುಷ, ಹೊಸ ಸವಾಲುಗಳು

ಬಡವರ ಮನೆ ಮಾತ್ರ ಸಕ್ರಮವಾಗಲಿ

ಒಳ ಮೀಸಲಾತಿ: ಹೋರಾಟ ಎತ್ತ ಸಾಗಬೇಕು ?





ಅನಾಣ್ಯೀಕರಣದ ವಿರುದ್ಧ ಕೇರಳದಲ್ಲಿ ಭಾರೀ ಪ್ರತಿಭಟನೆ
ಮಾನವ ಗೋಡೆಯಾದ ಮಾನವ ಸರಪಳಿ

ಅನಾಣ್ಯೀಕರಣದ ಹೆಸರಿನಲ್ಲಿ ನಡೆಸಿರುವ ಅಮಾನವೀಯ 'ಸುಧಾರಣೆ'ಯ ವಿರುದ್ಧ ಕೇರಳ ಜನತೆಯು ಆಕ್ರೋಶ ಡಿಸೆಂಬರ್ 29ರಂದು ಪ್ರದರ್ಶನಗೊಂಡಿತು. ಮಾನವ ಸರಪಳಿ ನಡೆಸಲು ಎಲ್‌ಡಿಎಫ್ ಕರೆಗೆ ಓಗೊಟ್ಟ ಜನರು ಅದನ್ನು ಹಲವೆಡೆಗಳಲ್ಲಿ ಮಾನವ ಗೋಡೆ-ಯಾಗಿ ಮಾರ್ಪಡಿಸಿದರು. ತಿರುವನಂತಪುರದ ರಾಜಭವನದಿಂದ ಕಾಸರಗೋಡಿನ ವರೆಗಿನ ಸುಮಾರು 700ಕಿ.ಮೀ. ಮಾನವ ಸರಪಳಿಯ ಆರಂಭದಲ್ಲಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಇದ್ದರೆ, ಉತ್ತರದ ತುದಿಯಲ್ಲಿ ಕಾಸರಗೋಡು ಸಿಪಿಐ(ಎಂ) ಲೋಕಸಭಾ ಸದಸ್ಯ ಮತ್ತು ಕೇಂದ್ರಸಮಿತಿ ಸದಸ್ಯ ಪಿ.ಕರುಣಾಕರನ್ ಇದ್ದರು.

ರಾಜಭವನದ ಮುಂದೆ ಮುಖ್ಯಮಂತ್ರಿಗಳೊಂದಿಗೆ ಮಾಜಿ ಮುಖ್ಯಮಂತ್ರಿ ವಿ.ಎಸ್.ಅಚ್ಯುತಾನಂದನ್, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕೊಡಿಯೇರಿ ಬಾಲಕೃಷ್ಣನ್, ಸಿಪಿಐ ರಾಜ್ಯ ಕಾರ್ಯದರ್ಶಿ ಕಾಣಂ ರಾಜೇಂದ್ರನ್, ಎನ್‌ಸಿಪಿ ಮುಖಂಡ ಉಳವೂರ್ ವಿಜಯನ್, ಜೆಡಿಎಸ್ ಮುಖಂಡ ನೀಲಲೋಹಿತ ದಾಸನ್ ನಾಡರ್ ಮಾನವ ಸರಪಳಿಯಲ್ಲಿ ಕೈಜೋಡಿಸಿದರು. ತಿರುವನಂತಪುರದಲ್ಲಿ ಸಹಕಾರಿ ಮಂತ್ರಿ ಕಡಕಂಪಲ್ಲಿ ಸುರೇಂದ್ರನ್, ಸಿಪಿಐ(ಎಂ) ಮುಖಂಡ ಅನತಲಾವಟ್ಟಂ ಆನಂದನ್ ಸರಪಳಿಯಲ್ಲಿ ಕೈಜೋಡಿಸಿದರು.

ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯ ಎಂ ಎ ಬೇಬಿ ಮತ್ತು ಸಿಪಿಐ ಮುಖಂಡ ಪನ್ನಿಯನ್ ರವೀಂದ್ರನ್ ಕೊಚ್ಚಿಯಲ್ಲಿ, ಎಲ್‌ಡಿಎಫ್ ಸಂಯೋಜಕ ವೈಕೊಂ ವಿಶ್ವನ್ ಅಲಪುಳದಲ್ಲಿ, ಹಣಕಾಸು ಮಂತ್ರಿ ಥಾಮಸ್ ಐಸಾಕ್ ಮತ್ತು ಕಾರ್ಮಿಕ ಮಂತ್ರಿ ಟಿ ಪಿ ರಾಮಕೃಷ್ಣನ್ ಕೋಝಿಕೊಡ್‌ನಲ್ಲಿ, ಕೇಂದ್ರ ಸಮಿತಿ ಸದಸ್ಯ ಇ ಪಿ ಜಯರಾಜನ್ ಮತ್ತು ಪಿ.ಕೆ.ಶ್ರೀಮತಿ ಕಣ್ಣೂರಿನಲ್ಲಿ ಹಾಗೂ ರೆವಿನ್ಯೂ ಮಂತ್ರಿ ಇ.ಚಂದ್ರಶೇಖರನ್ ಕಾಸರಗೋಡಿನಲ್ಲಿ ಸರಪಳಿಯಲ್ಲಿ ಕೈಜೋಡಿಸಿದರು.



ಎಲ್‌ಡಿಎಫ್ ಮುಖಂಡರಲ್ಲದೆ ಲೇಖಕರು, ಚಿತ್ರ ತಾರೆಯರು, ಸಂಗೀತಗಾರರು, ಕ್ರೀಡಾಪಟುಗಳು, ರಾಜ್ಯದ ವಿವಿಧ ಭಾಗಗಳಲ್ಲಿ ಸರಪಳಿಯಲ್ಲಿ ಕೈಜೋಡಿಸಿದರು. . ರಾಜ್ಯದಲ್ಲಿ ದಕ್ಷಿಣದಿಂದ ಉತ್ತರ ದವರೆಗಿನ ರಾಷ್ಟ್ರೀಯ ಹೆದ್ದಾರಿಯ ಪಶ್ಚಿಮ ಭಾಗದಲ್ಲಿ ಮಾನವ ಸರಪಳಿಯನ್ನು ರಚಿಸಲಾಯಿತು. ರಾಷ್ಟ್ರೀಯ ಹೆದ್ದಾರಿಯಲ್ಲಿ ಇಲ್ಲದ ಪಟ್ಟಣಮಿತ್ತ ಮತ್ತು ಕೊಟ್ಟಾಯಂ ಜಿಲ್ಲೆಗಳ ಜನರು ಅಲಪುಳ ಜಿಲ್ಲೆಯ ವಿವಿಧೆಡೆಗಳಲ್ಲಿ ಸೇರಿಕೊಂಡರೆ, ಇಡುಕ್ಕಿ ಮತ್ತು ವೈನಾಡಿನ ಜನರು ಪ್ರತ್ಯೇಕ ಮಾನವ ಸರಪಳಿಗಳನ್ನು ರಚಿಸಿದರು.

ಸಂಜೆ 5ಗಂಟೆಯಿಂದ 30ನಿಮಿಷ ನಡೆದ ಮಾನವ ಸರಪಳಿಯನ್ನು ರಾಜಭವನದ ಮುಂದೆ ಮುಖ್ಯಮಂತ್ರಿಗಳು ಉದ್ಘಾಟಿಸಿದರು. ಅನಾಣ್ಯೀಕರಣ ಮೋದಿಯವರ ಏಕಪಕ್ಷೀಯ ನಿರ್ಧಾರ, ಅದನ್ನು ವಿರೋಧಿಸುವವರನ್ನು ಹೀಗಳೆಯುವ ಮೂಲಕ ಆರೆಸ್ಸೆಸ್, ಬಿಜೆಪಿ ತನ್ನ ಫ್ಯಾಸಿಸ್ಟ್ ಸ್ವರೂಪವನ್ನು ಬಯಲುಮಾಡಿಕೊಂಡಿದೆ ಎಂದು ಅವರು ಹೇಳಿದರು. ಕೇಂದ್ರ ಸರಕಾರ ರಾಜ್ಯದ ಸಹಕಾರಿ ವಲಯವನ್ನು ನಾಶಮಾಡಲು ಹೊರಟಿದೆ, ಪ್ರಧಾನ ಮಂತ್ರಿಗಳು ದೇಶದ ಒಕ್ಕೂಟ ಸ್ವರೂಪವನ್ನು ಬುಡಮೇಲು ಮಾಡುತ್ತಿದ್ದಾರೆ ಎಂದು ಎಲ್‌ಡಿಎಫ್ ಆಕ್ರೋಶ ವ್ಯಕ್ತಪಡಿಸಿದೆ.





ಪ್ರೀತಮ್ ಕೌರ್ ಅವರಿಗೆ ಶ್ರದ್ಧಾಂಜಲಿ

ಸಿಪಿಐ(ಎಂ) ನ ಪ್ರಧಾನ ಕಾರ್ಯದರ್ಶಿಯಾಗಿದ್ದ ಹಿರಿಯ ಕಮ್ಯುನಿಸ್ಟ ನೇತಾರ ಹರ್ಕಿಶನ್ ಸಿಂಗ್ ಸುರ್ಜಿತ್ ಅವರ ಪತ್ನಿ ಪ್ರೀತಮ್‌ಕೌರ್ ನಿಧನರಾಗಿದ್ದಾರೆ. ಅವರಿಗೆ 93 ವರ್ಷ ವಯಸ್ಸಾಗಿದ್ದು ಕೆಲಕಾಲದಿಂದ ಅಸ್ವಸ್ಥರಾಗಿದ್ದರು. ಆಕೆ ಪಂಜಾಬಿನಲ್ಲಿ 1959ರಲ್ಲಿ ಸುರ್ಜಿತ್ ನೇತೃತ್ವದಲ್ಲಿ ನಡೆದ ಬೆಟರ್‌ಮೆಂಟ್ ಲೆವಿ ವಿರುದ್ಧ ಹೋರಾಟವೂ ಸೇರಿದಂತೆ ಹಲವು ಹೋರಾಟಗಳಲ್ಲಿ ಭಾಗವಹಿಸಿದ್ದವರು. ಸಮಾಜವಾದಿ ನೀತಿಗಳಲ್ಲಿ ದೃಢ ವಿಶ್ವಾಸ ಹೊಂದಿದ್ದ ಆಕೆ ತಮ್ಮ ಬದುಕಿನಾದ್ಯಂತ ಸಿಪಿಐ(ಎಂ) ಪರವಾಗಿ ನಿಂತಿದ್ದರು. ಡಿಸೆಂಬರ್ 28ರಂದು ಸಿಪಿಐ(ಎಂ) ಕೇಂದ್ರ ಸಮಿತಿ ಕಚೇರಿ ಎಕೆಜಿ ಭವನದಲ್ಲಿ ಆಕೆಗೆ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಲಾಯಿತು.





ಮಾತೆಂದರೆ ಇದು

ಸಿಲುಕದಿರಿ ಮತವೆಂಬ
ಮೋಹದಜ್ಞಾನಕೆ
ಮತಿಯಿಂದ ದುಡಿಯಿರೈ
ಲೋಕದ ಹಿತಕೆ
ಆ ಮತದ ಈ ಮತದ
ಹಳೆ ಮತದ ಸಹವಾಸ ಸಾಕಿನ್ನು,
ಸೇರಿರೈ ಮನುಜ ಮತಕೆ,
ವಿಶ್ವ ಪಥಕೆ
ಓ ಬನ್ನಿ ಸೋದರರೇ, ಬೇಗ ಬನ್ನಿ.

– ರಾಷ್ಟ್ರಕವಿ ಕುವೆಂಪು

ತ್ರಿಪುರಾ ಗ್ರಾಮ ಪಂಚಾಯತು ಚುನಾವಣೆಗಳಲ್ಲಿ ಎಡರಂಗಕ್ಕೆ ಭಾರೀ ಜಯ

ತ್ರಿಪುರಾದಲ್ಲಿ ಡಿಸೆಂಬರ್ 21ರಂದು ಮೂರು ಹಂತಗಳ ಪಂಚಾಯತುಗಳ ಖಾಲಿ ಸ್ಥಾನಗಳಿಗೆ ನಡೆದ ಉಪಚುನಾವಣೆಗಳಲ್ಲಿ ಎಡರಂಗ ಭಾರೀ ಜಯ ಗಳಿಸಿದೆ. 83% ಮತದಾರರು ಈ ಚುನಾವಣೆಗಳಲ್ಲಿ ಶಾಂತಿಯುತವಾಗಿ ಮತ ಚಲಾಯಿಸಿದರು. ಒಂದು ಜಿಲ್ಲಾಪರಿಷದ್ ಸ್ಥಾನ, ಎರಡು ಪಂಚಾಯತ್ ಸಮಿತಿ ಸ್ಥಾನಗಳು ಮತ್ತು 41 ಗ್ರಾಮ ಪಂಚಾಯತ್ ಸ್ಥಾನಗಳಿಗೆ ಮತದಾನ ನಡೆದಿತ್ತು. ಜಿಲಾಪರಿಷದ್ ಮತ್ತು ಪಂಚಾಯತ್ ಸಮಿತಿಯ ಒಟ್ಟು ಮೂರೂ ಸ್ಥಾನಗಳನ್ನು ಸಿಪಿಐ(ಎಂ) ಗೆದ್ದು ಕೊಂಡಿದೆ. 41 ಗ್ರಾಮ ಪಂಚಾಯತು ಸ್ಥಾನಗಳಲ್ಲಿ 37ನ್ನು ಎಡರಂಗ ಗೆದ್ದುಕೊಂಡಿದೆ. ಮೂರು ಗ್ರಾಮ ಪಂಚಾಯತ್ ಸ್ಥಾನಗಳನ್ನು ಸಿಪಿಐ(ಎಂ) ಈ ಮೊದಲೇ ಅವಿರೋಧವಾಗಿ ಪಡೆದುಕೊಂಡಿತ್ತು.

ಹೀಗೆ ಒಟ್ಟು 47 ಸ್ಥಾನಗಳಲ್ಲಿ ಎಡರಂಗ 43ನ್ನು ಗೆದ್ದುಕೊಂಡಿದಸಿವುಗಳಲ್ಲಿ ಐದು ಈ ಹಿಂದೆ ಪ್ರತಿಪಕ್ಷಗಳು ಗೆದ್ದಿದ್ದ ಸ್ಥಾನಗಳು. ಜಿಲ್ಲಾ ಪರಿಷದ್ ಚುನಾವಣೆಯಲ್ಲಿ ಎರಡನೇ ಸ್ಥಾನದಲ್ಲಿ ಬಿಜೆಪಿ ಇತ್ತು, ಟಿಎಂಸಿ ಠೇವಣಿ ಕಳೆದುಕೊಂಡಿತು.

ಎಡರಂಗದಲ್ಲಿ ವಿಶ್ವಾಸವನ್ನು ಪುನರುಚ್ಚರಿಸಿರುವ ತ್ರಿಪುರಾದ ಮತದಾರರನನು ಅಭಿನಂದಿಸುತ್ತ ತ್ರಿಪುರಾ ಎಡರಂಗ ಇದು ಶಾಂತಿ, ಸೌಹಾರ್ದ ಮತ್ತು ಅಭಿವೃದ್ಧಿಗೆ ಜನಾದೇಶ ಎಂದು ವರ್ಣಿಸಿದೆ. ಈ ಚುನಾವಣೆಗಳಲ್ಲಿ ಒಂದೂ ಸ್ಥಾನ ಪಡೆಯದ ಕಾಂಗ್ರೆಸ್ ಪಕ್ಷ ಗುಪ್ತವಾಗಿ ಬಿಜೆಪಿಯನ್ನು ಬೆಂಬಲಿಸಿದ ಬಗ್ಗೆ ಎಡರಂಗ ಆತಂಕ ವ್ಯಕ್ತಪಡಿಸಿದೆ. ಅದು ಈ ಹಿಂದೆ ಗೆದ್ದಿದ್ದ ಸ್ಥನಗಳಿಗೂ ಈ ಬಾರಿ ಸ್ಪರ್ಧಿಸಲಿಲ್ಲ.

ಬಡವರ ಮನೆಗಳು ಮಾತ್ರ ಸಕ್ರಮವಾಗಲಿ

ಸಂಪಾದಕೀಯ

ರಾಜ್ಯದ ನಗರ, ಪಟ್ಟಣ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಗೊತ್ತಿದ್ದೊ ಗೊತ್ತಿಲ್ಲದೆಯೋ ಸರಕಾರಿ ಕಂದಾಯ ಜಾಗಗಳಲ್ಲಿ ಅಥವಾ ಇತರ ಒಡೆತನ ಖಚಿತವಿಲ್ಲದ, ದಾಖಲೆಗಳಿಲ್ಲದ ನಿವೇಶನಗಳಲ್ಲಿ ಅನಧಿಕೃತವಾಗಿ ಲಕ್ಷಾಂತರ ಜನ ಕಳೆದ ಹಲವು ವರ್ಷಗಳಿಂದ ಮನೆ ಕಟ್ಟಿಕೊಂಡಿದ್ದಾರೆ. ಅಥವಾ ಇಂತಹ ನಿವೇಶನಗಳಲ್ಲಿ ಕಟ್ಟಿದ ಮನೆಗಳನ್ನು ಕೊಂಡಿದ್ದಾರೆ. ಇದಕ್ಕೆ ಕಾರಣ ಜನಸಂಖ್ಯೆ ಬೆಳೆಯುತ್ತಿರುವ ಎಲ್ಲಾ ಪ್ರದೇಶಗಳಲ್ಲಿ ನಿವೇಶನ, ಮನೆಗಳ ಅಭಾವವೇ ಮುಖ್ಯ ಕಾರಣ. ಜನತೆಯ ಮೂಲಭೂತ ಅವಶ್ಯಕತೆಗಳಲ್ಲಿ ಒಂದಾದ ಮತ್ತು ಮೂಲಭೂತ ಹಕ್ಕಾಗಬೇಕಿದ್ದ ವಸತಿಯನ್ನು ಒದಗಿಸುವುದರಲ್ಲಿ ಸರಕಾರಗಳು ಮತ್ತು ಸ್ಥಳೀಯ ಸಂಸ್ಥೆಗಳ ಸಂಪೂರ್ಣ ವೈಫಲ್ಯವೇ ಇದಕ್ಕೆ ಕಾರಣ.

ಇದಕ್ಕಾಗಿಯೇ ನಿರ್ಮಿಸಲಾದ ಹೌಸಿಂಗ್ ಬೋರ್ಡುಗಳು, ಅಭಿವೃದ್ಧಿ ಪ್ರಾಧಿಕಾರಗಳು ತಮ್ಮ ಕರ್ತವ್ಯಗಳನ್ನು ನೆರವೇರಿಸಲಿಲ್ಲ. ಮಾತ್ರವಲ್ಲ ಭ್ರಷ್ಟಾಚಾರದ, ಸ್ವಜನಪಕ್ಷಪಾತದ ಕೂಪಗಳಾದವು. ಬರಬರುತ್ತಾ ತಮ್ಮ ಕೆಲಸವನ್ನು ನಿಲ್ಲಿಸೇಬಿಟ್ಟವು. ಇದರ ಜತೆ 1990ರ ದಶಕದಲ್ಲಿ ಬೀಸಲಾರಂಭಿಸಿದ ಮಾರುಕಟ್ಟೆ, ಖಾಸಗೀಕರಣದ ಗಾಳಿಯಿಂದುಂಟಾದ ಪರಿಸ್ಥಿತಿಯನ್ನು ಖಾಸಗಿ ರೀಯಲ್ ಎಸ್ಟೇಟ್ ಉದ್ಯಮ ಪೂರ್ಣವಾಗಿ ಬಳಸಿಕೊಂಡಿತು. ಮನೆ, ನಿವೇಶನಗಳು ದುರ್ಲಭವಾದವು. ಬೆಲೆಗಳು ಗಗನಕ್ಕೇರಿದವು.

ಇಂತಹ ಪರಿಸ್ಥಿತಿಯ ಲಾಭವನ್ನು ಮಾಫಿಯಾ ಬಳಸಿಕೊಂಡು ಸರಕಾರಿ ಮತ್ತಿತರ ಜಾಗಗಳನ್ನು ಅತಿಕ್ರಮಿಸಿಕೊಂಡು ಮನೆ, ಅಪಾರ್ಟ್ ಮೆಂಟುಗಳನ್ನು ಕಟ್ಟಿ ಮಾರತೊಡಗಿದರು. ಇಂತಹ ಮನೆ, ಅಪಾರ್ಟ್ ಮೆಂಟುಗಳನ್ನು ಬಡವರು ಮಧ್ಯಮ ವರ್ಗದವರು ಖರೀದಿಮಾಡಿದರು. ಕೆಲವೆಡೆ ಅವರೇ ಇಂತಹ ನಿವೇಶನಗಳಲ್ಲಿ ತಾವೇ ಮನೆ ಕಟ್ಟಿಕೊಂಡರು. ಇದಲ್ಲದೆ ಕೆಲವು ಮನೆಗಳನ್ನು ಪರವಾನಿಗೆ ಇಲ್ಲದೆ ಕಟ್ಟಲಾಗಿದೆ. ಇಲ್ಲವೆ ತೆಗೆದುಕೊಂಡ ಪರವಾನಿಗೆಯಲ್ಲಿ ಕಟ್ಟಡ ನಿರ್ಮಾಣದ ಮೇಲಿದ್ದ (ಸುತ್ತ ಬಿಡಬೇಕಾದ ಜಾಗ, ನಿವೇಶನದಲ್ಲಿ ಮಹಡಿಗಳ ಮನೆಗಳ ಸಂಖ್ಯೆ ವಿಸ್ತೀರ್ಣ ಇತ್ಯಾದಿ) ನಿಯಮಗಳನ್ನು ದುಬಾರಿ ಬೆಲೆ ಮತ್ತು ಆವಶ್ಯಕತೆಗಳ ಒತ್ತಡದಿಂದ ಪಾಲಿಸಿಲ್ಲ. ಇಂತಹ ಲಕ್ಷಾಂತರ ಮನೆಗಳನ್ನು 'ಅನಧಿಕೃತ ಅಥವಾ 'ಕಾನೂನುಬಾಹಿರ' ಎಂದು ಕಾನೂನು ಪ್ರಕಾರ ಸರಕಾರ ಪರಿಗಣಿಸುತ್ತಿತ್ತು.

ಇಂತಹ ಮನೆಗಳನ್ನು ವಾಸಿಸುತ್ತಿರುವವರ ಮೇಲೆ, ಯಾವಾಗ ಮನೆಯನ್ನು ಕೆಡವಲಾಗುತ್ತದೋ ಎಂಬ ತೂಗುಗತ್ತಿ ತೂಗುತ್ತಿದ್ದು ಅದು ಸದಾ ಅವರನ್ನು ಕಾಡುತ್ತಿತ್ತು. ಇಂತಹ ಮನೆಯನ್ನು ಹೆಚ್ಚಾಗಿ ಅವರು ತಮ್ಮ ಜೀವನದ ಎಲ್ಲಾ ಉಳಿತಾಯವನ್ನು ಹಾಕಿ ಕಟ್ಟುತ್ತಿದ್ದರು ಅಥವಾ ಕೊಳ್ಳುತ್ತಿದ್ದರು. ಅವರು ಇಂತಹ ಮನೆಗಳಿಗೆ ತೆರಿಗೆಯನ್ನು ಕಟ್ಟಿರುತ್ತಿದ್ದರು. ಆದ್ದರಿಂದ ಇಂತಹ ಮನೆಗಳನ್ನು ಸಕ್ರಮಗೊಳಿಸಬೇಕು ಎಂಬ ಹಕ್ಕೊತ್ತಾಯ ವ್ಯಾಪಕವಾಗಿ ಬಂದಿತ್ತು. ಇದು ನ್ಯಾಯಬದ್ಧವಾದದ್ದೇ. ಇದನ್ನು ಕರ್ನಾಟಕ ಸರಕಾರ ಮನ್ನಿಸಿ 'ಕರ್ನಾಟಕ ನಗರ ಮತ್ತು ಗ್ರಾಮೀಣ ಯೋಜನಾ ಕಾಯ್ದೆ'ಗೆ ತಿದ್ದುಪಡಿಯನ್ನು ತಂದಿತ್ತು. ಈ ಕಾಯಿದೆಗೆ ಅನುಸಾರವಾಗಿ 2014 ಮೇ 28ರಂದು ರಾಜ್ಯ ಸರ್ಕಾರ ಈ ಕುರಿತು ಅಧಿಸೂಚನೆಯನ್ನು ಹೊರಡಿಸಿತ್ತು. ಇದು 'ಅಕ್ರಮ-ಸಕ್ರಮ ಯೋಜನೆ' ಎಂಬ ಜನಪ್ರಿಯ ಹೆಸರನ್ನು ಹೊಂದಿತ್ತು. ಆದರೆ ಈ ಕಾಯಿದೆ ತಿದ್ದುಪಡಿಯ ಸಿಂಧುತ್ವವನ್ನು ಪ್ರಶ್ನಿಸಿ ಮಂಗಳೂರು ಅಭಿವೃದ್ಧಿ ಕುರಿತಾದ ಸಿಟಿಜನ್ ಫೋರಂ, ಬೆಂಗಳೂರಿನ ಜೆ.ಪಿ.ನಗರ 7 ಮತ್ತು 8ನೇ ಹಂತದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ನಮ್ಮ ಬೆಂಗಳೂರು ಫೌಂಡೇಷನ್ ಸೇರಿ ಹಲವು ಸಂಘಟನೆಗಳು ಅರ್ಜಿಗಳನ್ನು ಸಲ್ಲಿಸಿದ್ದವು. ಈ ಅರ್ಜಿಯನ್ನು ಕೈಗೆತ್ತಿಕೊಂಡ ಹೈಕೋರ್ಟು ಈ ಕಾಯಿದೆಯ ಜಾರಿಗೆ ತಡೆಯಾಜ್ಞೆ ಕೊಟ್ಟಿತ್ತು. ಈ ಅರ್ಜಿಗಳ ಪೂರ್ಣ ವಿಚಾರಣೆಯ ನಂತರ ಡಿಸೆಂಬರ್ 15ರಂದು ಹೈಕೋರ್ಟು ರಾಜ್ಯ ಸರಕಾರದ 'ಅಕ್ರಮ-ಸಕ್ರಮ ಯೋಜನೆ'ಯ ಸಿಂಧುತ್ವವನ್ನು ಎತ್ತಿ ಹಿಡಿದು ತೀರ್ಪು ಕೊಟ್ಟಿದೆ. ಈ ತೀರ್ಪು ಸ್ವಾಗತಾರ್ಹ.

ಈ ಕಾಯಿದೆಯ ಪ್ರಕಾರ 2013ರ ಅಕ್ಟೋಬರ್ 19ಕ್ಕಿಂತ ಮುಂಚೆ ನಡೆದ ಭೂ ಬಳಕೆ ಮತ್ತು ಕಟ್ಟಡಗಳ ನಕ್ಷೆ ಉಲ್ಲಂಘನೆ, ನಿವೇಶನಗಳ ಅನಧಿಕೃತ ವಿಭಜನೆ, ಪರವಾನಗಿ ಪಡೆಯದೆ ನಿರ್ಮಾಣವಾದ ಹಾಗೂ ವಾಸಯೋಗ್ಯ ಪ್ರಮಾಣ ಪತ್ರ ಅಥವಾ ಖಾತಾ ಸಂಖ್ಯೆ ಹೊಂದಿದ ಕಟ್ಟಡಗಳ ಮಾಲೀಕರು ಇನ್ನು ಸರ್ಕಾರ ಪರಿಷ್ಕೃತ ಅಧಿಸೂಚನೆ ಹೊರಡಿಸಿದ ನಂತರ ನಿಗದಿತ ದಂಡ ತೆತ್ತು ತಮ್ಮ ಆಸ್ತಿಯನ್ನು ಕಾನೂನುಬದ್ಧ ಮಾಡಿಕೊಳ್ಳಬಹುದು. ಗ್ರಾಮೀಣ ಭಾಗದಲ್ಲಿ 4000 ಚದರಡಿ ವಿಸ್ತೀರ್ಣದವರೆಗಿನ ನಿವೇಶನದಲ್ಲಿ ಕಟ್ಟಿಕೊಂಡಿರುವ ಮನೆ ಸಕ್ರಮಗೊಳಿಸಲಾಗುವುದು. ಇದಕ್ಕೆ ವಿಸ್ತೀರ್ಣಕೆ ಅನುಸಾರವಾಗಿ 3 ಸಾವಿರ ರೂ.ವರೆಗೆ ದಂಡ ನಿಗದಿ ಮಾಡಲಾಗಿದೆ. ನಗರ ಪ್ರದೇಶದಲ್ಲಿ 1200 ಚದರಡಿಗೆ ವರೆಗಿನ ಮನೆ ಸಕ್ರಮಗೊಳಿಸಲಾಗುವುದು. ಶೇ.25 ನಿಯಮ ಉಲ್ಲಂಘನೆ ಮಾಡಿರುವ ವಾಣಿಜ್ಯ ಕಟ್ಟಡ ಮತ್ತು ಶೇ.50ರಷ್ಟು ನಿಯಮ ಪಾಲಿಸದಿರುವ ಅಕ್ರಮ ವಸತಿ ಕಟ್ಟಡಗಳನ್ನು ಸಕ್ರಮಗೊಳಿಸಲು ಕಾಯಿದೆಯಲ್ಲಿ ಅವಕಾಶವಿದೆ. ಈಗಾಗಲೇ 30 ಲಕ್ಷ ಅರ್ಜಿಗಳು ಬಂದಿವೆ ಎಂದು ಹೇಳಲಾಗಿದೆ. ಸಕ್ರಮಕ್ಕೆ ಅರ್ಜಿ ಹಾಕಲು ಕೊನೆಯ ದಿನವನ್ನು ಜನವರಿ 21ರ ವರೆಗೆ ವಿಸ್ತರಿಸಲಾಗಿದೆ.

ಈಗಾಗಲೇ ಚರ್ಚಿಸಿದಂತೆ ಬಡವರ ಮತ್ತು ಮಧ್ಯಮ ವರ್ಗದವರ ಮನೆಗಳನ್ನು ಸಕ್ರಮಗೊಳಿಸಲು ಸಕಾರಣಗಳಿವೆ. ಆದರೆ ವಾಣಿಜ್ಯ ಕಟ್ಟಡಗಳಿಗೆ ಅದನ್ನು ವಿಸ್ತರಿಸಬೇಕಾಗಿಲ್ಲ. ಬಡವರು ಅಕ್ರಮವಾಗಿ ಮನೆ ಕಟ್ಟಿಕೊಳ್ಳಬೇಕಾದ ಸನ್ನಿವೇಶ ನಿರ್ಮಿಸಿದ ರೀಯಲ್ ಎಸ್ಟೇಟ್ ಮಾಫಿಯಾಗಳನ್ನು ಉದ್ಯಮಿಗಳ ಅತಿಕ್ರಮಣಗಳನ್ನು ಸಕ್ರಮಗೊಳಿಸುವ ಅಗತ್ಯ ಇದೆಯೆ? ಇದೇ ಮಾನದಂಡವನ್ನು ಅನುಸರಿಸುವ ಅಗತ್ಯ ಇಲ್ಲ. ಇಂತಹ ರೀಯಲ್ ಎಸ್ಟೇಟ್ ಮಾಫಿಯಾ, ಉದ್ಯಮವೇ ಕಟ್ಟಿದ ಮನೆಗಳನ್ನು ಸಕ್ರಮಗೊಳಿಸುತ್ತಲೇ, ಮೂಲದಲ್ಲಿ ಅಕ್ರಮಗಳನ್ನು ಶಿಕ್ಷಿಸಬೇಕು ಅಥವಾ ಹೆಚ್ಚಿನ ದಂಡ ವಿಧಿಸಬೇಕು. ವಾಣಿಜ್ಯ ಕಟ್ಟಡಗಳಿಗೆ ಸಕ್ರಮ ಯೋಜನೆಯನ್ನು ವಿಸ್ತರಿಸಬಾರದು. ವಾಣಿಜ್ಯ ಕಟ್ಟಡಗಳಿಗೆ ಬೇರೆಯ ಮಾನದಂಡಗಳನ್ನು ಬಳಸಿ ಅಕ್ರಮ ಯಾವ ರೀತಿಯದ್ದು, ಅದಕ್ಕೆ ಮೂಲ ಕಾರಣ ಏನು ಎಂಬುದರ ಆಧಾರದ ಮೇಲೆ ಕಾನೂನು ಕ್ರಮಗಳನ್ನು ಕೈಗೊಳ್ಳಬೇಕು ಅಥವಾ ತೀವ್ರ ದಂಡ ವಿಧಿಸಬೇಕು.

ಅದೇ ರೀತಿಯಲ್ಲಿ ಅಕ್ರಮವಾಗಿ ಒತ್ತುವರಿ ಮಾಡಿಕೊಂಡು ಅದನ್ನು ಬೇರೆಯವರ ವಾಸಕ್ಕೆ ಬಾಡಿಗೆಗೆ ಕೊಟ್ಟು ದೊಡ್ಡ ಪ್ರಮಾಣದಲ್ಲಿ ವಾಣಿಜ್ಯಕ್ಕೆ ಬಳಸಿಕೊಂಡ ಪ್ರಕರಣಗಳನ್ನು ಪ್ರತ್ಯೇಕಿಸಬೇಕು. ಇಂತವರು ಅದು ತಮ್ಮ ವಾಸಕ್ಕೆ ಎಂದು ಘೋಷಿಸಿ ಸಕ್ರಮಗೊಳಿಸುವುದಕ್ಕೆ ಅವಕಾಶವಿರಬಾರದು. ಕೆರೆ ಕಾಲುವೆಗಳನ್ನು ಒತ್ತುವರಿ ಮಾಡಿದಲ್ಲಿ ಈಗಿನ ಕಾಯಿದೆ ಪ್ರಕಾರ ಸಕ್ರಮವಾಗುವುದಿಲ್ಲ. ಆದರೆ ಕಾನೂನು ಮೂಲಬಳಕೆಯ ಷರತ್ತುಗಳನ್ನು ಉಲ್ಲಂಘನೆಯನ್ನು ಸಕ್ರಮವಾಗಿಸುತ್ತದೆ. ಇಂತಹ ಹಲವು ಷರತ್ತುಗಳು ಪರಿಸರ, ನಗರದ ಸಮಗ್ರ ಯೋಜನೆಯ ದೃಷ್ಟಿಯಿಂದ ಅಗತ್ಯವಾಗಿರುತ್ತದೆ. ಗ್ರೀನ್ ಬೆಲ್ಟಿನಲ್ಲಿ ವಾಸದ ವಾಣಿಜ್ಯ ಕಟ್ಟಡಗಳನ್ನು ಕಟ್ಟುವುದು, ವಾಸದ ಪ್ರದೇಶದಲ್ಲಿ ವಾಣಿಜ್ಯ ಕಟ್ಟಡಗಳನ್ನು ಕಟ್ಟುವುದು ಮುಂತಾದ ಅಕ್ರಮಗಳನ್ನು ಸಹ ಸಕ್ರಮಗೊಳಿಸುವುದು ಸರಿಯಲ್ಲ.

ಸಮಗ್ರ ಯೋಜಿತ ಅಭಿವೃದ್ಧಿಗೆ ಅಗತ್ಯವಾದ ನಿವೇಶನದ ಮೂಲಬಳಕೆಯ ನಿರ್ಬಂಧಗಳು, ಕಟ್ಟಡದ ಮೇಲಿನ ನಿರ್ಬಂಧಗಳನ್ನು ಜಾರಿ ಮಾಡುವಲ್ಲಿ ನಿರ್ಲಕ್ಷ, ಭ್ರಷ್ಟಾಚಾರದಿಂದಾಗಿಯೂ ಅಕ್ರಮಗಳು ಭಾರಿ ಪ್ರಮಾಣದಲ್ಲಿ ಬೆಳೆದಿವೆ. ನಿರ್ಬಂಧಗಳು ವಾಸ್ತವಿಕವಾಗಿಸಿ ಸುಸಂಬದ್ದವಾಗಿಸಿ ಅವುಗಳನ್ನು ಇನ್ನು ಮುಂದೆಯಾದರೂ ಕಟ್ಟುನಿಟ್ಟಾಗಿ ಜಾರಿಗೆ ತರುವುದು ಅಗತ್ಯವಿದೆ.

ಅಕ್ರಮ-ಸಕ್ರಮ ಯೋಜನೆ ಸರಕಾರ ತಂದಿರುವುದೇ ರೀಯಲ್ ಎಸ್ಟೇಟ್ ಉದ್ಯಮ ಮತ್ತು ಮಾಫಿಯಾ ಒತ್ತಡದಿಂದಲೇ ಎಂದು ಹೇಳಲಾಗಿದೆ. ಕರ್ನಾಟಕದ ಮೂರು ಪಕ್ಷಗಳ ಶಾಸಕರಲ್ಲಿ ದೊಡ್ಡ ಸಂಖ್ಯೆಯಲ್ಲಿ ರೀಯಲ್ ಎಸ್ಟೇಟ್ ಉದ್ಯಮ ಮತ್ತು ಮಾಫಿಯಾಗಳನ್ನು ಪ್ರತಿನಿಧಿಸುವವರು ಇದ್ದಾರೆ. ಆದ್ದರಿಂದ ಬಡವರ ಮನೆಗಳನ್ನು ಸಕ್ರಮ ಮಾಡುತ್ತಲೇ ಸಾರಾಸಗಟು ಅಕ್ರಮ-ಸಕ್ರಮವನ್ನು ದೃಢವಾಗಿ ವಿರೋಧಿಸಿ ಒತ್ತಡ ಹಾಕಬೇಕಾಗಿದೆ.

ಕೊಡಗು: ಜೀವ ಹಿಂಡುವ ಜೀತದ ಬದುಕು: ದಿಡ್ಡಳ್ಳಿ ಆದಿವಾಸಿಗಳ ದಿಟ್ಟ ಹೋರಾಟ

ಎಸ್.ವೈ.ಗುರುಶಾಂತ್

ದಿಡ್ಡಳ್ಳಿ, ತಟ್ಟಳ್ಳಿ ಕೊಡಗು ಜಿಲ್ಲೆಯ ವಿರಾಜಪೇಟೆ ತಾಲೂಕಿನ ಗ್ರಾಮಗಳು. ನಾಗರಹೊಳೆ ಕಾಡಂಚಿನ ಆದಿವಾಸಿ ಹಾಡಿಗಳು. ಕಳೆದ 2016ರ ಡಿಸೆಂಬರ್ 7 ರಿಂದ ರಾಜ್ಯದಾದ್ಯಂತ ಸುದ್ದಿ ಮಾಡಿದ, ಪ್ರತಿಭಟನಾ ನಿರತ ಆದಿವಾಸಿಗಳು, ಹೋರಾಟಕ್ಕೆ ಬೆಂಬಲಿಸಿ ಬಂದು ಹೋಗುತ್ತಿದ್ದವರಿಂದ ಗಿಜಿಗಿಡುತ್ತಿದ್ದ ದಿಡ್ಡಳ್ಳಿ ಇದೀಗ ನೊಂದವರ ಎದೆಯಲ್ಲಿ ಆತಂಕ, ಆಕ್ರೋಶದ ಕಿಡಿ ಹೊತ್ತಿಸಿದೆ. ಜಿಲ್ಲಾಡಳಿತದ ಸೆಕ್ಷನ್ 144 ಕಲಮಿನಹೇರಿಕೆಯಿಂದಾದಮೌನವು ಪ್ರತಿಭಟನೆಯ ಕಿಚ್ಚನ್ನು ಕಾಯ್ದಿರಿಸಿದೆ.

ದಿಡ್ಡಳ್ಳಿಯ ಅರಣ್ಯ ಭೂಮಿಯಲ್ಲಿ ಆಶ್ರಯವನ್ನರಸಿ ನೆಲೆನಿಂತಿದ್ದ 577 ಆದಿವಾಸಿ ಕುಟುಂಬಗಳು ಕಟ್ಟಿ-ಕೊಂಡಿದ್ದ ಗುಡಿಸಲುಗಳನ್ನು ಪೊಲೀಸ್ ಪಡೆಯ ಲಾಠಿ, ಬೂಟುಗಳ ಕರ್ಕಶದಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ನೆಲಸಮಗೊಳಿಸಿದ್ದಾರೆ.

ಆಡಳಿತದ ದುರಾಕ್ರಮಣ

ಡಿಸೆಂಬರ್ 07ರಂದು ಬೆಳಗಿನಜಾವ ಸುಮಾರು 4 ಗಂಟೆಗೆ ಎರಡು ಜೆಸಿಬಿ ರಕ್ಕಸ ಯಂತ್ರಗಳು,ಠಳಾಯಿಸುವ ಮೀಸಲು ಪೊಲೀಸ್ ಪಡೆಗಳೊಂದಿಗೆ ದಿಡ್ಡಳ್ಳಿಗೆ ಬಂದ ಇಲಾಖೆ ಸಿಬ್ಬಂದಿ ಏಕಾಏಕಿ ಗುಡಿಸಲು ತಡಿಕೆಗಳನ್ನು ನೆಲಸಮಗೊಳಿಸ ತೊಡಗಿದ್ದಾರೆ. ಏನಾಗುತ್ತಿದೆ ಎಂದು ತಿಳಿಯುವ ಮೊದಲೇ ಹತ್ತಾರು ತಡಿಕೆಗಳು ನೆಲ ಕಚ್ಚಿವೆ. ಇದನ್ನು ತಡೆಯಲು ಪ್ರಯತ್ನಿಸಲಾಯಿತಾದರೂ



ಫಲಿಸಲಿಲ್ಲ. ಗುಡಿಸಲಿನ ಗೂಟಗಳಿಗೆ ಕಟ್ಟಿದ ತೊಟ್ಟಿಲಲ್ಲಿ ಮಲಗಿದ್ದ ಕಂದಮ್ಮವೊಂದು ಇನ್ನೇನು ಜೆಸಿಬಿ ಬಾಯಿಗೆ ತುತ್ತಾಗಿ ಬಿಡುವ ತಲ್ಲಣಕಾರಿ ಕೃತ್ಯದವರೆಗೆ,ಅಸಹಾಯಕ ಮಹಿಳೆಯ ಬೆತ್ತಲೆ ಪ್ರತಿಭಟನೆ ಮಾಡುವವರೆಗೆಖಾಕಿಗಳ ಕ್ರೌರ್ಯ ನಡೆದಿದೆ. ಹೀಗಾಗಿ ನಿರಾಯುದ್ಧರಾಗಿದ್ದ ಆದಿವಾಸಿಗಳ ಆಕ್ರೋಶ, ಹತಾಶೆ ಅಲ್ಲಿನ ಮುಖಂಡರಾದ ಜೆ.ಕೆ.ಮುತ್ತಮ್ಮ, ಸ್ವಾಮಿ ಬೆತ್ತಲೆಯಾಗಿ ಪ್ರತಿಭಟಿಸುವಂತೆ ಮಾಡಿದೆ. ಇವರನ್ನು ಲಾಠಿಗಳಿಂದ ಹೊಡೆಯಲಾಗಿದೆ. ಬಂಧಿಸಿ ಜೈಲಿಗೂ ತಳ್ಳಲಾಗಿದೆ. ಇಲ್ಲಿ ಬೆತ್ತಲಾದ್ದದ್ದು ಆದಿವಾಸಿಗಳಲ್ಲ, ಜನದ್ರೋಹಿ ಸರ್ಕಾರ.ದುರಾಕ್ರಮಣ ನಡೆಸಿದ ಜಿಲ್ಲಾಡಳಿತದ ಕ್ರಮಗಳು ಅಮಾನವೀಯ. ಆದರೂ ದಿಡ್ಡಳ್ಳಿಯ ಆದಿವಾಸಿಗಳು ಕದಲುವುದಿಲ್ಲ ಎಂದು ಅಲ್ಲೇ ಪ್ರತಿಭಟನಾ ಧರಣಿಗೆ ಇಳಿದಿದ್ದಾರೆ.

ದಾರುಣ ಕಥೆ-ವ್ಯಥೆ

ದಿಡ್ಡಳ್ಳಿ-ತಟ್ಟಳ್ಳಿ ಅರಣ್ಯ ಪ್ರದೇಶದಲ್ಲಿ ಜೇನು ಕುರುಬ, ಕಾಡು ಕುರುಬ, ಪಣಿ ಎರವ ಮುಂತಾದ ಆದಿವಾಸಿಗಳು ಹಲವಾರು ದಶಕಗಳಿಂದ ವಾಸ ಮಾಡುತ್ತಾ ಬಂದಿದ್ದಾರೆ. 1951ರಲ್ಲಿ ದಿಡ್ಡಳ್ಳಿ ಅರಣ್ಯದಲ್ಲಿ ಮೂರು-ನಾಲ್ಕು ಜೇನು ಕುರುಬ ಕುಟುಂಬಗಳು ಇದ್ದ ಬಗ್ಗೆ ಮಾಹಿತಿದೆ. ನಂತರ ಅದು ಆರು ಕುಟುಂಬಗಳಾಗಿದೆ. ಈಗ ಆ ಪರಿಸರದಲ್ಲಿ ಸುಮಾರು 40-50 ವರ್ಷಗಳಿಂದಲೂ ವಾಸ ಮಾಡುತ್ತಿದ್ದವರು ಈಗ ಸುಮಾರು 200 ರಷ್ಟು ಜನರಿದ್ದಾರೆ. ಈ ಪ್ರದೇಶದಲ್ಲಿ ಇರುವ ಆಶ್ರಮ ಶಾಲೆ ಸುಮಾರು 60 ವರ್ಷಗಳಿಗಿಂತಲೂ ಹಿಂದಿನದು. ತೀರಾ ಅರಣ್ಯದೊಳಗೆ ಇದ್ದ 6 ಕುಟುಂಬಗಳು ಕಾಡು ಪ್ರಾಣಿಗಳ ಹಾವಳಿಯಿಂದಾಗಿ ಆಶ್ರಮ ಶಾಲೆ ಹತ್ತಿರದ ಪ್ರದೇಶಕ್ಕೆ ಸ್ಥಳಾಂತರಿಸಲಾಗಿತ್ತಂತೆ. ಆದಿವಾಸಿಗಳಿದ್ದ ಪ್ರದೇಶಕ್ಕೆ ಅತಿಕ್ರಮವಾಗಿ ಬಂದ ಭೂಮಾಲೀಕರ ಒತ್ತುವರಿಯಿಂದಾಗಿ ಜಾಗ ಬಿಡಬೇಕಾಯ್ತು ಎಂಬುದು ಕೆಲ ಆದಿವಾಸಿಗಳ ಹೇಳಿಕೆ. ತೀರಾ ಇತ್ತೀಚೆಗೆ ಈ ಕೆಲ ಕುಟುಂಬಗಳಿಗೆ ಅರಣ್ಯ ಹಕ್ಕು ಕಾಯ್ದೆಯಡಿ ಭೂಮಿ ಮುಂತಾಗಿ ಪಡೆಯಲು ಸಾಧ್ಯವಾಗಿದೆ. ಇದಕ್ಕಾಗಿ ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯು ಸಹ ಹೋರಾಟ ನಡೆಸಿತ್ತು.

ಅಂದರೆ, ಈಗ ತೆರವುಗೊಳಿಸಲ್ಪಟ್ಟ ದಿಡ್ಡಳ್ಳಿಯ ಅರಣ್ಯ ಪ್ರದೇಶದಲ್ಲಿ 577 ಕುಟುಂಬಗಳು ನೆಲೆಸಿದ್ದು ಕಳೆದ 7 ತಿಂಗಳ ಅವಧಿಯಲ್ಲಿ. ಪರಿಶಿಷ್ಟ ಜಾತಿಗೆ ಸೇರಿದ 3-4 ಕುಟುಂಬಗಳಿದ್ದು ಉಳಿದಂತೆ ಎಲ್ಲರೂ ಬುಡಕಟ್ಟು ಸಮುದಾಯಗಳಿಗೆ ಸೇರಿದವರು. ಬಹುತೇಕ ಕೊಡಗಿನ ವಿವಿಧ ಕಾಫಿ ತೋಟಗಳಲ್ಲಿ ದುಡಿಯುವ ಪ್ಲಾಂಟೇಶನ್ ಕೂಲಿ ಕಾರ್ಮಿಕರು. ದಟ್ಟ ಕಾನನದ ನಡುವೆ ಸ್ವಚ್ಛಂದವಾಗಿ ವಾಸಿಸುತ್ತಿದ್ದ ಬುಡಕಟ್ಟು ಸಮುದಾಯಗಳು ಕಾಫಿ ತೋಟಗಳ ಬೇಲಿಯೊಳಗೆ ಬಂಧಿಯಾದದ್ದು ಚರಿತ್ರೆಯಲ್ಲಿನ ಧಾರುಣ ಕಥೆ.ಕೂಲಿಯಾಳು ಎಂದು ಕರೆಸಿಕೊಂಡರೂ ಜೀತದಾಳುಗಳಾದ ಇವರು ಮಾಲೀಕರು ನೀಡುವ 'ಲೈನ್‌ಮನೆಗಳಲ್ಲಿ' ವಾಸಿಸುವವರು. ಕೊಟ್ಟ

ಪುಟ 4 ಕ್ಕೆ

ಜನಶಕ್ತಿ ಪತ್ರಿಕೆಯ ಇಮೇಲ್ ವಿಳಾಸ ಬದಲಾಗಿದ್ದು ವರದಿ ಮತ್ತು ಚಿತ್ರಗಳನ್ನು janashakthi2007@gmail.com ಗೆ ಕಳುಹಿಸಿ, ದೂ: 080 23491114

ದಿಡ್ಡಳ್ಳಿ ಆದಿವಾಸಿಗಳ ದಿಟ್ಟ ಹೋರಾಟ......... ಪುಟ 3 ರಿಂದ

ಬಿಡಿಗಾಸು, ಹಿಡಿ ಅಕ್ಕಿ ಇವರ ಜೀವನಕ್ಕಾಧಾರ. ಕಾಫಿ-ಟೀ ತೋಟಗಳ ಉದ್ಯಮಗಳ ಕಾರ್ಮಿಕರಾಗಿದ್ದರೂ ವಾಸ್ತವದಲ್ಲಿ ಇವರ ಜೀವನ 'ಜೀತದಾಳು'ಗಳಂತೆ. ಇಂತಹ ತೋಟಗಳಲ್ಲಿ ಇವರ ತಾತ, ಅಪ್ಪ, ಅಮ್ಮ, ಒಡ ಹುಟ್ಟಿದವರು, ಬಳಿಕ ಇವರು ದುಡಿಯುತ್ತಲೇ ಬಂದಿದ್ದಾರೆ. ಇವರಿಗೆ ಕೊಡುವ ಕೂಲಿ ನಾಮಕಾವಸ್ತೆ. ಕಾರ್ಮಿಕರಾದರೂ ದುಡಿಮೆಯ ಅವಧಿ 8 ತಾಸುಗಳಲ್ಲ, 24 ತಾಸುಗಳು! ತೋಟಗಳಲ್ಲಿ ದುಡಿಯುವುದು, ಸಾವ್‌ಕಾರ್‍ರು ಸರಿ ಹೊತ್ತಿನಲ್ಲಿ ಕರೆದರೂ ಯಾವ ಕೆಲಸ, ಈಗೇಕೆ ಎಂದು ಕಿಮಕ್ ಅನ್ನದೇ ದುಡಿಯುವುದು, ಮನೆ ಕೆಲಸ ಇತ್ಯಾದಿಗಳ 'ಬಿಟ್ಟಿ ಚಾಕರಿ' ಬೇರೆ! ವಾಸ ಇರುವ ಪ್ರದೇಶದಿಂದ ಹೊರ ಕದಲುವಂತಿಲ್ಲ. ಖಾಯಿಲೆ, ಕಸಾಲೆ, ಮಕ್ಕಳಿಗೆ ಅನಾರೋಗ್ಯವೆಂದರೂ ಚಿಕಿತ್ಸೆಗೆ ಮಾಲೀಕರ ಅನುಮತಿಯಿಲ್ಲದೇ ಹೋಗುವಂತಿಲ್ಲ. ಮೇಸ್ತ್ರಿಗೆ ಹೇಳಿ ಹೋದರೂ ಸಾವ್‌ಕಾರ್‌ನಿಂದ ಒದೆ ತಿನ್ನುವುದಿಲ್ಲ ಎಂಬ ಗ್ಯಾರಂಟಿ ಏನಿಲ್ಲ.

ನಿತ್ಯ ನರಕ

ಒಡೆಯನ ಬೈಗುಳಿಗೆ ಮಿತಿಯಿಲ್ಲ. ಕೂಲಿ ಜೊತೆಗೆ ಒಂದು ಸೇರು ಅಕ್ಕಿ ಕೊಡುವುದಾಗಿ ಒಪ್ಪಂದವೇನೋ ಆಗಿರುತ್ತದೆ. ಅಕ್ಕಿ ಕಳಪೆ ಎಂದು ಗೊಣಗುವಂತೆಯೂ ಇಲ್ಲ. ಬಹುತೇಕವಾಗಿ ಇದೇ ಕಾರ್ಮಿಕರ ರೇಷನ್ ಕಾರ್ಡ್, ಓಟರ್ ಕಾರ್ಡ್, ಆಧಾರ್ ಕಾರ್ಡ್‌ಗಳೆಲ್ಲವೂ ಮಾಲೀಕರ ಕೈಯಲ್ಲೇ ಇರುತ್ತವೆ. ಅವರದ್ದೇ ರೇಷನ್ ಅಕ್ಕಿಯನ್ನು ಮಾರುಕಟ್ಟೆ ಬೆಲೆಯಂತೆ ಕೂಲಿಯಲ್ಲಿ ಮುರಿಯಲಾಗುತ್ತದೆ. ಕೆಲವು ಮಾಲೀಕರು ಕೂಲಿಗಳಿಗೆ ಕೊಡುವ ಒಂದು 'ಕ್ವಾರ್ಟರ್ ಸರಾಯಿ'ಯ ಕಾಸನ್ನೂ ವಾರದ ಕೂಲಿಯಲ್ಲಿ ಮುರಿದು ಕೊಳ್ಳುತ್ತಾರೆ. ಖಾಯಿಲೆಗೋ, ಮದುವೆಗೋ ಎಂದು ಸಾಲ ಮಾಡಿದರೆ 5 ಸಾವಿರವು 50 ಸಾವಿರವಾಗುವ ಪವಾಡವನ್ನು ಒಡೆಯರು ಮಾಡಿ ಶಾಶ್ವತ ಸಾಲದ ಬಲೆಯಲ್ಲಿ ಕಟ್ಟಿ ಹಾಕುತ್ತಾರೆ. ಇಂತಹವರು ಇಡೀ ಜೀವನ ದುಡಿದರೂ ಸಾಲ ಕರಗದ ಕಲ್ಲಾಗಿ ಬೆಳೆಯುತ್ತಲೇ ಇರುತ್ತದೆ. ಇಂತಹ 'ಜೀತದಾಳು'ಗಳು ತಮ್ಮ ಮಕ್ಕಳಿಗೆ ಬಿಟ್ಟು ಹೋಗುವ ಅಮೂಲ್ಯ ಆಸ್ತಿಯೇ ಹೊರಲಾಗದ ಸಾಲ ! ಒಂದು ವೇಳೆ ಇಲ್ಲಿಂದ ಹೊರಹೋಗಬೇಕೆಂದರೆ ಇವರನ್ನು ಕೆಲಸಕ್ಕೆ ಇಟ್ಟುಕೊಳ್ಳ ಬಯಸುವ ಮಾಲೀಕ ಹಳೇ ಮಾಲೀಕರ ಸಾಲ ಪೂರ್ಣ ಕಟ್ಟಬೇಕು.ಕೂಲಿಯಾಳುಗಳೇ ಹೋಗಬೇಕೆಂದರೆ 'ಚೀಟಿ'ತೆಗೆದುಕೊಂಡು ಬರಬೇಕು, ಈ ಕೂಲಿಯಾಳನ್ನು ಕ್ರಯಕ್ಕೆ ಕೂಗಿ ಕರೆದೊಯ್ದ ಪ್ರಸಂಗಗಳೂ ಇವೆ. ಅಂದರೆ ಮಾಲೀಕ ಬದಲಾದರೂ ಸಾಲದ ಹೊರೆ ಇಳಿಯದು ! ಬದುಕಿನಲ್ಲಿ ಬದಲಾವಣೆ ಬಾರದು.

ಇದಲ್ಲದೇ ಮಾಲೀಕರು, ಅವರ ಮಕ್ಕಳ ದೌರ್ಜನ್ಯಗಳು ವಿಧ ವಿಧವಾಗಿವೆ. ಮುಖ್ಯವಾಗಿ ಮಹಿಳೆ, ಯುವತಿಯರನ್ನು ಲೈಂಗಿಕವಾಗಿ ಶೋಷಿಸುವುದೂ ಒಳಗೊಂಡು ಹಲವು ಸ್ವರೂಪಗಳ ದೌರ್ಜನ್ಯಗಳು ನಡೆಯುತ್ತವೆ. ಒಂದು ವೇಳೆ ಎದುರಾಡಿದರೆ 'ಕೋವಿಯನ್ನು ತೋರಿಸಿ ಬೆದರಿಸುವ, ಇಲ್ಲವೇ ಗುಂಡು ಹೊಡೆದೇ ಸಾಯಿಸಿ, 'ಕಾಣೆಯಾಗಿದ್ದಾರೆ/ರೆ' ಎಂದು ದೂರು ಹಾಗೂ ಜಾಹೀರಾತು ನೀಡುವ ಪರಿಪಾಠಕ್ಕೆ ಕೊನೆಯಿಲ್ಲ. ಒಂದು ವೇಳೆ ಇಂತಹವರು ಹೇಗೋ ತಪ್ಪಿಸಿಕೊಂಡು ಓಡಿದರೋ ಅವರು ಬೇರೆ ಮಾಲೀಕನ ಬಳಿ ಸೇರದಂತೆ ಮಾಡಲಾಗುತ್ತದೆ.

ಇದು ಆದಿವಾಸಿಗಳ, ಅಲ್ಲಿನ ಪ್ಲಾಂಟೇಶನ್ ಕಾರ್ಮಿಕರು ಅನುಭವಿಸುವ ನಿತ್ಯ ನರಕ, ಎಲ್ಲೆಲ್ಲಿ ಸಂಘಟಿತರಾಗಿದ್ದಾರೋ ಅಲ್ಲಿ ಕೆಲವು ಸೌಲಭ್ಯ, ಕಠಿಣ ದುಡಿಮೆಯಲ್ಲಿ ಕೊಂಚ ಸಡಿಲತೆ ಇದೆ. ಇಲ್ಲವಾದೆಡೆ ನರಕವಾಸ !

ಇಂತಹ ನರವಾಸದ ಹಿಂಸೆಯಿಂದ ಪಾರಾಗುವ ಪ್ರಯತ್ನ, ಸ್ವತಂತ್ರ ಕೂಲಿಗಳಾಗಿ ಬದುಕುವ ಒತ್ತಾಸೆ ಆದಿವಾಸಿ-ಕಾರ್ಮಿಕರಲ್ಲಿ ಮೊಳೆತಿದೆ. ಜೀತದ ಬದುಕಿನಿಂದ ಕನಿಷ್ಠ ಪಾರಾಗಿ ಬದುಕಲು ಬಯಸುವ ಅವರ ಹಂಬಲಕ್ಕೆ ಇಂಬು ಕೊಟ್ಟಿದ್ದು ಡಿವೈಎಫ್‌ಐ ನೇತೃತ್ವದಲ್ಲಿ ನಿವೇಶನ ಹೋರಾಟ. ಕಳೆದ ಸುಮಾರು 8 ವರ್ಷಗಳ ಹಿಂದಿನಿಂದ ಡಿವೈಎಫ್‌ಐ, ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ, ಪ್ಲಾಂಟೇಶನ್ ಕಾರ್ಮಿಕರ ಸಂಘ- ಕೊಡಗು ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್(ಸಿಐಟಿಯು), ಸಿಪಿಐ(ಎಂ) ಇಂತಹ ಹೋರಾಟಗಳನ್ನು ಸಂಘಟಿಸಿವೆ. ಅಲ್ಲಿರುವ ಬಹುತೇಕ ಎನ್.ಜಿ.ಓ ಗಳದ್ದು ನೆಪ ಮಾತ್ರದ ಸೇವೆ. ಈ ಹೋರಾಟಗಳು ಕೊಡಗು ಜಿಲ್ಲೆಯ ತೋಟ ಕಾರ್ಮಿಕರ ನಡುವೆ, ವಿಶೇಷವಾಗಿ 'ಸ್ವಂತ ಮನೆಯೆಂಬುದು ಜೀತದ ನರಕದಿಂದ ಬಿಡುಗಡೆ' ಎಂಬ ನಮ್ಮಗಳ ಆಗ್ರಹ – ಆದಿವಾಸಿ–ಬುಡಕಟ್ಟು ಸಮುದಾಯಗಳಲ್ಲಿ ಜಾಗೃತಿಯನ್ನು ಉಂಟು ಮಾಡಿರುವುದರಲ್ಲಿ ಅನುಮಾನವೇ ಇಲ್ಲ. ಹೀಗಾಗಿ ಕೊಡಗಿನ ಆದಿವಾಸಿಗಳು ವಿವಿಧ ಹಂತಗಳ ಹೋರಾಟಗಳಲ್ಲಿ ಭಾಗವಹಿಸುವುದು ಗಮನಾರ್ಹವಾಗಿ ಹೆಚ್ಚಿದೆ.

ವಂಚನೆಗಳು

ದಿಡ್ಡಳ್ಳಿ ಅರಣ್ಯ ಪ್ರದೇಶದಲ್ಲಿ ನೆಲೆಗಾಗಿ ಬೀಡು ಬಿಟ್ಟಿರುವ ಆದಿವಾಸಿಗಳು, ಸಣ್ಣ ಪ್ರಮಾಣದಲ್ಲಿರುವ ದಲಿತರು ಬಯಸುತ್ತಿರುವುದು ನಿತ್ಯ ನರಕದಿಂದ ಪಾರಾಗಿ, ಒಂದು ಸ್ವಂತ ಮನೆ ಮಾಡಿಕೊಂಡರೆ ಬೇಕಾದ ಕಡೆ ಕೂಲಿಗೆ ಹೋಗಬಹುದು ಎಂಬ ಸ್ವಾತಂತ್ರ್ಯದ ಕನಸಿನಿಂದಲೇ. ಈ ಸ್ವತಂತ್ರ ಭಾರತದಲ್ಲಿ ಈಗಲೂ ಆದಿವಾಸಿಗಳಿಗೆ 'ಹಕ್ಕು ಕರುಣಿಸುವ' ಹಲವಾರು ಕಾಯ್ದೆಗಳಿದ್ದರೂ ಅದರ ಪ್ರಯೋಜನ – ಫಲ ಮಾತ್ರ ಸಿಕ್ಕ ಉದಾಹರಣೆಗಳು ಬೆರಳೆಣಿಕೆ ಹನಿಗಳು ಮಾತ್ರ, ಹಕ್ಕು ವಂಚಿತರ ಸಂಖ್ಯೆ ಸಾಗರದಂತೆ. ಹಕ್ಕು ಪಡೆಯಲು ಮುಂದಾದರೆ ನಂಬಿಸಿ, ವಂಚಿಸುವ ಆಟಗಳೇ ಎಲ್ಲೆಲ್ಲೂ. ದಿಡ್ಡಳ್ಳಿಯಲ್ಲೂ ಆಗಿರುವುದು ಅದೇ!

ಇತ್ತೀಚಿಗೆ ಗುಡಿಸಲು ತಡಿಕೆ ಹಾಕಿಕೊಂಡಿದ್ದ ದಿಡ್ಡಳ್ಳಿ ಪ್ರದೇಶ 'ಅದು ರಕ್ಷಿತ ಅರಣ್ಯ ವಲಯಕ್ಕೆ ಬರುತ್ತದೆ. ಹಾಗಾಗಿ ಅಲ್ಲಿ ಇವರಿಗೆ ಕೊಡಲು ಅಸಾಧ್ಯ' ಎನ್ನುತ್ತದೆ ಅರಣ್ಯ ಇಲಾಖೆ ಅರ್ಥಾತ್ ಕರ್ನಾಟಕ ಸರಕಾರ. ವಿರಾಜಪೇಟೆ ತಾಲ್ಲೂಕಿನ ಈ ಪ್ರದೇಶ ತಿತಿಮತಿ ಅರಣ್ಯ ವಲಯಕ್ಕೆ ಸೇರಿದ 'ದೇವ ಮಾಚ್ಚಿ ರಕ್ಷಿತ ಅರಣ್ಯ' ಇದು. ಇದರ ವಿಸ್ತೀರ್ಣ 3740.68 ಎಕರೆ. ಇದರಲ್ಲಿ ಸರ್ವೆ ನಂ : 317/1ಪಿನಲ್ಲಿದ್ದ ಜಾಗದಲ್ಲಿಯೇ ಈ 577 ಜನ ಗುಡಿಸಲುಗಳನ್ನುನಿರ್ಮಿಸಿಕೊಂಡಿದ್ದರು.ಇದುರಕ್ಷಿತಾರಣ್ಯಕ್ಕೆ ಒಳಪಡುವುದರಿಂದ ಅಲ್ಲಿ ವಾಸ ಅಕ್ರಮ ಎಂಬುದು ಅರಣ್ಯ ಇಲಾಖೆ ವಾದ. ಆದರೆ ಪಹಣಿ ಪತ್ರದಲ್ಲಿ ಅದು 'ಅರಣ್ಯ ಪೈಸಾರಿ' ಅಂತಾ ನಮೂದಾಗಿದ್ದುಹಿಂದೊಮ್ಮೆ ಅರಣ್ಯ ಇಲಾಖೆಗೆ ಕಂದಾಯ ಇಲಾಖೆ ಭೂಮಿ ನೀಡಿರುವುದರಿಂದ ಅದು ಪೈಸಾರಿ ಎಂದಿದೆ, ಹಾಗಾಗಿ ಈಗ ಕಂದಾಯ ಇಲಾಖೆ ತನ್ನ ಭೂಮಿಯನ್ನು ವಾಪಸು ಪಡೆದು ಹಂಚಬಾರದೇಕೆ ಎಂಬುದು ಹೋರಾಟಗಾರರ ವಾದ. 'ಪೈಸಾರಿ ಎಂಬುದು ಸರಕಾರಿ ಜಮೀನು ಎಂಬುದಕ್ಕೆ ಬಳಸಲಾಗುತ್ತದೆ ಹೊರತು ಕಂದಾಯದ್ದಲ್ಲ, ಇದಕ್ಕೆ ಕನಿಷ್ಠ ನೂರು ವರುಷಗಳ ದಾಖಲೆಗಳಿವೆ' ಎನ್ನುತ್ತಾರೆ ಅಧಿಕಾರಿಗಳು. ಈಗಾಗಲೇ ಆ ಜಾಗದಿಂದ ಆದಿವಾಸಿಗಳನ್ನು ಖಾಲಿಮಾಡಿಸಿದ ಬಳಿಕ ಸುಮಾರು 4 ಅಡಿಗಳಷ್ಟು ಅಗಲದಲ್ಲಿ ಟೆಂಚ್ ಕಾಲುವೆ ತೋಡಿಸಿ, ರಸ್ತೆಯಿಂದ ಆ ಜಾಗಕ್ಕೆ ಯಾರೂ ದಾಟಲಾಗದಂತೆ ಮಾಡಲಾಗಿದೆ.ಕಾವಲು ಕಾಯಲಾಗುತ್ತಿದೆ ಮತ್ತು ಅಲ್ಲಿ ಗಿಡಗಳನ್ನು ನೆಡಲಾಗುತ್ತಿದೆ. ಆದರೆ ಧರಣಿ ನಿರತ ಆದಿವಾಸಿಗಳು ಅಲ್ಲೇ ಭೂಮಿಬೇಕು 'ನಂಗ ಬದುಕಿದರೂ ಸತ್ತರೂ ಇಲ್ಲೇ' ಎನ್ನುವ ಜೇನು ಕುರುಬ ಸಮುದಾಯಕ್ಕೆ ಸೇರಿದ ಅನಿತಾಳ ಆಗ್ರಹ ಎಲ್ಲಾ ಆದಿವಾಸಿಗಳದ್ದೂ ಆಗಿದೆ. ಆದರೆ 'ಈ ಭೂಮಿ ಕೊಡಲು ಅನೇಕ ಕಾನೂನು ತೊಡಕುಗಳಿವೆ. ಒಂದು ವೇಳೆ ಕೊಟ್ಟವೆಂದರೂ ಅದು ನ್ಯಾಯಾಲಯದಲ್ಲಿ ಊರ್ಜಿತವಾಗದೇ ಪುನಃ ಆದಿವಾಸಿಗಳು ಬೀದಿಪಾಲಾದಾರು, ಅದಕ್ಕಾಗಿ ಪರ್ಯಾಯ ಪಡೆಯಬೇಕು' ಎನ್ನುತ್ತಾರೆ ಅಧಿಕಾರಿಗಳು.

ಹಕ್ಕು ಪ್ರತಿಪಾದನೆ

ಈ ಪ್ರಶ್ನೆಯ ಸುತ್ತ ಗಟ್ಟಿಯಾದ ವಾದ ಮಾಡಲು ಹೋರಾಟಗಾರರು ಸಿದ್ಧರಿದ್ದಾರೆ, ಸಿದ್ಧರಾಗುತ್ತಿದ್ದಾರೆ. ಆದ್ದರಿಂದಲೇ 2016ರ ಡಿಸೆಂಬರ್ 23ರಂದು ಮುಖ್ಯಮಂತ್ರಿಗಳ ನಿರ್ದೇಶನದಂತೆ ದಿಡ್ಡಳ್ಳಿಗೆ ಭೇಟಿ ನೀಡಿ, ಉನ್ನತ ಅಧಿಕಾರಿಗಳು ಮತ್ತು ಹೋರಾಟಗಾರರೊಂದಿಗೆ ಮಡಿಕೇರಿಯಲ್ಲಿ ಸಭೆ ನಡೆಸಿದ ಸಮಾಜ ಕಲ್ಯಾಣ ಸಚಿವ ಹೆಚ್.ಆಂಜನೇಯ ರವರೊಂದಿಗೆ ಒಪ್ಪಂದವಾಗಿದೆ. ಅದರಂತೆ ಎಲ್ಲಾ ದಾಖಲೆಗಳನ್ನೂ ಸಂಗ್ರಹಿಸಿ ಉಭಯತ್ರರರು ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ಕಂದಾಯ, ಅರಣ್ಯ, ಸಮಾಜಕಲ್ಯಾಣ ಸಚಿವರೂ, ಇಲಾಖಾ ಪ್ರಧಾನ ಕಾರ್ಯದರ್ಶಿಗಳೂ ಸೇರಿ ಈ ಪ್ರದೇಶವನ್ನೂ ಕಂದಾಯ ಇಲಾಖೆ ಪಡೆದು ಹಂಚಲು ಇರುವ ಸಾಧ್ಯತೆಗಳನ್ನು ಚರ್ಚಿಸಲಿದೆ. ಇಂತಹ ಪ್ರಶ್ನೆ ಕೇವಲ ದಿಡ್ಡಳ್ಳಿಗೆ ಮಾತ್ರವಲ್ಲ, ಕರ್ನಾಟಕ ರಾಜ್ಯದಲ್ಲಿಯೂ ಗಂಭೀರವಾಗಿ ಎದ್ದು ಬರುತ್ತಿದ್ದು ಒಂದು ಖಚಿತ ನಿಲುವಿಗೆ ಬರಲೇಬೇಕಿದೆ.

ದಿಡ್ಡಳ್ಳಿಯ ಭೂಮಿಗೆ ಇನ್ನಷ್ಟು ಕೆಲವು ಸಮಸ್ಯೆಗಳು, ಕಾನೂನು ತೊಡಕುಗಳು, ಮಿತಿಗಳೂ ಇವೆಯನ್ನಲಾಗುತ್ತಿದೆ. ಮೊದಲನೆಯದಾಗಿ ಅದು ಅರಣ್ಯದಂಚಿನ 'ಬಫರ್ ಜೋನ್', ಕಸ್ತೂರಿ ರಂಗನ್ ವರದಿ ವ್ಯಾಪ್ತಿಯ ಅರಣ್ಯ ಭೂಮಿ, ಜೀವ ವೈವಿಧ್ಯತೆಯ ತಾಣದೊಳಗಿನ ಪ್ರದೇಶ – ಹೀಗೆ ಅಡ್ಡಿಗಳು ಸರತಿ ಸಾಲುಗಟ್ಟಿವೆ !

ಅದರಲ್ಲೂ ಈ ನೆಲದ ಮಕ್ಕಳಾದ ಆದಿವಾಸಿ–ಬುಡಕಟ್ಟು ಸಮುದಾಯಗಳು ಭೂಮಿ ಹಕ್ಕು ಕೇಳ ತೆ-ಊಡಗಿದಂತೆ ಮತ್ತಷ್ಟು ಆಕ್ಷೇಪಗಳು ಸೇರಿಕೊಳ್ಳುತ್ತವೆ. ಇಲ್ಲಿರುವ ಬಹುತೇಕರು ವಿವಿಧ ಕಡೆಗಳಿಂದ, ತೋಟ ಕಾರ್ಮಿಕರಾಗಿದ್ದವರಾಗಿ ಬಂದಿರುವುದರಿಂದ ಈಗಿನ ಅರಣ್ಯ ಹಕ್ಕುಗಳ ಕಾಯಿದೆ 2006 ರನ್ವಯ ಹಕ್ಕುಗಳು ಪ್ರಾಪ್ತವಾಗುವುದಿಲ್ಲ ಎಂದು ಹೇಳಲಾಗಿದೆ.

ಹಾಗಾಗಿಯೇ ಈ ಆದಿವಾಸಿ–ದಲಿತ–ಸಮುದಾಯಗಳಿಗೆ ಪರ್ಯಾಯ ಜಾಗದ ವ್ಯವಸ್ಥೆ ಮಾಡಲು ಸಿದ್ಧವಿರುವುದಾಗಿ ಸರಕಾರ ಹೇಳಿದೆ. ಅದಕ್ಕಾಗಿ ಯಾವುದೇ ವಿವಾದಗಳಿಲ್ಲದ, ದುಡಿಮೆಯ ಅವಕಾಶಗಳು ಹೆಚ್ಚಿರುವ, ನರಕದ ಜೀವನದಿಂದ ಸಂಪೂರ್ಣ ಬಿಡುಗಡೆ ತರುವ ಪ್ರದೇಶಗಳನ್ನು ಹುಡುಕಿ ತರಲು ಸಮಾಜಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಮಣಿವಣ್ಣನ್ ಹಾಗೂ ಜಿಲ್ಲಾಧಿಕಾರಿ ಡಿಸೋಜಾ ರವರ ನೇತೃತ್ವದ ಒಂದು ಉಪ ಸಮಿತಿ ರಚಿಸಲಾಗಿದ್ದು, ವರದಿ ನೀಡಲು 1 ತಿಂಗಳ ಗಡುವು ನಿಗದಿಯಾಗಿದೆ. ದುರ್ವತನೆ ತೋರಿದ ಅಧಿಕಾರಿಗಳ ಮೇಲೆ ಕ್ರಮಕ್ಕೂ ಒತ್ತಾಯಿಸಲಾಗಿದೆ.

ಅಲ್ಲಿಯವರೆಗೆ ಈಗಿರುವ ದಿಡ್ಡಳ್ಳಿ ಶಾಲೆ ಎದುರಿನ ಮೈದಾನದಲ್ಲಿ ವಸತಿ, ಆಹಾರಕ್ಕೆ ವ್ಯವಸ್ಥೆ ಮಾಡಲು ನಿರ್ಧರಿಸಲಾಗಿದೆ. ಹಾಕಿರುವ ಮೊಕದ್ದಮೆಗಳನ್ನ ಹಿಂಪಡೆಯಲು ಆಗ್ರಹಿಸಿಲಾಗಿದೆ. ಇದಕ್ಕೆಲ್ಲಾ, ಸರಕಾರ ಬದ್ಧವಾಗಿರುತ್ತದೆಯೆಂದು ಭಾವಿಸಲಾಗಿದೆ.

ಇಲ್ಲಿ ಬರುವ ಪ್ರಶ್ನೆ : ಇದು ರಕ್ಷಿತ ಅರಣ್ಯ ಭೂಮಿ ಎಂಬುದು ಅರಣ್ಯ ಇಲಾಖೆಗೆ ತಿಳಿದಿರಲಿಲ್ಲವೇ! ತಿಳಿದಿದ್ದರೆ ಯಾಕೆ ಆರಂಭದಲ್ಲೇ (6 ತಿಂಗಳ ಮೊದಲು) ಪರ್ಯಾಯ ಕಲ್ಪಿಸಬಾರದಿತ್ತು ? ಈ ಕೆಲ ವಿದ್ಯಾಮಾನಗಳನ್ನು ಗಮನಿಸಿದರೆ ಅರಣ್ಯ ಇಲಾಖೆ ಅಧಿಕಾರಿಗಳು ಅಮಾಯಕರಿಂದ ಹಣ ಕಿತ್ತುಕೊಂಡಿದ್ದಾರೆ.ನಿವೇಶನ ಕೊಡುವ ಆಸೆ ಚಿಗುರುವಂತೆ ವರ್ತಿಸಿದ ವಂಚನೆ ಸ್ಪಷ್ಟವಾಗಿ ಕಾಣುತ್ತದೆ. ಆದಿವಾಸಿ ಪ್ರಮುಖರಾದ ಮುತ್ತಮ್ಮ, ಅಪ್ಪಾಜಿ ಯವರೇ ಮಾಧ್ಯಮದೆದುರು ಹೇಳುವಂತೆ 6.80 ಲಕ್ಷ ರೂ.ಗಳನ್ನು ಲಂಚವಾಗಿ ನೀಡಲಾಗಿದೆಯಂತೆ ! ಜನರ ಹತಾಶೆಯನ್ನೇ ಬಳಸಿ ಅಕ್ರಮ ಹಣದ ಬೇಡಿಕೆ, ನೀಡಿಕೆ, ಪಡೆಯುವಿಕೆಯ ಒಟ್ಟು ಪ್ರಕ್ರಿಯೆಯೇ ಅಪರಾಧ. ಆದಿವಾಸಿಗಳ ಹೆಸರಿನಲ್ಲಿ ನಡೆಯುವ ಈ ವ್ಯವಹಾರ ಯಾರೇ ಮಾಡಿದ್ದರೂ ಖಂಡನಾರ್ಹ. ಆದಿವಾಸಿಗಳಿಗೆ ಸಿಗಬೇಕಾದದ್ದು ಜನ್ಮಸಿದ್ಧ ಹಕ್ಕುಗಳೇ ಹೊರತು ಭಿಕ್ಷೆಯಲ್ಲ. ಇದಕ್ಕೆ ಹೋರಾಟವೇ ನೇರ ಮಾರ್ಗ. ಅಡ್ಡ ದಾರಿಗಳಿಲ್ಲ, ಅಲ್ಲ.

ದೌರ್ಜನ್ಯ ಎದುರಿಸಿ ದಿಟ್ಟ ಹೋರಾಟ

ಆದಿವಾಸಿಗಳನ್ನು ಏಕಾಏಕಿ ಧಾಳಿ ನಡೆಸಿ ತೆರವುಗೊಳಿಸಿದ್ದನ್ನು ಮತ್ತು ಆ ಸಂದರ್ಭಕ್ಕೆ ಪ್ರತಿರೋಧ ತೋರಿದವರ ಮೇಲೆ ಪೋಲೀಸರು ಅಮಾನುಷವಾಗಿ ಹಲ್ಲೆ ಮಾಡಿದ್ದನ್ನು ಖಂಡಿಸಿ, ಅವರ ನ್ಯಾಯಯುತ ಹೋರಾಟಕ್ಕೆ ಬೆಂಬಲವನ್ನು ಅನೇಕ ಪ್ರಗತಿಪರರು ಸೂಚಿಸಿದ್ದಾರೆ. ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ, ಸಿಐಟಿಯುನ ಸಂಗಾತಿಗಳು ಕೂಡಲೇ ತೆರಳಿ, ಆ ಪ್ರದೇಶದಿಂದ ಜನ ಕದಲದಂತೆ, ಧರಣಿ ನಡೆಸುವಂತೆ ಮಾಡಿದ್ದಾರೆ. ನಂತರ ದಲಿತ ಸಂಘಟನೆಗಳು, ಅಲ್ಪಸಂಖ್ಯಾತರು, ಭೂಮಿ ಮತ್ತು ವಸತಿ ಹಕ್ಕು ವಂಚಿತರ ಹೋರಾಟ ಸಮಿತಿ ಒಳಗೊಂಡು ವಿವಿಧ ಸಂಘಟನೆಗಳು, ಪ್ರಗತಿಪರರು ಬೆಂಬಲಿಸಿದ್ದಾರೆ.

ಸಿನಿಮಾ ಯುವ ನಟ ಚೇತನ್ ದಿನವಿಡೀ ಧರಣಿಯಲ್ಲಿ ಭಾಗವಹಿಸಿದ್ದಾರೆ. ಹೋರಾಟದಲ್ಲಿ ಸಕ್ರಿಯವಾಗಿರುವ ಹಿರಿಯರಾದ ಎ.ಕೆ.ಸುಬ್ಬಯ್ಯ, ಡಾ॥ವಿಜಯಾ, ಸಿರಿಮನೆ ನಾಗರಾಜ್, ನೂರ್ ಶ್ರೀಧರ್, ನಿರ್ವಾಣಪ್ಪಮುಂತಾದವರು ಇದ್ದಾರೆ. ರಾಜ್ಯಾದ್ಯಂತ ವ್ಯಕ್ತಗೊಂಡ ಎಲ್ಲರ ಸಕ್ರಿಯ ಬೆಂಬಲಿಸುವಿಕೆ, ಹೋರಾಟ ನಿರತ ಆದಿವಾಸಿಗಳಿಗೆ ಬಲ ತಂದಿದೆ. ಸರಕಾರದ ಮೇಲೆ ಒತ್ತಡವೂ ಸೃಷ್ಟಿಸಿದೆ. ಟಿ.ವಿ. ಪತ್ರಿಕೆಗಳು, ಸಾಮಾಜಿಕ ಮಾಧ್ಯಮಗಳ ಕವರೇಜ್ ರಾಜ್ಯದಲ್ಲಿ ಸಾರ್ವಜನಿಕರ ಗಮನ ಸೆಳೆಯುವಂತೆ ಮಾಡಿವೆ. ಆದಿವಾಸಿಗಳ ಪ್ರಶ್ನೆ ಪ್ರಾದಾನ್ಯತೆ ಪಡೆದು, ಸರಕಾರದ ಸಕಾರಾತ್ಮಕ ಪ್ರತಿಕ್ರಿಯೆಯಿಂದಹೋರಾಟ ಗೆಲ್ಲುವ ವಿಶ್ವಾಸ ಹೆಚ್ಚಿಸಿದೆ.

ಸವಾಲು

ಈ ಹೋರಾಟ ವಿಭಿನ್ನ ಪ್ರತಿಕ್ರಿಯೆಗಳನ್ನೂ ಕೊಡಗಿನಲ್ಲಿ ಸೃಷ್ಟಿಸಿದೆ. ಸಹಜವಾಗಿ ಪ್ಲಾಂಟೇಷನ್‌ಗಳ ಮಾಲೀಕರು, ಸ್ಥಾಪಿತ ಹಿತಾಸಕ್ತಿಗಳು ನಕಾರಾತ್ಮಕವಾಗಿ ಪ್ರತಿಕ್ರಿಯಿಸಿದ್ದಾರೆ. 'ಕೊಡಗಿನಲ್ಲಿ ಭೂಮಿ ಎಲ್ಲಿದೆ? ಆದಿವಾಸಿಗಳಿಗೇಕೆ ಭೂಮಿ? ಇಲ್ಲಿ ನಕ್ಸಲ್‌ವಾದ ಹಬ್ಬಿಸಲಾಗುತ್ತಿದೆ.! ನಮ್ಮ ಭೂಮಿ ಕಿತ್ತು ಆದಿವಾಸಿಗಳಿಗೆ ನೀಡುವಿರೋ ನೋಡ್ಕೊಳ್ತೀವಿ' ಮುಂತಾಗಿ ಓತಪ್ರೋತವಾಗಿ ಈ ಶಕ್ತಿಗಳು ಅಬ್ಬರಿಸಿ, ಬೆದರಿಸುತ್ತಿವೆ. ಕೂಲಿಗಳಾಗಿ, ಬಿಟ್ಟಿ ಚಾಕರಿ ಮಾಡಿಕೊಂಡಿರುವ ಆದಿವಾಸಿಗಳಲ್ಲಿ ಜಾಗೃತಿ ಮೂಡಿದರೆ ಹೇಗೆ? ಎಂಬ ಪಾಳೇಗಾರಿ ಯಜಮಾನಿಕೆಯ ಪ್ರವೃತ್ತಿ ಇಲ್ಲಿದೆ. ಸರಕಾರದ ಜಮೀನು ತಾವು ಎಷ್ಟು ಬೇಕಾದರೂ ಒತ್ತುವರಿ ಮಾಡಿಕೊಂಡರೂ ಅದು ನ್ಯಾಯ, ಹಕ್ಕು. ಆದರೆ ಒಂದು ಸಣ್ಣ ತುಂಡು ಭೂಮಿ ಮನೆ ಕಟ್ಟಲು ಕೇಳಿದರೆ, ಕೊಟ್ಟರೆ ಅದು ಘೋರ ಅಪರಾಧ ಎಂದು ಭಾವಿಸುವವರಿಗೆ ಮಾನವೀಯತೆ ಎಲ್ಲಿಂದ ಇರಬೇಕು?

ವ್ಯಾಪಕ ಬೆಂಬಲ

ಇಲ್ಲಿ ಜಿಲ್ಲೆಯಲ್ಲಿ ಸಿಪಿಐ(ಎಂ), ಸಿಪಿಐ, ಸಿಪಿಐ(ಎಂ–ಎಲ್) ಪಕ್ಷಗಳನ್ನು ಹೊರತು ಪಡಿಸಿದರೆ ಉಳಿದ ಬಹುತೇಕ ಪಕ್ಷಗಳದ್ದು ಡಬಲ್ ಸ್ಟಾಂಡರ್ಡ್ ಆಟಗಳು.ನಿಮ್ಮೊಂದಿಗೆ ಇದ್ದೇವೆ ಎಂದು ಹೇಳುತ್ತಾ ಹಲವು ಬಾರಿ ಭೇಟಿ ನೀಡಿದ ಬಿಜೆಪಿ ಶಾಸಕರು, ನಾಯಕರ ಜನರನ್ನು ಎತ್ತಿ ಕಟ್ಟಿ ಕುಮ್ಮಕ್ಕು ನೀಡಿದ್ದಾರೆ. ಮಾತ್ರವಲ್ಲ, ನಟ ಚೇತನ್ ಹೇಳಿದಂತೆ 'ಬಿಜೆಪಿ, ಕಾಂಗ್ರೆಸ್, ಜೆಡಿಎಸ್‌ಗಳ ರುಂಡಾ ಬೇರೆ ಬೇರೆ. ಅಜೆಂಡಾ ಒಂದೇ' ಎಂಬುದು ಆದಿವಾಸಿಗಳ ಪಾಲಿಗೆ ಅನುಭವಕ್ಕೆ ಬರುತ್ತಿದೆ. ಈ ನಡುವೆ 19ರಂದು ಉಸ್ತುವಾರಿ ಸಚಿವರೊಂದಿಗೆ ಮಾತುಕತೆಯಾದ ಬಳಿಕ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಬಂದು ಹೋದ ನಂತರ 144ನೇ ಕಲಮು ಹೇರಿ, 'ಹೊರಗಿನವರು' ಅಲ್ಲಿಗೆ ಹೋಗಬಾರದು ಎಂದು ಜಿಲ್ಲಾಡಳಿತ ಆದೇಶ ಹೊರಡಿಸಿದ್ದನ್ನೂ, ಸಿಸಿ ಕ್ಯಾಮರಾ ಇದ್ದದ್ದನ್ನು ಡಿ.ಸಿ ಆಫೀಸ್ ಎದುರು ಧರಣಿ ನಡೆಸಿ ಪ್ರತಿಭಟಿಸಲಾಗಿದೆ.ಬೆತ್ತಲೆ ಪ್ರತಿಭಟನೆಯನ್ನೂ ಒಳಗೊಂಡು ಮಾನವ ಹಕ್ಕುಗಳ ಉಲ್ಲಂಘನೆಯಾದುದನ್ನು ಮಾನವ ಹಕ್ಕು ಮತ್ತು ಮಹಿಳಾ ಆಯೋಗಗಳಿಗೆ ದೂರು ನೀಡಲಾಗಿದೆ. ಹಲವು ದಬ್ಬಾವಣೆಗಳ ನಡುವೆಯೂ ಡಿಸೆಂಬರ್ 23 ರಂದು ಮಡಿಕೇರಿ ಚಲೋ ಯಶಸ್ವಿಯಾಗಿ ನಡೆದಿದೆ.

ಪದ್ಮಶ್ರೀ ಪ್ರಖ್ಯಾತ ಭಾಷಾ ವಿದ್ವಾಂಸರಾದ ಪದ್ಮಶ್ರೀ ಡಾ॥ ಗಣೇಶ್ ಎನ್. ದೇವಿಯವರು ರ್‍ಯಾಲಿಗೆ ಚಾಲನೆ ನೀಡಿ ಶುಭ ಹಾರೈಸಿದರು.

ಈ ಒಟ್ಟು ಹೋರಾಟದ ವಿವಿಧ ಹಂತಗಳಲ್ಲಿ ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ, ಸಿಐಟಿಯು, ಸಿಪಿಐ(ಎಂ) ತೊಡಗಿವೆ. ಸಮನ್ವಯ ಸಮಿತಿಯ ರಾಜ್ಯ ಸಂಚಾಲಕರಾದ ವೈ.ಕೆ.ಗಣೇಶ್, ಸಹ ಸಂಚಾಲಕರಾದ ಎಸ್.ವೈ.ಗುರುಶಾಂತ್, ಜಿಲ್ಲಾ ಮುಖಂಡ ಬರಡಿ ರವಿ, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಡಾ.ಐ.ಆರ್. ದುರ್ಗಾಪ್ರಸಾದ್,ಸಿಐಟಿಯುವಿನ ನಾಯಕರಾದ ಮಹದೇವ್, ಹೆಚ್.ವಿ.ರಮೇಶ್, ಸಾಬು, ಪಂಚಾಯತ್ ನೌಕರರ ಸಂಘದ ಪಿ.ಆರ್.ಭರತ್, ಮುಂತಾದವರು ಸತತ ಹೋರಾಟದ ಜೊತೆಗಿದ್ದಾರೆ. 23 ರ ಮಡಿಕೇರಿ ಚಲೋಕ್ಕೆ ಕೊಡಗು ಅಲ್ಲದೇ ದಕ್ಷಿಣ ಕನ್ನಡ, ಹಾಸನ, ಮೈಸೂರು ಜಿಲ್ಲೆಗಳಿಂದ ಸಮನ್ವಯ ಸಮಿತಿಯ ಕಾರ್ಯಕರ್ತರು ಭಾಗವಹಿಸಿದ್ದಾರೆ. ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಸಮ್ಮೇಳನ ನಿರ್ಣಯ ಅಂಗೀಕರಿಸಿ ರಾಜ್ಯಾದ್ಯಂತ ಬೆಂಬಲಿಸಿ ಧರಣಿ ನಡೆಸಲು ಕರೆ ನೀಡಿದೆ. ಮಂಗಳೂರಿನಲ್ಲಿ ಡಿ.ವೈ.ಎಫ್.ಐ, ಮಳವಳ್ಳಿಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ, ಜನವಾದಿ ಮಹಿಳಾ ಸಂಘಟನೆಗಳು ಪ್ರತಿಭಟನೆಯನ್ನು ನಡೆಸಿವೆ.

ಇಷ್ಟೆಲ್ಲವುಗಳ ನಡುವೆ ಆದಿವಾಸಿಗಳ ಹೋರಾಟ ಮುಂದೆ ಸಾಗಿದೆ. ಸರಕಾರ ನೀಡಿದ ಭರವಸೆ ಪೂರ್ಣ ಈಡೇರಿಸಲು ತುರ್ತು ಗಮನ ಕೊಡಬೇಕು.

ಹಲವು ದಿಡ್ಡಳ್ಳಿಗಳು :

ಕೊಡಗು ಜಿಲ್ಲೆಯಲ್ಲಿ ಹತ್ತಾರು ಅಲ್ಲ, ನೂರಾರು 'ದಿಡ್ಡಳ್ಳಿಗಳು' ಇವೆ. ಮೂರು ತಾಲ್ಲೂಕುಗಳಲ್ಲಿಯೂ ಮನೆ ನಿವೇಶನ, ಮನೆ ನಿರ್ಮಾಣ ಹಾಗೂ ಅರಣ್ಯ ಹಕ್ಕುಗಳ ಕಾಯ್ದೆಯಂತೆ ಭೂಮಿ ಮತ್ತು ಸಮುದಾಯದ ಹಕ್ಕುಗಳನ್ನು ನೀಡಬೇಕೆಂದು ಹಲವಾರು ವರುಷಗಳಿಂದ ಆಗ್ರಹಿಸಿ, ಹೋರಾಟ ನಡೆಸುತ್ತಾ ಬರಲಾಗಿದೆ. ಆದರೆ ಆಡಳಿತ ಗಮನ ಕೊಡದೇ ನಿರ್ಲಕ್ಷಿಸಿದೆ. ಇನ್ನಾದರೂ ಎಚ್ಚೆತ್ತು ಕೊಡಗು ಜಿಲ್ಲೆಯಲ್ಲಿರುವ ಎಲ್ಲಾ ಆದಿವಾಸಿಗಳ ಸಮಸ್ಯೆಗಳತ್ತ ಜಿಲ್ಲಾಡಳಿತ, ಉಸ್ತುವಾರಿ ಸಚಿವರು ಗಮನಹರಿಸಿ ಬಗೆಹರಿಸಬೇಕು. ಮತ್ತೊಂದು ಆಸ್ಫೋಟಕ ಸ್ಥಿತಿ ನಿರ್ಮಾಣವಾಗದಂತೆ ಕ್ರಮವಹಿಸಬೇಕು. ಇಲ್ಲವಾದಲ್ಲಿ ದಿಡ್ಡಳ್ಳಿ ಕಿಚ್ಚು ಎಲ್ಲೆಡೆ ವ್ಯಾಪಿಸಲಿದೆ.

ಗಂಗಾವತಿ ಹಾಗೂ ಚಿತ್ತವಾಡ್ಗಿಗೆ ಸಿಪಿಐ(ಎಂ) ನಿಯೋಗ

ಕೊಪ್ಪಳ ಜಿಲ್ಲೆಯ ಗಂಗಾವತಿಯಲ್ಲಿ ಡಿಸೆಂಬರ್ 12 ಮತ್ತು 13ರಂದು ಎರಡು ಕೋಮುಗಳ ನಡುವೆ ನಡೆದ ಗಲಭೆಯಿಂದಾಗಿ ಜನತೆಯಲ್ಲಿ ಆತಂಕ ಮನೆ ಮಾಡಿದೆ. ಹನುಮ ಜಯಂತಿ ಹಾಗೂ ಈದ್ ಮಿಲಾದ್ ಹಬ್ಬಗಳು ಒಂದೇ ದಿನ ಬಂದ ಪರಿಣಾಮವಾಗಿ ಆಚರಣೆ ವಿಚಾರವಾಗಿ ನಡೆದ ಗಲಭೆಯಲ್ಲಿ ಕೋಮುವಾದಿಗಳು ಗಲಭೆ ಹಬ್ಬಿಸಿದರು.

ಗಂಗಾವತಿಯಲ್ಲಿ ಮುಸ್ಲಿಂ ಪ್ರದೇಶದಲ್ಲಿ ಗಣಪತಿ ಹಬ್ಬ ಆಚರಿಸುವ ಮೂಲಕ ಪ್ರಾರಂಭವಾದ ಸಂಚಿನ ಪರಿಣಾಮವಾಗಿ ಡಿ.11ರಂದು ಬ್ಯಾನರ್ ಹಾಗೂ ಬಂಟಿಂಗ್ಸ್ ಕಟ್ಟುವ ವಿಚಾರದಲ್ಲಿ ಹಿಂದೂ ಹಾಗೂ ಮುಸ್ಲಿಂ ಕೋಮುಗಳ ನಡುವೆ ಗಲಭೆ ನಡೆದು ಪಿಎಫ್ಐ ಕಾರ್ಯಕರ್ತರು ಕಲ್ಲು ತೂರಿದ್ದಾರೆ. ಪರಿಣಾಮ ಬಿಗುವಿನ ವಾತಾವರಣ ನಿರ್ಮಾಣವಾಯಿತು.

ಸ್ಥಳೀಯ ದರ್ಗಾದ ಮೌಲ್ವಿಯನ್ನು ತೆಗೆದಿದ್ದ ಪರಿಣಾಮವಾಗಿ ಶಾಸಕ ಇಕ್ಬಾಲ್ ಅನ್ಸಾರಿ ಹಾಗೂ ಬಿಜೆಪಿಯು ಒಂದಾಗಿ ಎರಡು ಕೋಮುಗಳ ಪರವಾಗಿ ನಿಂತು ಗಲಭೆಗೆ ಅವಕಾಶ ನೀಡಿದ್ದಾರೆ. ಬಾವುಟ ಕಟ್ಟುವ ವಿಚಾರವಾಗಿ ಖಾಸಗಿ ಮನೆಯ ಸ್ಥಳೀಯ ಹಿಂದೂ ಮಹಿಳೆಯಿಂದ ಸಾಕಷ್ಟು ವಿರೋಧ ವ್ಯಕ್ತವಾದ್ದರಿಂದ ಪಿಎಫ್ಐ ಕಾರ್ಯಕರ್ತರು ಹಲ್ಲೆಗೆ ಮುಂದಾದರು.

ಡಿ.13ರಂದು ಮೂರು ದಿನಗಳ ಕಾಲ ಕರ್ಫ್ಯೂ ಜಾರಿ ಯಾಗಿದ್ದರೂ ಸಹ ಎರಡು ಕೋಮುಗಳ ಜನತೆ ಗಲಭೆಗೆ ಮುಂದಾಗಿದ್ದಾರೆ. ಮುಸ್ಲಿಂ ಗುಂಪು 'ಹಮಾರ ಶೇರ್' ಎಂದು ಕೂಗಾಡಿದ್ದಾರೆ. ಮುಸ್ಲಿಂ ಕೋಮಿನ ಪರವಾಗಿ ಶಾಸಕ ಇಕ್ಬಾಲ್ ಅನ್ಸಾರಿ ಹಾಗೂ ಬಿಜೆಪಿ ಲೋಕಸಭಾ ಸದಸ್ಯ ಕರಡಿ ಸಂಗಣ್ಣರವರು ಹಿಂದು ಕೋಮಿನ ಪರವಾಗಿ ನಿಂತು ಕಾರ್ಯಾಚರಣೆ ಇಳಿದು ಧರಣಿಯಲ್ಲಿ ಭಾಗವಹಿಸಿದ್ದಾರೆ.

144 ಸೆಕ್ಷನ್ ಜಾರಿಯಲ್ಲಿದ್ದರೂ, ಸುಮಾರು 3000ದಷ್ಟು ಹನುಮ ಮಾಲಾಧಾರಿಗಳು ದೊಣ್ಣೆ, ಮಚ್ಚು, ರಾಡು, ಕತ್ತಿ ಮಂತಾದ ಮಾರಕಾಸ್ತ್ರಗಳನ್ನು ಪ್ರದರ್ಶಿಸಿದ್ದಾರೆ. ಬಂದೋಬಸ್ತ್ ಕರ್ತವ್ಯದಲ್ಲಿದ್ದ ಎಸ್.ಪಿ./ಡಿ.ಸಿ. ರವರು ಇದ್ದರೂ ಯಾವುದೇ ಕಾನೂನು ಕ್ರಮ ತೆಗೆದುಕೊಂಡಿಲ್ಲ.

ಈ ಘಟನೆಯು ಎರಡು ಕೋಮುಗಳ ವ್ಯವಸ್ಥಿತ ಸಂಚಾಗಿದ್ದೂ ಒಂದೊಕ್ಕೊಂದು ಪೂರಕವಾಗಿ ಗಲಭೆ ನಡೆಸಲು ಮುಂದಾಗಿವೆ. 2 ಲಕ್ಷ ಜನತೆ ಇರುವ ಪ್ರದೇಶದಲ್ಲಿ 5 ಸಾವಿರಕ್ಕೂ ಹೆಚ್ಚಿನ ಕೋಮುವಾದಿಗಳು ಗಲಾಟೆ ನಡೆಸಿದ್ದಾರೆ. ಈ ಸಂದರ್ಭದಲ್ಲಿ ಸರ್ಕಾರದ ಪ್ರತಿನಿಧಿಗಳಾಗಿ, ಉಸ್ತುವಾರಿ ಸಚಿವರಾದ ಬಸವರಾಜ ರಾಯರೆಡ್ಡಿ ಭೇಟಿ ನೀಡಲಿಲ್ಲ. ಡಿ.15ರಂದು ಸಿಪಿಐ(ಎಂ) ಪಕ್ಷದ ಪ್ರತಿನಿಧಿಗಳ ನಿಯೋಗ ಮಾತ್ರ ಭೇಟಿ ನೀಡಿದೆ ಮತ್ತು ಜನತೆಯೊಂದಿಗೆ ಇರುತ್ತೇವೆ ಎಂದು ಭರವಸೆ ನೀಡಿದರು.


ಸಿಪಿಐ(ಎಂ) ಪಕ್ಷ ಭೇಟಿಯ ಪರಿಣಾಮವಾಗಿ ಜನತೆಯಲ್ಲಿ ವಿಶ್ವಾಸ ಮೂಡಿದೆ ಮತ್ತು ನಂತರದಲ್ಲಿ ಮಧ್ಯರಾತ್ರಿ ಕೋಮುಗಲಭೆಗೆ ಮುಂದಾದ ಕೆಲವರನ್ನು ಬಂಧಿಸಲಾಗಿದೆ. ಇಲ್ಲಿಯೂ ಕೋಮುಗಲಭೆಗೆ ಪ್ರಚೋದಿಸಿದ ಎರಡು ಕೋಮಿನ ಮುಖಂಡರನ್ನು ಬಂಧಿಸುವ ಬದಲು ಅಮಾಯಕರನ್ನು ಬಂಧಿಸುವ ಬಗ್ಗೆ ಸ್ಥಳೀಯ ಎಸ್.ಪಿ. ಜೊತೆಗೆ ಒಳ ಒಪ್ಪಂದ ಮಾಡಿಕೊಂಡಿದ್ದಾರೆ.

ಬಳ್ಳಾರಿಯಲ್ಲಿಯೂ ಸಹ ಬಿಜೆಪಿ ಹಾಗೂ ಆರ್‌ಎಸ್‌ಎಸ್ ನವರು ಸುತ್ತಲಿನ ಎಸ್.ಟಿ. ಜನಾಂಗವನ್ನು ಸೆಳೆಯಲು ವ್ಯವಸ್ಥಿತವಾದ ಸಂಚು ರೂಪಿಸಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ ಚಿತ್ತವಾಡ್ಗಿಯಲ್ಲಿ ಹನುಮ ಜಯಂತಿ ಹೆಸರಿನಲ್ಲಿ ವಿವಿದೆಡೆಗಳಿಂದ ಮಾಲಾಧಾರಿಗಳನ್ನು ಕರೆಸಿ ಗಲಭೆಗೆ ಸಂಚು ರೂಪಿಸಿದರು. ಇಲ್ಲಿಯೂ ಸಹ ಗಲಭೆ ನಡೆದು ಇಬ್ಬರೂ ಮುಸ್ಲಿಂ ಯುವಕರ ಮೇಲೆ ಹಲ್ಲೆ ನಡೆಸಿದ್ದಾರೆ. 2 ದಿನಗಳ ಗಂಭೀರ ವಾತಾವರಣ ಉಂಟಾಗಿ ಜನತೆಯಲ್ಲಿ ಆತಂಕದ ಮನೆ ಮಾಡಿದೆ. ಇಲ್ಲಿಯೂ ಸಹ ಸಿಪಿಐ(ಎಂ) ನಿಯೋಗ ಭೇಟಿ ನೀಡಿ ಜನತೆಯಲ್ಲಿ ಸಾಂತ್ವನ ತಿಳಿಸಿ, ನಿಮ್ಮೊಂದಿಗೆ ಇರುತ್ತೇವೆಂದು ಭರವಸೆ ನೀಡಿದರು.

ಮುಂಬರುವ ವಿಧಾನಸಭಾ ಚುನಾವಣೆ ದೃಷ್ಠಿಯಲ್ಲಿ ಇಟ್ಟುಕೊಂಡು, ಜನತೆಯ ಸಮಸ್ಯೆಗಳಿಗೆ ಕಾರಣರಾಗಿರುವ ಕೇಂದ್ರ–ರಾಜ್ಯ ಸರ್ಕಾರದ ನೀತಿಗಳಿಂದ ಜನತೆಯಲ್ಲಿ ಆಕ್ರೋಶ ಏಳದಂತೆ ಕೋಮು ಗಲಭೆಗಳನ್ನು ನಡೆಸುವ ಮೂಲಕ ಬಿಜೆಪಿಯು ವ್ಯವಸ್ಥಿತವಾಗಿ ಕೆಲಸ ಮಾಡಿದೆ ಮತ್ತು ಕಾಂಗ್ರೆಸ್ ಪಕ್ಷವು ಸಹ ಕೋಮುವಾದಿಗಳ ಅಟ್ಟಹಾಸವನ್ನು ಹಿಮ್ಮೆಟ್ಟಿಸುವ ಬದಲಾಗಿ ಕೋಮುವಾದಿಗಳೊಂದಿಗೆ ಕೈಜೋಡಿಸುತ್ತಿದ್ದಾರೆ.

ಸಿಪಿಐ(ಎಂ) ನಿಯೋಗದಲ್ಲಿ ರಾಜ್ಯ ಕಾರ್ಯದರ್ಶಿಗಳಾದ ಜಿ.ವಿ.ಶ್ರೀರಾಮರೆಡ್ಡಿ, ರಾಜ್ಯ ಸಮಿತಿ ಸದಸ್ಯರಾದ ಆರ್.ಎಸ್.ಬಸವರಾಜು, ಶೇಕ್ಷಖಾದ್ರಿ, ನಾಗರಾಜ್ ಉಪಸ್ಥಿತರಿದ್ದರು. ■

ಸಮಾಜವಾದಿ ಚಿಂತಕ ಎಸ್.ಎಚ್.ಪಟೇಲ್ ಇನ್ನಿಲ್ಲ



ಮಧ್ಯ ಕರ್ನಾಟಕ ಜಿಲ್ಲೆ ದಾವಣಗೆರೆಯಲ್ಲಿ ಹಲವು ದಶಕಗಳ ಕಾಲ ತಮ್ಮ ಪ್ರಚಂಡ ವಾಗ್ಮೀತನದಿಂದ ಸಮಾಜವಾದಿ ಚಿಂತನೆಗಳನ್ನು ಪ್ರತಿಪಾದಿಸುತ್ತಿದ್ದ ನಮ್ಮೆಲ್ಲರ ಪ್ರೀತಿಯ ಗುರುಗಳಾದ ಎಸ್.ಎಚ್.ಪಟೇಲ್(82) ಇನ್ನಿಲ್ಲ. ಡಿಸೆಂಬರ್ 28ರಂದು ಸಂಜೆ 4.20ರ ಸುಮಾರಿನಲ್ಲಿ ಆಗಲಿದ್ದಾರೆ. ಹಲವು ತಿಂಗಳ ಹಿಂದೆ ಪಾರ್ಶ್ವವಾಯುವಿಗೆ ಅವರು ತುತ್ತಾಗಿದ್ದರು. ಇತ್ತೀಚಿಗಷ್ಟೇ ನಾನು ನಮ್ಮ ದಾವಣಗೆರೆಯ ಸಂಗಾತಿಗಳೊಂದಿಗೆ ಅವರ ಮನೆಗೆ ಭೇಟಿ ನೀಡಿದ್ದೆವು. ನಮ್ಮನ್ನು ನಿದ್ದೆಯ ಮಂಪರಿನಲ್ಲೆ ನೋಡಿ ಮುಗುಳ ನಕ್ಕು ಮತ್ತೆ ನಿದ್ದೆಗೆ ಜಾರಿದ್ದರು. ಇತ್ತೀಚಿನವರೆಗೂ ನಾವು ಕರೆಯುತ್ತಿದ್ದ ಎಲ್ಲಾ ಸಭೆಗಳಿಗೂ ಇತರೆ ಪ್ರಗತಿಪರ ಸಂಘಟನೆಗಳ ಸಭೆಗೂ ಭಾಗವಹಿಸುತ್ತಾ ಕ್ರಿಯಾಶೀಲವಾಗಿದ್ದ ಅವರನ್ನು ಅಂದು ಆ ಗಾಲಿ ಕುರ್ಚಿಯಲ್ಲಿ ನೋಡಿದಾಗ ನನಗರಿವಿಲ್ಲದಂತೆ ಕಣ್ಣೀರಿಳಿದ್ದಿತ್ತು.

ಅಣ್ಣ ಜೆ.ಎಚ್.ಪಟೇಲ್ ರಂತೆ ಸಮಾಜವಾದಿ ಚಿಂತನೆಗಳನ್ನು ಮೈಗೂಡಿಸಿಕೊಂಡಿದ್ದ ಪಟೇಲ್ ರು ತಮ್ಮ ಇಡೀ ಬದುಕನ್ನು ಶೈಕ್ಷಣಿಕ ಉನ್ನತಿಗಾಗಿ ಮುಡುಪಾಗಿಸಿ ಆ ಮೂಲಕ ಒಂದು ಪ್ರಗತಿಪರ ಸಮಾಜವನ್ನು ನಿರ್ಮಿಸುವ ಕಸಸ್ಸು ಕಂಡವರು. ಮುಂಬೈನ ಪರಿಸರದಲ್ಲಿ ಗಾಢವಾಗಿದ್ದ ಸಮಾಜವಾದಿ ಮತ್ತು ಎಡ ಚಿಂತನೆಯ ಮೂಸೆಯಲ್ಲಿ ತಮ್ಮ ಕಾನೂನು ಪದವಿ ಪಡೆದಿದ್ದ ಅವರು ಅಂದಿನ ಕಾಲದ ಪ್ರಖರ ಸಮಾಜವಾದಿ ಚಿಂತಕರಾದ ಮಧು ದಂಡವತೆ, ಜಾರ್ಜ್ ಫರ್ನಾಂಡೀಸ್, ಬಿ.ಟಿ.ರಣದಿವೆ, ಮಾತ್ರವಲ್ಲ ಆ ಕಾಲದ ಸಾಹಿತ್ಯ ದಿಗ್ಗಜರ ಜೊತೆ ಒಡನಾಡ ಹೊಂದಿದ್ದರು.

ದಾವಣಗೆರೆ ಆರ್.ಎಲ್ ಕಾನೂನು ಕಾಲೇಜಿಗೆ ಬಂದ ನಂತರ ಇಡೀ ಕಾಲೇಜನ ವಾತವಾರಣಕ್ಕೆ ಒಂದು ಪ್ರಗತಿಪರ ಸ್ಪರ್ಶ ನೀಡಿದ್ದರು. ಆ ಕಾಲೇಜಿಗೆ ದೇಶದ ಖ್ಯಾತ ನಾಮರುಗಳಾದ ಜ್ಯೋತಿಬಸು, ರಂಗನಾಥ ಮಿಶ್ರಾ, ಶಿವರಾಜ ಪಾಟೀಲ್, ಸೇರಿದಂತೆ ಹಲವು ದಿಗ್ಗಜರನ್ನು ಆಹ್ವಾನಿಸಿ ಉಪನ್ಯಾಸಗಳನ್ನು ಏರ್ಪಡಿಸಿದ್ದರು ಮತ್ತು ಇಡೀ ಕಾಲೇಜು ಲೈಬ್ರರಿ ತುಂಬೆಲ್ಲಾ ಜಗದ್ವಖ್ಯಾತ ಕಾನೂನು ತಜ್ಞರು, ರಾಜಕೀಯ ಚಿಂತಕರ ಗ್ರಂಥಗಳನ್ನು ಇರುವಂತೆ ವಿಶೇಷ ಆಸಕ್ತಿಯನ್ನು ಅವರು ವಹಿಸುತ್ತಿದ್ದರು. ನಾನು ವೈಯಕ್ತಿಕವಾಗಿ ಯಾವುದೇ ಸಂಗ್ರಹ ಯೋಗ್ಯ ಪುಸ್ತಕಗಳನ್ನು ಅವರ ಮುಂದಿಟ್ಟರೆ ಅವುಗಳನ್ನು 4–5 ಪ್ರತಿಗಳನ್ನು ಲೈಬ್ರರಿಗಾಗಿ ಅವರು ಪಡೆಯುತ್ತಿದ್ದರು.

ಅಣ್ಣ ಒಬ್ಬ ದೊಡ್ಡ ರಾಜಕೀಯ ನಾಯಕನಾಗಿದ್ದರೂ ಅವರ ನೆರಳಲ್ಲಿ ಯಾವೊಂದು ಅವಕಾಶಕ್ಕೆ ಹಾತೊರೆದವರಲ್ಲ. ಪಟೇಲರು. ಈ ಕಾರಣಕ್ಕೆ ಪಟೇಲ ಶಿಷ್ಯರ ಪಡೆಯೇ ನ್ಯಾಯಮೂರ್ತಿಗಳಾಗಿ, ರಾಜಕೀಯ ನಾಯಕರಾಗಿ ಸಾಮಾಜಿಕ ಕಾರ್ಯಕರ್ತರಾಗಿ ನೂರಾರು ಸಂಖ್ಯೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಓದುವುದು ಮತ್ತು ಪ್ರಖರ ಭಾಷಣ ಪಟೇಲರ ಎರಡು ಪ್ರಮುಖ ಜೀವನದ ಪ್ರಧಾನ ಕೆಲಸಗಳಾಗಿದ್ದವು. ಅವುಗಳನ್ನು ಹೊರತುಪಡೆಸಿದ ಪಟೇಲ್ ರನ್ನು ಊಹಿಸಿಕೊಳ್ಳುವುದು ಅಸಾಧ್ಯ. ತಮ್ಮ ವಿದ್ವತ್ ಪೂರ್ಣ ಓದು ಮತ್ತು ಭಾಷಣದ ಮೂಲಕ ಸದಾ ಸಮಾಜದಲ್ಲಿನ ಅನಿಷ್ಟಗಳ ವಿರುದ್ದ ಎಚ್ಚರಿಸುತ್ತಿದ್ದ ಮತ್ತು ಒಂದು ಸುಂದರ ಸಮಾನ ಸಾಮಾಜಿಕ ಅವಕಾಶಗಳಿರುವ ಸಮಾಜಕ್ಕಾಗಿ ನಮ್ಮನ್ನು ಹೋರಾಟಕ್ಕೆ ಪ್ರೇರೇಪಿಸುತ್ತಿದ್ದ ಮಾರ್ಗದರ್ಶಿ ಇನ್ನಿಲ್ಲ.

ಅಂತಹ ಒಂದು ಮೇರು ವ್ಯಕ್ತಿತ್ವದ ಕೆಳಗಡೆ ಅನೇಕರು ಶಿಷ್ಯರಾಗಿ ಸಮಾಜವನ್ನು ವಿಭಿನ್ನವಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯವಾಗಿದೆ. ಪ್ರೊ.ಎಸ್. ಎಚ್.ಪಟೇಲ್ ಭೌತಿಕವಾಗಿ ನಮ್ಮೊಂದಿಗಿಲ್ಲ, ಆದ–ರೆ ಅವರ ಭೌದ್ಧಿಕ ತಿಳುವಳಿಕೆ ಖಂಡಿತ ನಮ್ಮನ್ನು ಮುನ್ನಡೆಸಲಿದೆ.

ಪ್ರೀತಿಯ ಗುರುಗಳಿಗೆ
ಇದೋ ನಿಮ್ಮ ಪ್ರೀತೀಯ ಶಿಷ್ಯನ
ಕೊನೆಯ ನಮನ .....

ಕೆ.ಮಹಾಂತೇಶ್

ಪಡಿತರ ಬೇಕು, ಕೂಪನ್ ಬ್ಯಾಡ: ಸಿಪಿಐ(ಎಂ) ಆಕ್ರೋಶ

ಆಹಾರ ಪದಾರ್ಥಗಳ ಬದಲಿಗೆ ನಗದು ಕೂಪನ್ ನೀಡುವ ಮೂಲಕ ಸಾರ್ವಜನಿಕ ಪಡಿತರ ವ್ಯವಸ್ಥೆಯನ್ನು ನಾಶ ಮಾಡಿ, ಖಾಸಗಿ ಮಾರುಕಟ್ಟೆಯನ್ನು ಬಲಪಡಿಸುವ ರಾಜ್ಯ ಸರ್ಕಾರದ ಕ್ರಮವನ್ನು ಖಂಡಿಸಿ ಡಿಸೆಂಬರ್ 28ರಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)–ಸಿ.ಪಿಐ(ಎಂ) ಬೆಂಗಳೂರು ಉತ್ತರ ಜಿಲ್ಲಾ ಸಮಿತಿಯು ಪ್ರತಿಭಟನೆ ನಡೆಸಿತು.

ಬೆಂಗಳೂರಿನ ಕನ್ನಿಂಗ್ ಹ್ಯಾಂ ರಸ್ತೆಯಲ್ಲಿರುವ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಕಛೇರಿ ಎದುರು ನಡೆದ ಪ್ರತಿಭಟನೆಯಲ್ಲಿ ಮಾತನಾಡಿದ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಗೌರಮ್ಮರವರು ಮಾತನಾಡಿ 'ಕೇಂದ್ರ ಹಾಗು ರಾಜ್ಯ ಸರ್ಕಾರಗಳು ಆಹಾರ ಭದ್ರತಾ ಕಾಯಿದೆಯನ್ನು ಬಲಪಡಿಸುವ ಬದಲಾಗಿ, ನಾಶ ಮಾಡಹೊರಟಿವೆ. ಪಡಿತರ ಮೂಲಕ 67% ಜನತೆಗಿದ್ದ ಆಹಾರ ಭದ್ರತೆಯನ್ನು 40% ಗೆ ಇಳಿಸಲು ಕೇಂದ್ರ ಸಮಿತಿ ನೇಮಿಸಿದ ಶಾಂತಕುಮಾರ್ ಸಮಿತಿ ಶಿಫಾರಸ್ಸು ಮಾಡಿದೆ.

ಇನ್ನು ರಾಜ್ಯ ಸರ್ಕಾರ ಎಪಿಎಲ್ ಕಾರ್ಡುದಾರರಿಗೆ ನೀಡುವ ಆಹಾರ ಧಾನ್ಯವನ್ನು ನಿಲ್ಲಿಸಿ ಯೂನಿಟ್ ಪದ್ಧತಿ ಜಾರಿಗೆ ತಂದಿದೆ. ಸೀಮೆಎಣ್ಣೆ ಸಹ ಸಿಗುತ್ತಿಲ್ಲ. ಅಡುಗೆ ಅನಿಲದ ಸಬ್ಸಿಡಿಯನ್ನು ನೇರ ನಗದು ರೂಪದಲ್ಲಿ ನೀಡುವ ಕ್ರಮ ಮತ್ತು ಬಯೋಮೆಟ್ರಿಕ್ ವ್ಯವಸ್ಥೆಯು ಗೊಂದಲದ ಗೂಡಾಗಿಸಿದೆ ಎಂದರು.



ಅನ್ನಬಾಗ್ಯ ಯೋಜನೆಯ ಸಬ್ಸಿಡಿಯನ್ನು ನೇರವಾಗಿ ನಗದು ರೂಪದಲ್ಲಿ ನೀಡುವುದರಿಂದ ನಗರ ಪ್ರದೇಶದಲ್ಲಿನ ನ್ಯಾಯಬೆಲೆ ಅಂಗಡಿಗಳನ್ನು ಮುಚ್ಚುವ ಪರಿಸ್ಥಿತಿ ಒಂದು ಕಡೆಯಾಗುತ್ತದೆ. ಮತ್ತೊಂದು ಕಡೆ ಮಾರುಕಟ್ಟೆ ದರದಲ್ಲಿ ಫಲಾನುಭವಿಗಳು ಆಹಾರ ಪದಾರ್ಥ ಖರೀದಿಸಲಾಗದೆ ಸಂಕಷ್ಟಕ್ಕೆ ಸಿಕ್ಕಿ ಹಾಕಿಕೊಳ್ಳುತ್ತಾರೆ.

ಅವೈಜ್ಞಾನಿಕ ಎಪಿಎಲ್–ಬಿಪಿಎಲ್ ಮಾನದಂಡ ತೆಗೆದು ಹಾಕಬೇಕು. ಅಪೌಷ್ಟಿಕತೆ, ರಕ್ತಹೀನತೆ, ಹಸಿವಿಗೆ ಉತ್ತರವನ್ನು ಕಂಡು ಕೊಳ್ಳಲಾರದೇ ಅಭಿವೃದ್ದಿಯನ್ನು ಸಾಧಿಸುಲು ಸಾಧ್ಯವಿಲ್ಲ. ನಗದು ಕೂಪನ್ ನೀಡುವ ಕ್ರಮ ಕೈಬಿಟ್ಟು, ಬೆಲೆಏರಿಕೆ ನಿಯಂತ್ರಿಸಿ, ಕೃಷಿ ಆಹಾರ ಸ್ವಾವಲಂಬನೆಗೆ ಅದ್ಯ ಗಮನ ನೀಡಬೇಕೆಂದು ಹೇಳಿದರು.

ಸಿಪಿಐ(ಎಂ) ಪಕ್ಷದ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಆಯುಕ್ತರಿಗೆ ಮನವಿಪತ್ರ ನೀಡಿದರು. ಪ್ರತಿಭಟನೆಯಲ್ಲಿ ಸಿಪಿಐ(ಎಂ)ನ ರಾಜ್ಯ ಸಮಿತಿ ಸದಸ್ಯರಾದ ಆರ್.ಶ್ರೀನಿವಾಸ್, ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಟಿ.ಲೀಲಾವತಿ ಮತ್ತು ಮುಖಂಡರು ಕಾರ್ಯಕರ್ತರು ಹಾಜರಿದ್ದರು. ●

ಕೇಳಿಸಿದ್ದು

ದೇಶವನ್ನು ಪ್ರೀತಿಸಿ,
ಆದರೆ ಗದ್ದಲದ ದೇಶಪ್ರೇಮ ಬೇಡ

ರಾಷ್ಟ್ರಪತಿ ಪ್ರಣಬ್ ಮುಖರ್ಜಿ –
ಇತಿಹಾಸ ಕಾಂಗ್ರೆಸ್‌ನಲ್ಲಿ

ನಮ್ಮ ಚುರು-ಟ್ವೀಟ್

ರತನ್ ಟಾಟಾ ಆರೆಸ್ಸೆಸ್ ಮುಖ್ಯ
ಕಚೇರಿಯಲ್ಲಿ ಮುಖ್ಯ ಸ್ಥರನ್ನು
ಭೇಟಿಯಾದರಂತೆ. ಕಷ್ಟದಲ್ಲಿರುವ
ಕಾರ್ಪೊರೆಟ್ ಗುಂಪು ಇನ್ನು ಮೇಲೆ
"ಪರಿಹಾರ"ಕ್ಕೆ ನಾಗಪುರಕ್ಕೆ ಹೋಗುತೋ?

– ಬೃಂದಾ ಕಾರಟ್

ದಲಿತರ ಮೀಸಲಾತಿ, ಒಳ ಮೀಸಲಾತಿ ಹೋರಾಟ ಎತ್ತ ಸಾಗಬೇಕು ?

ದಲಿತರಿಗೆ ಶೇ.18 ಮೀಸಲಾತಿ ಇದುವರೆವಿಗೂ ಜಾರಿಯಾಗಿಲ್ಲವೆಂಬುದು ದೇಶದ ಬಹುಜನಕ್ಕೆ ತಿಳಿದಿಲ್ಲ. ಸರಕಾರಿ, ಸಾರ್ವಜನಿಕ ಉದ್ದಿಮೆ ಮತ್ತು ರಾಷ್ಟ್ರೀಕೃತ ಬ್ಯಾಂಕುಗಳ ಉದ್ಯೋಗಗಳಲ್ಲಿ ಕೇವಲ ಡಿ ವರ್ಗದಲ್ಲಿ (ಕ್ಲಾಸ್–4ರಲ್ಲಿ) ಮಾತ್ರ ಶೇ.18 ಮೀಸಲಾತಿ ಜಾರಿಯಾಗಿದೆ. ಇಂತಹ ದುಸ್ಥಿತಿ ಇರುವಾಗ ಪರಿಶಿಷ್ಟ ಜಾತಿಯ ಎಲ್ಲ ಗುಂಪುಗಳು ಮೀಸಲಾತಿ ಉಳಿವಿಗಾಗಿ ಹೋರಾಟ ನಡೆಸಬೇಕಾಗಿದೆ. ಒಳ ಮೀಸಲಾತಿಯ ಸಾಮಾಜಿಕ ನ್ಯಾಯ ಪಡೆಯುವ ಜೊತೆಯಲ್ಲೇ ಮೀಸಲಾತಿ ಪೂರ್ಣ ಜಾರಿಗೊಳಿಸುವ ಹೋರಾಟ ಬಲಗೊಳಿಸುವ ಪ್ರಜ್ಞಾವಂತಿಕೆ ಮೈಗೂಡಿಸಿಕೊಳ್ಳಬೇಕಾಗಿದೆ. ಅದಕ್ಕಾಗಿ ಮೀಸಲಾತಿಯ ಲಾಭಗಳನ್ನು ಕಿತ್ತುಕೊಳ್ಳುವುದಕ್ಕೆ ಅನೇಕ ಜಾತಿಗಳು ಪ್ರಯತ್ನ ನಡೆಸುತ್ತಿರುವ ಆಪಾಯಕಾರಿ ಬೆಳೆವಣಿಗೆಯನ್ನು ಗಂಭೀರವಾಗಿ ಗಮನಿಸಬೇಕಾಗಿದೆ.

ಗೋಪಾಲಕೃಷ್ಣ ಹರಳಹಳ್ಳಿ

ಭಾರತದ ಜಾತಿ ವ್ಯವಸ್ಥೆಯಲ್ಲಿ ಊರಿಂದಾಚೆಗೆ ದೂಡಲ್ಪಟ್ಟವರು ದಲಿತರು. ಅಸ್ಪೃಶ್ಯರು, ಪಂಚಮರೆಂದು ಸೃಷ್ಟಿಸಲ್ಪಟ್ಟವರು. ಹಿಂದೂ ಧರ್ಮದ ಕ್ರೂರ ಜಾತಿ ವ್ಯವಸ್ಥೆ ಉಂಟು ಮಾಡಿದ ಶೋಚನೀಯ ಸ್ಥಿತಿಯಲ್ಲಿ ಬೆಂದವರು ದಲಿತರು. ಶತ ಶತಮಾನಗಳಿಂದಲೂ ಛಿದ್ರ, ಛಿದ್ರವಾದ ಗುಂಪುಗಳು ಮುಂದುವರೆದುಕೊಂಡು ಬಂದಿದೆ. ಎಲ್ಲಾ ಜಾತಿಗಳಲ್ಲೂ ಇಂತಹ ಪರಿಸ್ಥಿತಿಯನ್ನು ಕಾಣುತ್ತೇವೆ. ಮೇಲ್‌ಜಾತಿ ಸವರ್ಣಿಯ ಜಾತಿಗಳಲ್ಲೂ ಪಣಗಳು, ಕುಲಗಳು, ಪಂಥಗಳು ಇರುವುದನ್ನು ನೋಡುತ್ತೇವೆ. ಆದರೆ ಮೇಲ್‌ಜಾತಿಗಳಲ್ಲಿ ಇವುಗಳು ಮರೆಮಾಚಿದಂತೆ ಕಂಡರು. ಇಂದಿಗೂ ಆಚರಣೆ, ಮದುವೆ, ನಡವಳಿಕೆಗಳಲ್ಲಿ ಮತ್ತು ಮಠ ಮಾನ್ಯಗಳ ಹಂತದಲ್ಲಿ ಅದನ್ನು ಕಾಣಬಹುದು.

ದಲಿತರಲ್ಲಿ ಮಾತ್ರ ಈ ವ್ಯವಸ್ಥೆ ನಿರಾತಂಕವಾಗಿ ಮುಂದುವರಿದಿದೆ. ಯಾವುದೇ ಆಸ್ತಿ ಇರದೆ ಇದ್ದುದ್ದರಿಂದ ಇದೇ ಆಸ್ತಿಯೆಂದು ಕಾಪಾಡಿಕೊಂಡು ಬಂದಿರುವಂತೆ ಕಾಣುತ್ತದೆ. ಮೀಸಲಾತಿ ಜಾರಿಯಾದ ನಂತರದಲ್ಲಿ ಈ ಉಪಜಾತಿಗಳು ಮತ್ತಷ್ಟು ಜಟಿಲಗೊಂಡಿವೆ. ಪರಿಶಿಷ್ಟ ಜಾತಿಯಲ್ಲಿ 101 ಉಪಜಾತಿಗಳು, ಪರಿಶಿಷ್ಟ ಪಂಗಡದಲ್ಲಿ 50 ಬುಡಕಟ್ಟುಗಳು ಅಧಿಕೃತವಾಗಿ ಉಳಿದುಕೊಂಡಿವೆ. ರಾಜ್ಯದಲ್ಲಿ ಪರಿಶಿಷ್ಟ ಜಾತಿಗಳಲ್ಲಿ ಹೊಲೆಯ, ಮಾದಿಗ, ಚಂಡಾಲ, ಅಂತ್ಯಜ, ಮಾಲ, ಆದಿ ಕರ್ನಾಟಕ, ಆದಿ ದ್ರಾವಿಡ, ಎಡಗೈ, ಬಲಗೈ, ತಿಗಳ ಹೊಲೆಯ ಹೀಗೆ ಅವುಗಳು ಹಲವು ರೀತಿಯಲ್ಲಿ ಹೆಸರಿಸಿಕೊಂಡಿವೆ.

ಜಾತಿ ಅಸ್ಪೃಶ್ಯತೆಯ ಕೌರ್ಯ ಮತ್ತು ಮೀಸಲಾತಿಯ ಹಕ್ಕು :

ವೇದಗಳಲ್ಲಿ ಕಂಡು ಬರುವ ವರ್ಣ ವ್ಯವಸ್ಥೆಯು ಜಾತಿ ವ್ಯವಸ್ಥೆಯ ಮೂಲಾಧಾರವಾಗಿದೆ. ವಿಷ್ಣುವಿನ ತಲೆಯಿಂದ ಬ್ರಾಹ್ಮಣ, ತೋಳುಗಳಿಂದ ಕ್ಷತ್ರಿಯ, ಹೊಟ್ಟೆಯಿಂದ ವೈಶ್ಯ, ಪಾದಗಳಿಂದ ಶೂದ್ರರು, ಪಾದದ ತಳದಲ್ಲಿ ಪಂಚಮರು ಎನ್ನುವ ದೈವಸೃಷ್ಠಿಯ ಸಿದ್ಧಾಂತದಲ್ಲಿ ಶೋಷಣೆ ಮತ್ತು ಕೌರ್ಯ ಅಡಗಿದೆ. ಯಜುರ್‌ವೇದದಲ್ಲಿ ಚಂಡಾಲರ ಉಲ್ಲೇಖವಿದ್ದು, ಛಾಂದೋಪನಿಷತ್ತಿನಲ್ಲಿ ಚಂಡಾಲರ ಸಂತತಿ ಪ್ರಾಣಿಗಿಂತ ಕೀಳು ಎಂದು ಉಲ್ಲೇಖವಿದೆ.

ಅಸ್ಪೃಶ್ಯತೆ, ಜಾತಿ ವ್ಯವಸ್ಥೆಯ ಒಂದು ವಿಶಿಷ್ಟ ಆಯಾಮವಾಗಿದೆ. ಮೂಲದಲ್ಲಿ ಮಡಿ ಮೈಲಿಗೆಗಳ ಕಲ್ಪನೆ, ಮೇಲು ಕೀಳುಗಳ ಕಲ್ಪನೆ, ಸ್ವಗೋತ್ರ ವಿವಾಹ ಕಲ್ಪನೆಗಳು ಪ್ರತಿಯೊಂದು ಜಾತಿಯು ಬ್ರಾಹ್ಮಣ್ಯವನ್ನು ಕೇಂದ್ರವಾಗಿಟ್ಟು ಕೊಂಡು ಅಥವಾ ತೀರ ಮೇಲ್ ಹಂತಸ್ತಿನ ಸ್ಥಾನವನ್ನು ನಿರ್ಣಯಿಸಿಕೊಂಡಿದೆ. ಬ್ರಾಹ್ಮಣರು ತಮಗಿಂತ ಕೆಳಗಿನವರೆಲ್ಲ ಮೈಲಿಗೆ ಉಂಟು ಮಾಡುವವರೇ ಎಂಬ ತಿಳುವಳಿಕೆ ಇದ್ದವರು ಎಂದಿದ್ದಾರೆ ಡಾ॥ಬಿ.ಆರ್.ಅಂಬೇಡ್ಕರ್‌ರವರು.

ಈ ಮೈಲಿಗೆ ಕಲ್ಪನೆ ಹುಟ್ಟು ಋತುಸ್ರಾವ, ಸಾವು, ಗರ್ಭಧಾರಣೆ ಇವುಗಳಿಗೆ ಸಂಬಂಧಿಸಿದಂತೆ ಅಶೌಚತಾ ಭಾವನೆ ಎಲ್ಲಾ ದೇಶಗಳಲ್ಲೂ ಕಂಡು ಬರುತ್ತದೆ. ಆದರೆ ಭಾರತದಲ್ಲಿ ಮೇಲ್ ಜಾತಿ ಹಿಂದೂಗಳಲ್ಲಿ ಈ ಮೈಲಿಗೆ ಪದ್ಧತಿ ಇದ್ದು ಅವಧಿ ಕಳೆದ ನಂತರ ಶೌಚ್ಯ ಮಾಡುವ ಕ್ರಿಯೆಗಳಿಂದ ಮೇಲ್‌ಜಾತಿಯವರಿಗೆ ಮೈಲಿಗೆ ವ್ಯವಸ್ಥೆಯಿಂದ ಮುಕ್ತರಾಗುವುದು ಇದೆ. ಆದರೆ ಅಸ್ಪೃಶ್ಯತೆ ಉಂಟು ಮಾಡುವ ಮೈಲಿಗೆ ತೀವ್ರ ಸ್ವರೂಪವಾದುದ್ದು, ಭಯಂಕರವಾದದ್ದು, ಅಸ್ಪೃಶ್ಯತೆಯನ್ನು ಶುದ್ಧಗೊಳಿಸುವ ಯಾವುದೇ ಮಾರ್ಗೋಪಯಕ್ಕೆ ಆಸ್ಪದವೇ ಇಲ್ಲ ಎಂಬುದನ್ನು ಅಂಬೇಡ್ಕರ್ ಎತ್ತಿ ತೋರಿಸಿದ್ದಾರೆ. (ಸಂಪುಟ–09 ಅಂಬೇಡ್ಕರ್‌ರವರ ಬರಹಗಳು ಮತ್ತು ಭಾಷಣಗಳು ಪುಸ್ತಕದಲ್ಲಿ ಉಲ್ಲೇಖಿತ)

ಬದಲಾಗುತ್ತಿರುವ ಭಾರತೀಯ ಸಮಾಜದಲ್ಲಿ ದಲಿತರ ಕುರಿತು ಬಹುಭಾಗ ಸವರ್ಣೀಯರಲ್ಲಿ ಧೋರಣೆ ಮಾತ್ರ ಬದಲಾವಣೆಯಾದಂತೆ ಕಾಣುವುದೇ ಇಲ್ಲ. ಭಾರತೀಯ ಸಾಮಾಜಿಕ ಸಂರಚನೆಯ ಜತೆ ಅಂಟಿಕೊಂಡಿರುವ ಶ್ರೇಣೀಕೃತ ವರ್ಣ ಪದ್ಧತಿಯ ಕೊಳಕು ಇದಕ್ಕೆ ಕಾರಣವಾಗಿದೆ.

ಹಳೇ ಮೈಸೂರು ಪ್ರಾಂತದಲ್ಲಿ ಮೈಸೂರು ಮಹಾರಾಜರು ಮಹಾರಾಷ್ಟ್ರದ ಸಾಹು ಮಹಾರಾಜರು ದಲಿತರಿಗೆ ನೀಡಿದ ಮೀಸಲಾತಿ ಪ್ರಭಾವಕ್ಕೆ ಒಳಗಾಗಿದಂತೆ ಕಾಣುತ್ತದೆ. ಮೈಸೂರಿನಲ್ಲಿ, ಅಂದಿನ ದಿವಾನರಾಗಿದ್ದ ಮಿರ್ಜಾರವರು ಸೇರಿದಂತೆ ದೀನ ದಲಿತರ ಬಗ್ಗೆ ಅಪಾರ ನಂಬಿಕೆ ಇಟ್ಟಿದ್ದ ಆರ್. ಗೋಪಾಲಸ್ವಾಮಿ ಐಯ್ಯರ್ ರವರ ಮೂಲಕ ಅಂದಿನ ಪರಿಶಿಷ್ಠ ಜಾತಿ ಜನರಿಗೆ ಶಿಕ್ಷಣ ನೀಡಲು ಮುಂದಾದರು ಮೈಸೂರಿನಲ್ಲಿ ಬೆಂಗಳೂರಿನಲ್ಲಿ ಹಾಸ್ಟೆಲ್‌ಗಳನ್ನು ಆರಂಭಿಸಿದರು. ಇವರ ಪ್ರಜ್ಞಾವಂತ ಶ್ರಮಫಲವಾಗಿ ರಾಜ್ಯದಲ್ಲಿ ಅಂದಿಗೆ ಸರಿಸುಮಾರು 20 ಮಂದಿ ಪರಿಶಿಷ್ಠ ಜಾತಿಯವರು ಹೊಲೆಯ, ಮಾದಿಗರು ಸೇರಿದಂತೆ ಉನ್ನತ ಶಿಕ್ಷಣ ಪಡೆದರು. ಐ.ಎ.ಎಸ್. ಅಧಿಕಾರಿಗಳಾದರು, ರಾಜಕಾರಣಿಯಾದರು, ಸಚಿವರಾದರು, ಅಧಿಕಾರಿಗಳಾದರು, ಸಾಮಾಜಿಕ ಕಾರ್ಯಕರ್ತರಾದರು ಎಂಬುದು ನಮ್ಮ ಕಣ್ಮುಂದೆ ಇದೆ.

ಮೀಸಲಾತಿ ಜಾರಿ ಬಗ್ಗೆ ಸರ್ಕಾರಗಳ ಅಸಡ್ಡೆ :

ಡಾ॥ಬಿ.ಆರ್.ಅಂಬೇಡ್ಕರ್‌ರವರ ಹೋರಾಟದಿಂದ, ಅವರ ಪರಿಶ್ರಮದಿಂದ ಸಂವಿಧಾನಾತ್ಮಕ ಹಕ್ಕಾಗಿ ಮೀಸಲಾತಿ ಜಾರಿಯಾಯಿತು. ಅಂದಿನಿಂದ ಶೇ.18 ಮೀಸಲಾತಿಯ ಅನುಕೂಲಗಳನ್ನು ಒದಗಿಸಲಾಗಿದೆ. ಹೊಲೆಯರು–ಮಾದಿಗರಲ್ಲಿ ಆರಂಭದಲ್ಲಿ ಭಿನ್ನತೆಗಳು ಇದ್ದಂತೆ ಕಾಣುವುದಿಲ್ಲ. ಪರಿಶಿಷ್ಠ ಜಾತಿಯಲ್ಲಿ ಈ ಎರಡು ವಿಭಾಗಗಳು ಪ್ರಬಲ ವಿಭಾಗಗಳೇ. ಅಸ್ಪೃಶ್ಯತೆ ಸಂಕಷ್ಟಗಳನ್ನು ಇಬ್ಬರೂ ಅನುಭವಿಸಿದವರೇ, ಅಸ್ಪೃಶ್ಯತೆ ಆಚರಣೆಯಲ್ಲಿ ಇಬ್ಬರಲ್ಲಿ ವ್ಯತ್ಯಾಸವೇನಿಲ್ಲ ಎನ್ನಬಹುದು.

ಹೊಲೆಯ ಮಾದಿಗರು ಭಿನ್ನತೆ ಇಲ್ಲದೆ ಮೀಸಲಾತಿ ಜಾರಿಗೆ ಹೋರಾಟ ನಡೆಸಿದವರು. ಮೀಸಲಾತಿ ಜಾರಿಗೊಳಿಸುವ ಹಾದಿಯಲ್ಲಿ ಸಾಗಿದವರು. ಇದರಿಂದ ಪರಿಶಿಷ್ಠ ಜಾತಿಯ ಸಣ್ಣ ವಿಭಾಗ ಶಿಕ್ಷಣ, ಸಾಮಾಜಿಕ, ರಾಜಕೀಯ, ಉದ್ಯೋಗ, ಅಧಿಕಾರದ ಸೌಲಭ್ಯಗಳನ್ನು ಪಡೆಯುವಂತಾಗಿದೆ. ಆದರೆ ಇದುವರೆವಿಗೂ ಮೀಸಲಾತಿ ಪೂರ್ಣಪ್ರಮಾಣದಲ್ಲಿ ಜಾರಿಯಾಗಲೇ ಇಲ್ಲ. ಸಂವಿಧಾನಾತ್ಮಕ ಹಕ್ಕು ಜಾರಿಯಾದಾಗಿನಿಂದ ಹತ್ತು ವರ್ಷ ಮೀಸಲಾತಿ ಜಾರಿಯಲ್ಲಿರಬೇಕು. ಆಹೊತ್ತಿಗೆ ಮೀಸಲಾತಿ ಸೌಲಭ್ಯಗಳನ್ನು ಎಲ್ಲಾ ಹಂತಗಳಲ್ಲೂ, ಎಲ್ಲಾ ಪರಿಶಿಷ್ಟ ಜಾತಿಯವರಿಗೆ ಸಿಗಬೇಕೆಂದು ಡಾ॥ಬಿ.ಆರ್.ಅಂಬೇಡ್ಕರ್‌ರವರು ಹೇಳಿದ್ದರು. ಅದು ಅವರ ಮನದಾಳದ ಆಸೆಯೂ ಆಗಿತ್ತು. ದೇಶದ ಇತರ ಜಾತಿಯವರಂತೆ ಸಮಾನವಾಗಿ ಬದುಕಬೇಕೆಂದು ಇಚ್ಛಿಸಿದ್ದರು.

ಆದರೆ ನಮ್ಮ ದೇಶವನ್ನು ಧೀರ್ಘಕಾಲ ಆಳಿದ ಕಾಂಗ್ರೆಸ್ ಪಕ್ಷ ದಲಿತರನ್ನು ಮತಬ್ಯಾಂಕ್‌ಗಳಾಗಿ ಪರಿವರ್ತಿಸಿಕೊಂಡು ನಾಯಿಗೆ ರೊಟ್ಟಿ ಹಾಕುವ ರೂಪದಲ್ಲಿ ಉಳುವವನೇ ಹೊಲದೊಡೆಯ, ಗರೀಬಿ ಹಟಾವೋ, 20 ಅಂಶಗಳ ಕಾರ್ಯಗಳ ಮೂಲಕ ದಲಿತರಿಗೆ ಭೂಮಿ, ಮುಂತಾದ ಸವಲತ್ತುಗಳನ್ನು ಕೊಡುವ ಕೆಲವು ತೋರಿಕೆಯ ಕಾನೂನುಗಳನ್ನು ತಂದು ಕೋತಿ ಮೂತಿಗೆ ಬೆಣ್ಣೆ ಸವರಿದ ನೀತಿ ಅನುಸರಿಸಿಕೊಂಡು ಬಂದಿತು. ಪರಿಶಿಷ್ಠ ಜಾತಿಗಳನ್ನು ಸದಾ ವಂಚನೆಯ ಅಮಲಿನಲ್ಲೇ ಸಾಗಿಸುತ್ತಾ ಬಂದಿರುವುದು ನಮ್ಮ ದೇಶದ ದುರಂತವೇ. ಅದೇ ರೀತಿ ಬಿಜೆಪಿ ಮತ್ತು ಇತರೆ ಬಲಪಂಥೀಯ ಪಕ್ಷಗಳು ದಲಿತರನ್ನು ಕಡೆಗಣಿಸಿವೆ. ಆದರೆ ಕಮ್ಯೂನಿಸ್ಟ್ ಪಕ್ಷಗಳು ಅಧಿಕಾರ ನಡೆಸಿದ ರಾಜ್ಯಗಳಲ್ಲಿ ಸಾಮಾಜಿಕ ನ್ಯಾಯ ಒದಗಿಸುವ ಪ್ರಯತ್ನಗಳನ್ನು ಪ್ರಾಮಾಣಿಕವಾಗಿ ಮಾಡಿವೆ. ದಲಿತರ ಅಭಿವೃದ್ಧಿಯಲ್ಲಿ ಆಗಿರುವ ಈ ಅಧಿಕಾರದ ಅಸಡ್ಡೆ ಪರಿಣಾಮವಾಗಿ ಇಂದು ಹೊಲೆಯ–ಮಾದಿಗ– ಇತರೆ ಗುಂಪುಗಳ ಒಳ ಸಂಘರ್ಷಕ್ಕೆ ಹಾದಿ ಮಾಡಿಕೊಟ್ಟಿದೆ ಎನ್ನುವುದು ನಿಜ. ಮೇಲ್ ಜಾತಿ ಸವರ್ಣೀಯರಿಗೂ ಬೇಕಾದ್ದು ಇದೆ. ಪರಿಶಿಷ್ಠ ಜಾತಿಗಳ ಒಡಕಿನ ಕಿತ್ತಾಟದಿಂದ ಮೀಸಲಾತಿ ಲಾಭ ಬೇರೆಯವರ ಪಾಲಾಗಿದೆ. ಎಂಬುದು ತಿಳಿಯದ ವಿಷಯವೇನಲ್ಲ.

ಒಳ ಮೀಸಲಾತಿ ಪ್ರಶ್ನೆ :

ರಾಜ್ಯದಲ್ಲಿ ಒಳ ಮೀಸಲಾತಿಯ ಪರ ವಿರೋಧ ಪ್ರತಿಭಟನೆಗಳು ನಡೆಯುತ್ತಿವೆ. ಮಾದಿಗ ದಂಡೋರ, ಮಾದಿಗ ಹೋರಾಟ ಸಮಿತಿಗಳು ಬಹಳ ಹಿಂದಿನಿಂದಲೂ ಒಳಮೀಸಲಾತಿ ಜಾರಿಗೆ ಒತ್ತಾಯಿಸುತ್ತಾ ಬಂದಿವೆ. ಜನಸಂಖ್ಯೆ ಆಧಾರದಲ್ಲಿ ರಾಜಕೀಯ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕವಾಗಿ ಉದ್ಯೋಗದಲ್ಲಿ ಒಳ ಮೀಸಲಾತಿ ನೀಡಬೇಕೆಂದು ಕೇಳುತ್ತಿದ್ದಾರೆ. ಮೇಲ್ನೋಟಕ್ಕೆ ಇದು ನ್ಯಾಯ ಸಮ್ಮತವೇ ಆಗಿದೆಯಾದರೂ, ಪರಿಶಿಷ್ಠ ಜಾತಿಯಲ್ಲಿ ಆಗಿರುವ ಅಭಿವೃದ್ಧಿ ಕೊರತೆಗಳಿಗೆ ಮುಂದಿನ ಪರಿಹಾರ ಕಂಡುಕೊಳ್ಳಲು ಸರ್ಕಾರ ನ್ಯಾಯಮೂರ್ತಿ ಸದಾಶಿವ ಆಯೋಗ ರಚನೆ ಮಾಡಿತು. ರಾಜಕೀಯ ಇಚ್ಛಾಶಕ್ತಿಯ ಕೊರತೆಯಿಂದ ಆಯೋಗ ಈ ವರದಿ ತಯಾರಿಸಲು ದುರ್ಗಮ ಹಾದಿಯಲ್ಲೇ ಸಾಗಬೇಕಾಯಿತು ಎಂದಿದೆ. ಕೊನೆಗೆ ಅವರು ಬೇಸತ್ತು ಸರ್ಕಾರದ ಅಸಹಕಾರದ ವಿರುದ್ಧ ಪತ್ರಿಕಾಗೋಷ್ಠಿ ನಡೆಸಿ ಗುಡುಗಿದ್ದರು. ಕಷ್ಟಕರವಾದ ಸಮಸ್ಯೆಗಳನ್ನೇ ಎದುರಿಸಿರುವುದನ್ನು ಸ್ವತಃ ನ್ಯಾಯಮೂರ್ತಿ ಸದಾಶಿವರವರೇ ಹೇಳಿಕೊಂಡಿದ್ದಾರೆ. 2005 ಸೆಪ್ಟಂಬರ್‌ನಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿತ್ತು. ಅಂದಿನ ಮುಖ್ಯಮಂತ್ರಿ ಧರ್ಮಸಿಂಗ್ ನ್ಯಾಯಮೂರ್ತಿ ಸದಾಶಿವ ಆಯೋಗ ನೇಮಿಸಿ ಪರಿಶಿಷ್ಟರ ಅಧ್ಯಯನಕ್ಕೆ ಚಾಲನೆ ನೀಡಿತು. ಆದರೆ ನ್ಯಾಯಮೂರ್ತಿ ಸದಾಶಿವ ಆಯೋಗಕ್ಕೆ ಯಾವುದೇ ಹಣಕಾಸು ಮಾತ್ರ ನೀಡಲಿಲ್ಲ. ನಂತರ ಅಧಿಕಾರಕ್ಕೆ ಬಂದ ಮುಖ್ಯಮಂತ್ರಿ ಯಡಿಯೂರಪ್ಪ ರವರು ಹಣಕಾಸು ನೀಡಿದರೂ ಸರ್ಕಾರದ ಅಸಹಕಾರ ಹಾಗೂ ವಿಳಂಬ ನೀತಿಗಳು ತೊಡಕ್ಕುಂಟು ಮಾಡಿದವು. ಎನ್ನುವುದು ಅಷ್ಟೇ ಸತ್ಯ. ಕೊನೆಗೆ ಮುಖ್ಯಮಂತ್ರಿ ಸದಾನಂದಗೌಡ ಅಧಿಕಾರಕ್ಕೆ ಬಂದಾಗ ನ್ಯಾಯಮೂರ್ತಿ ಸದಾಶಿವರವರು ರಾಜ್ಯ ಸರ್ಕಾರಕ್ಕೆ ಆಯೋಗದ ವರದಿಯನ್ನು ಮುಂಡಿಸಿದರು. ನಂತರ ಬಂದ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಆ ವರದಿಯತ್ತ ಕಣ್ಣೆತ್ತಿಯು ನೋಡಲೇ ಇಲ್ಲ. ಮತ್ತೆ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂತು. ಅಹಿಂದ ಮುಖ್ಯಮಂತ್ರಿಗಳಾದ ಸಿದ್ಧರಾಮಯ್ಯ ಮತ್ತು ಸಮಾಜ ಕಲ್ಯಾಣ ಸಚಿವರು ಇತ್ತಿಚಿಗೆ ಹುಬ್ಬಳ್ಳಿಯಲ್ಲಿ ನಡೆದ ಮಾದಿಗರ ಸಮಾವೇಶದಲ್ಲಿ ಸದಾಶಿವ ಆಯೋಗದ ವರದಿ ಜಾರಿ ಬಗ್ಗೆ ಭರವಸೆ ನೀಡಿದ್ದಾರೆ. ಆದರೆ ಇದೇ ಸಂದರ್ಭದಲ್ಲಿ ಕೆಲವು ಸ್ಪೃಶ್ಯ ಪರಿಶಿಷ್ಟ ಜಾತಿ ಗುಂಪುಗಳ ಶಾಸಕರು, ಸಚಿವರುಗಳು ವಿರೋಧವನ್ನು ವ್ಯಕ್ತಪಡಿಸಿದ್ದಾರೆ.

ನ್ಯಾಯಮೂರ್ತಿ ಸದಾಶಿವ ಆಯೋಗದಲ್ಲಿ ಏನಿದೆ ಎನ್ನುವ ಬಗ್ಗೆ ಅಧಿಕೃತ ವರದಿ ಇನ್ನೂ ಪ್ರಕಟವಾಗಿಲ್ಲ. ಸಿಕ್ಕಿರುವ ಮಾಹಿತಿಗಳ ಪ್ರಕಾರ ಆಯೋಗ 1. ಎಡಗೈ(ಮಾದಿಗ ಜನಾಂಗ), 2. ಬಲಗೈ(ಹೊಲೆಯ ಜನಾಂಗ), 3. ಇತರೆ ಜಾತಿ ಕೊರಮ, ಕೊರಚ ಇತ್ಯಾದಿ 4. ಸ್ಪೃಶ್ಯ ಜಾತಿಗಳು (ಲಂಬಾಣಿ, ಭೋವಿ, ಇತ್ಯಾದಿ) ಎಂಬ ನಾಲ್ಕು ಉಪ ವಿಭಾಗಗಳಾಗಿ ವಿಂಗಡಿಸಲಾಗಿದೆ ಎನ್ನುತ್ತಾರೆ. ಶೇ.15ರ ಮೀಸಲಾತಿಯನ್ನು ಈ ವಿಭಾಗಗಳ ನಡುವೆ ಹಂಚಿಕೆ ಮಾಡಲಾಗಿದೆ. ಶೇ. 33.47 ರಷ್ಟಿರುವ ಎಡಗೈ ಜನಾಂಗಕ್ಕೆ ಶೇಕಡಾ 6, ಶೇ.32ರಷ್ಟಿರುವ ಬಲಗೈ ಜನಾಂಗಕ್ಕೆ ಶೇ.5, ಶೇ.4.65ರಷ್ಟಿರುವ ಇತರೆ ಜಾತಿಗಳಿಗೆ ಶೇ.3 ಮತ್ತು ಶೇ. 23.4 ರಷ್ಟಿರುವ ಸ್ಪೃಶ್ಯ ಜಾತಿಗಳಿಗೆ ಶೇ.1ರಷ್ಟು ಮೀಸಲಾತಿಯನ್ನು ಹಂಚಿಕೆ ಮಾಡಬೇಕೆಂದು ಶಿಫಾರಸ್ಸು ಮಾಡಲಾಗಿದೆ ಎಂದು ಹೇಳುತ್ತಿದ್ದಾರೆ. ಸ್ಪೃಶ್ಯಜಾತಿ ಹೆಚ್ಚು ಸವಲತ್ತು ಪಡೆದಿರುವುದನ್ನು ಗುರುತಿಸಿದೆ. ಅಸ್ಪೃಶ್ಯರು ಇಂದಿಗೂ ಜಾತಿ ತಾರತಮ್ಯ, ದೌರ್ಜನ್ಯಕ್ಕೆ ತುತ್ತಾಗಿರುವುದು ಜೀವಂತವಾಗಿದೆ ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ.

ಪುಟ 15 ಕ್ಕೆ

ಸರಕಾರಿ ಕಛೇರಿಗಳಲ್ಲಿ ದಲಿತ ಶೇಕಡಾವಾರು ಪ್ರಾತಿನಿಧ್ಯ

ಸೇವಾ ವರ್ಗ	1965	1970	1975	1980	1984	1992
ಎ	1.64	2.36	3.43	4.83	6.92	9.7
ಬಿ	2.82	3.84	4.98	5.07	10.36	11.6
ಸಿ	8.85	9.27	10.71	11.54	13.98	15.8
ಡಿ	17.75	18.09	18.65	19.16	20.2	20.9

ಸಾರ್ವಜನಿಕ ಉದ್ದಿಮೆಗಳಲ್ಲಿ ದಲಿತರ ಶೇಕಡಾವಾರು ಪ್ರಾತಿನಿಧ್ಯ

ಸೇವಾ ವರ್ಗ	1974	1975	1980	1981	1983	1984	1985	1992
ಎ	1.19	1.44	2.9	3.18	3.56	3.93	4.12	6.69
ಬಿ	2.96	3.02	5.11	6.12	5.52	5.38	5.5	9.92
ಸಿ	13.18	13.73	18.08	18.15	16.09	18.23	18.34	16.82
ಡಿ	26.7	26.29	22.36	20.89	34.28	27.27	27.20	23.25
ಇ	–	–	64.69	81.62				71.91
ಒಟ್ಟು	11.89		18.35		20.01			17.76

ರಾಷ್ಟ್ರೀಯ ಬ್ಯಾಂಕುಗಳಲ್ಲಿ ದಲಿತರ ಶೇಕಡವಾರು ಪ್ರಾತಿನಿಧ್ಯ

ವರ್ಷ	ಅಧಿಕಾರಿಗಳು	ಕಾರಕೂನರು	ಕೆಳಸ್ತರ ಸಿಬ್ಬಂದಿ
1975	0.58	4.34	11.13
1979	2.44	11.51	19.45
1980	2.98	12.11	20.98
1981	3.88	12.77	21.37
1983	4.64	12.96	22.35
1984	4.05	13.48	22.95
1985	5.72	13.83	23.79
1992	11.12	14.31	21.97

ಹೊಸ ವರ್ಷ ... ಹೊಸ ಸವಾಲುಗಳು

ಬೇಕಿವೆ ಇನ್ನಷ್ಟು ಪ್ರಖರ ಹೋರಾಟಗಳು

* ಪ್ರಕಾಶ್ ಕಾರಟ್

ಸಾಮಾನ್ಯವಾಗಿ ಉತ್ತಮ ನಿರೀಕ್ಷೆಗಳು ಮತ್ತು ಆಶಾವಾದದೊಂದಿಗೆ ಹೊಸ ವರ್ಷವನ್ನು ಸ್ವಾಗತಿಸಲಾಗುತ್ತದೆ. ಆದರೆ ಆ ಸಂಪ್ರದಾಯಕ್ಕೆ ಇದು ಕಾಲವಲ್ಲ. ಜಗತ್ತಿನಾದ್ಯಂತ ಬಲಪಂಥೀಯ ಶಕ್ತಿಗಳು, ವಲಸಿಗ–ವಿರೋಧಿ ದಬ್ಬಾಳಿಕೆ ಮತ್ತು ಜನಾಂಗವಾದ ಹೆಚ್ಚುತ್ತಿದೆ. ಭಾರತದಲ್ಲಿ ಅವರ ಸೈದ್ಧಾಂತಿಕ ಆತ್ಮೀಯರದ್ದೇ ಕಾರುಬಾರು. ಇದು ಹೆಚ್ಚೆಚ್ಚು ಸರ್ವಾಧಿಕಾರಶಾಹಿಯ, ಜನರ ಆರ್ಥಿಕ ಹಕ್ಕುಗಳ ಮೇಲೆ ಹೆಚ್ಚೆಚ್ಚು ಬಲಪಂಥೀಯ ದಾಳಿಗಳು ಮತ್ತು ಹೆಚ್ಚೆಚ್ಚು ಕೋಮುವಾದದ ದುಷ್ಟ ಲಕ್ಷಣ. ಈ ಆಕ್ರಮಣಗಳನ್ನು ದೂರ ಮಾಡಲು ಮತ್ತು ಪರ್ಯಾಯವೊಂದಕ್ಕಾಗಿ ಹೋರಾಡಲು ಜನರನ್ನು ಒಗ್ಗೂಡಿಸಲು ಎಡಪಕ್ಷಗಳು, ಪ್ರಜಾಸತ್ತಾತ್ಮಕ ಮತ್ತು ಪ್ರಗತಿಪರ ಶಕ್ತಿಗಳು ಪಣ ತೊಡಬೇಕಾಗಿದೆ.

ಭಾರತದ ಕೋಟ್ಯಂತರ ಜನರಿಗೆ 2017ನೆ ವರ್ಷ ತುಂಬಾ ನಿರುತ್ಸಾಹದಿಂದ ಆರಂಭವಾಗುತ್ತಿದೆ. ಅವರು ತಮ್ಮ ಜೀವನೋಪಾಯಗಳನ್ನು ಕಳೆದುಕೊಂಡಿದ್ದಾರೆ ಮತ್ತು ಅವರು ಕಷ್ಟಪಟ್ಟು ದುಡಿದಿದ್ದಕ್ಕೆ ಕೂಲಿಯೂ ಸಿಗುತ್ತಿಲ್ಲ. ಶ್ರಮಪಟ್ಟು ಗಳಿಸಿ ಉಳಿಸಿದ ಸಣ್ಣಪುಟ್ಟ ಉಳಿತಾಯದ ಹಣ ಕೂಡ ಬ್ಯಾಂಕ್‌ಗಳಲ್ಲಿ ಬಂಧಿಯಾಗಿದ್ದು ಅವರಿಗೆ ಬಳಸಲೂ ಸಿಗುತ್ತಿಲ್ಲ. ನರೇಂದ್ರ ಮೋದಿ ನವೆಂಬರ್ ಎಂಟರಂದು ಸರ್ವಾಧಿಕಾರಿ ರೀತಿಯಲ್ಲಿ ಘೋಷಿಸಿದ ಅನಾಣ್ಯೀಕರಣ ಈ ಎಲ್ಲಾ ನೋವುಗಳಿಗೆ ಕಾರಣವಾಗಿದೆ. 500 ಮತ್ತು 1000 ರೂಪಾಯಿ ಮುಖಬೆಲೆಯ ಹಳೆಯ ನೋಟುಗಳನ್ನು ಬ್ಯಾಂಕ್‌ಗಳಿಗೆ ಜಮೆ ಮಾಡುವ ಅವಧಿ ಡಿಸೆಂಬರ್ 30ರಂದು ಮುಗಿದಿದ್ದು ಮೋದಿ ಕೇಳಿದ್ದ 50 ದಿನಗಳ ಗಡವು ಕೂಡ ಮುಗಿದಿದ್ದು ಜನರ ಸಂಕಷ್ಟಗಳು ಮಾತ್ರ ದೂರವಾಗುವ ಲಕ್ಷಣವಿಲ್ಲ. ಹೀಗಾಗಿ ಹೊಸ ವರ್ಷ ಕೂಡ ಜನರ ಮೇಲಿನ ನಗದು ಸಮರದೊಂದಿಗೇ ಆರಂಭವಾಗುತ್ತಿದೆ.



500 ಮತ್ತು 1000 ರೂಪಾಯಿ ನೋಟುಗಳನ್ನು ಹಠಾತ್ತನೆ ವಾಪಸ್ ಪಡೆದಿದ್ದರಿಂದ ಮತ್ತು ಹೊಸ ಕರೆನ್ಸಿ ನೋಟುಗಳ ಅಲಭ್ಯತೆಯಿಂದಾಗಿ ಉಂಟಾದ ನಗದು ಕೊರತೆಯಿಂದಾಗಿ ದೇಶದ ಆರ್ಥಿಕತೆ ಮೇಲೆ ದುಷ್ಪರಿಣಾಮ ಆಗಿದೆ. ಉತ್ಪ್ರೇಕ್ಷಿಸಿ ತೋರಿಸಿದ ಜಿಡಿಪಿ ಬೆಳವಣಿಗೆಯ ಅಂಕಿಸಂಖ್ಯೆಗಳ ಹೊರತಾಗಿಯೂ ಅನಾಣ್ಯೀಕರಣಕ್ಕಿಂತ ಮುಂಚೆಯೂ ಆರ್ಥಿಕ ಪರಿಸ್ಥಿತಿಯು ತೀರಾ ಮಂಕಾಗಿತ್ತು. 2016ರ ಎಪ್ರಿಲ್‌ನಿಂದ ಅಕ್ಟೋಬರ್‌ವರೆಗೆ ಕೈಗಾರಿಕೆ ಉತ್ಪಾದನೆ 0.3ರಷ್ಟು ಕುಸಿದಿತ್ತು. ರಫ್ತು ಪ್ರಮಾಣದಲ್ಲಿ ತಾಳಿಕೆಯ ಪುನರುಜ್ಜೀವನ ಕಂಡುಬಾರದ್ದರಿಂದ ವಾಣಿಜ್ಯ ಕೊರತೆ ಮುಂದುವರಿದು ಇನ್ನಷ್ಟು ಹೆಚ್ಚಿತ್ತು. ಸತತ ಎರಡು ವರ್ಷಗಳ ಬರಗಾಲದ ನಂತರ ಕೃಷಿ ಉತ್ಪಾದನೆ ಹೆಚ್ಚಾಗುವ ನಿರೀಕ್ಷೆಗೆ ಹೊಡೆತ ಬಿದ್ದಿದೆ. ನಗದು ಕೊರತೆಯಿಂದಾಗಿ ಗ್ರಾಮೀಣ ಆರ್ಥಿಕತೆ ಸ್ಥಗಿತಗೊಂಡಿರುವುದು ಇದಕ್ಕೆ ಕಾರಣ. ಎಲ್ಲಾ ರಂಗಗಳಲ್ಲಿಯೂ ಉತ್ಪಾದನೆಯಲ್ಲಿ ಗಮನಾರ್ಹ ಕುಸಿತವಾಗಿದ್ದು ಗ್ರಾಹಕರ ಬೇಡಿಕೆಯಲ್ಲಿ ಕೂಡ ಇಳಿಕೆಯಾಗಿದೆ.

ಇದು ಮುಂಬರುವ ವರ್ಷಗಳಲ್ಲಿ ಉದ್ಯೋಗರಾಹಿತ್ಯತೆ ಮತ್ತು ಆದಾಯದಲ್ಲಿ ಕುಸಿತವಾಗಿ ಜನರಿಗೆ ಸಂಕಷ್ಟ, ನೋವು ತರಲಿದೆ.

ಈ ವರ್ಷ, ಹಿಜ್ಬುಲ್ ಕಮಾಂಡರ್ ಬುರ್ಹನ್ ವಾನಿ ಹತ್ಯೆಯ ನಂತರ ಕಾಶ್ಮೀರದಲ್ಲಿ ಸ್ಫೋಟಗೊಂಡ ಹಿಂಸಾಚಾರದಿಂದ ಸುದೀರ್ಘ ಬಿಕ್ಕಟ್ಟನ್ನು ಕಂಡಿತು. ಭದ್ರತಾ ಪಡೆಗಳು ಸಾಮೂಹಿಕ ಪ್ರತಿಭಟನೆಗಳ ಮೇಲೆ ಮಾಡಿದ ಬರ್ಬರ ದಬ್ಬಾಳಿಕೆಯಿಂದಾಗಿ 85ಕ್ಕೂ ಹೆಚ್ಚು ಜನರು ಮೃತಪಟ್ಟರು. ಅವರಲ್ಲಿ ಹೆಚ್ಚಿನವರು ಯುವಕರು ಮತ್ತು ಬಾಲಕರು. ಅಲ್ಲಿ ಬಳಸಿದ ಪೆಲ್ಲೆಟ್ ಗನ್‌ಗಳಿಂದಾಗಿ ಅನೇಕ ಯುವಕರು ಅಂಧರಾಗಿದ್ದಕ್ಕೂ ಜಗತ್ತು ಸಾಕ್ಷಿಯಾಯಿತು. ಜಮ್ಮು ಮತ್ತು ಕಾಶ್ಮೀರದಲ್ಲಿ ಸಂಬಂಧಪಟ್ಟವರೊಂದಿಗೆ ರಾಜಕೀಯ ಮಾತುಕತೆ ಆರಂಭಿಸಲು ಮೋದಿ ಸರಕಾರ ನಿರಾಕರಿಸಿತು. ಇದರಿಂದಾಗಿ ಭಾರತವು ಕಾಶ್ಮೀರ ಕಣಿವೆಯನ್ನು ಆಕ್ರಮಿಸಿಕೊಂಡಿರುವ ಶಕ್ತಿ ಎಂಬ ಭಾವನೆ ಇನ್ನಷ್ಟು ಬಲವಾಯಿತು.

ಭಯೋತ್ಪಾದನೆ ವಿರುದ್ಧ ಹೋರಾಡುವ ಹೆಸರಿನಲ್ಲಿ ಜನರ ಬಂಡಾಯವನ್ನು ಹತ್ತಿಕ್ಕಲು ಮೋದಿ ಸರಕಾರ ಹರಿಯಬಿಟ್ಟ ರಾಷ್ಟ್ರೀಯ ಸಂಕುಚಿತವಾದಕ್ಕೆ ಕಾಶ್ಮೀರದ ಜನರು ಬಲಿಪಶುವಾದರು

ಪಾಕಿಸ್ತಾನದ ಜೊತೆ ಹದಗೆಟ್ಟ ಸಂಬಂಧ ಮತ್ತು ಉಭಯ ದೇಶಗಳ ನಡುವಣ ಸಂವಾದ ಪ್ರಕ್ರಿಯೆ ಕುಸಿದುಬಿದ್ದಿದ್ದು ಈ ರಾಷ್ಟ್ರೀಯ ಸಂಕುಚಿತವಾದ ದೇಶಭಕ್ತಿಯ ವಿಸ್ತರಣೆಯಾಗಿದೆ. ಸೆಪ್ಟೆಂಬರ್ ಕೊನೆಯಲ್ಲಿ ನಡೆಸಿದ 'ಮಿಂಚಿನ ಪ್ರಹಾರ' ಮೋದಿ ಸರಕಾರದ ಯುದ್ಧಾಕಾಂಕ್ಷಿ ಮನೋಸ್ಥಿತಿಯ ದ್ಯೋತಕವಾಗಿದೆ. ಮೋದಿ ಒಬ್ಬ ಬಲಿಷ್ಟ ಹಾಗೂ ನಿರ್ಣಾಯಕ ನಾಯಕ ಎಂಬ ಇಮೇಜನ್ನು ಕಟ್ಟಲು ಈ ದಾಳಿಗಳನ್ನು ವ್ಯಾಪಕವಾಗಿ ಬಳಸಿಕೊಳ್ಳಲಾಯಿತು. 'ಮಿಂಚಿನ ಪ್ರಹಾರ'ದ ಬೆನ್ನಲ್ಲೇ ಬಾರಾಮುಲ್ಲಾ ಮತ್ತು ನಗ್ರೋತಾದಲ್ಲಿ ನಡೆದ ಭಯೋತ್ಪಾದಕರ ದಾಳಿಗಳು ಈ ಸೀಮಿತ ದಾಳಿಗಳ ಭ್ರಮಾತ್ಮಕ ಯಶಸ್ಸಿಗೆ ಸಾಕ್ಷಿಯಾದವು. ಭಯೋತ್ಪಾದಕರ ದಾಳಿಗಳು ನಿಯಂತ್ರಣಗೊಳ್ಳುವ ಬದಲು ಸೇನಾ ನೆಲೆಗಳ ಮೇಲಿನ ದಾಳಿಗಳಲ್ಲಿ ಹೆಚ್ಚಳವಾಗಿದೆ ಹಾಗೂ ನಿಯಂತ್ರಣ ರೇಖೆಯಲ್ಲಿ ಗಡಿಗುಂಟ ಗುಂಡಿನ ಚಕಮಕಿ ಪ್ರಕರಣಗಳು ಜಾಸ್ತಿಯಾಗಿವೆ. ಜಮ್ಮು ಮತ್ತು ಕಾಶ್ಮೀರದಲ್ಲಿ 2016ರಲ್ಲಿ 63 ಭಾರತೀಯ ಸೈನಿಕರು ಹತರಾಗಿದ್ದಾರೆ, ಇದು ಹಿಂದಿನ ವರ್ಷಕ್ಕಿಂತ ದುಪ್ಪಟ್ಟಾಗಿದೆ.

ಹಿಂದುತ್ವ ವಾದರಿಯ ರಾಷ್ಟ್ರವಾದವು ನಾಗರಿಕರ ಹಕ್ಕುಗಳು ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಅಪಾಯಕಾರಿ ಪರಿಣಾಮ ಉಂಟುಮಾಡಿದೆ. 2016ರ ಆರಂಭದಲ್ಲಿ ಜವಾಹರಲಾಲ್ ನೆಹರೂ ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಸಂಘದ ನಾಯಕರ ಮೇಲೆ ದೇಶದ್ರೋಹದ ಪ್ರಕರಣಗಳನ್ನು ದಾಖಲಿಸಲಾಯಿತು. ರಾಜಕೀಯ ಭಿನ್ನಮತವನ್ನು ಹಾಗೂ ಹಿಂದೂತ್ವಕ್ಕೆ ಒಡ್ಡುವ ವಿರೋಧವನ್ನು 'ದೇಶ–ವಿರೋಧಿ' ಎಂದು ಬ್ರಾಂಡ್ ಮಾಡುವುದು ವರ್ಷಪೂರ್ತಿ ಮುಂದುವರಿಯಿತು. ಲೇಖಕರು ಮತ್ತು ಕಲಾವಿದರ ಮೇಲೆ ಹಲ್ಲೆ ನಡೆಸುವುದು ಹಾಗೂ ಅವೈಚಾರಿಕ ಮೌಲ್ಯಗಳನ್ನು ಪಸರಿಸುವುದು ದಿನನಿತ್ಯದ ಕೆಲಸವಾಗಿ ಬಿಟ್ಟಿದೆ.

ಗೋಹತ್ಯೆ ವಿರೋಧಿ ವಿಷಮಯ ಪ್ರಚಾರ 2015ರಲ್ಲಿ ಮೊಹಮದ್ ಅಖ್ಲಾಕ್ ಹತ್ಯೆಯಲ್ಲಿ ಕೊನೆಗೊಂಡಿತು. ಗೋರಕ್ಷಕರ ದಾಳಿ 2016ರಲ್ಲಿಯೂ ಮುಂದುವರಿದು ಉನಾ ದೌರ್ಜನ್ಯ ನಡೆಯಿತು. ರೊಹಿತ್ ವೇಮುಲ ಸಾವು ಮತ್ತು ಉನಾ ದೌರ್ಜನ್ಯ ದಲಿತ–ವಿರೋಧಿ ಹಿಂದೂತ್ವ ಶಕ್ತಿಗಳ ವಿರುದ್ಧ ದಲಿತರು ಮತ್ತು ಎಡ ಸಂಘಟನೆಗಳ ದೇಶವ್ಯಾಪಿ ಚಳವಳಿಯನ್ನು ಹುಟ್ಟು ಹಾಕಿತು.

ಅಮೆರಿಕದೊಂದಿಗಿನ ಸಂಬಂಧವನ್ನು ಆಳಗೊಳಿಸಲು ಮೋದಿ ಸರಕಾರ ಇನ್ನಷ್ಟು ಹೆಜ್ಜೆಗಳನ್ನಿರಿಸಿತು. ಭಾರತ–ಅಮೆರಿಕ ರಕ್ಷಣಾ ಚೌಕಟ್ಟು ಒಡಂಬಡಿಕೆಯನ್ನು ಹತ್ತು ವರ್ಷ ವಿಸ್ತರಿಸುವ ಒಪ್ಪಂದಕ್ಕೆ 2016ರಲ್ಲಿ ಸಹಿ ಹಾಕಲಾಯಿತು. ಅದರ ಬೆನ್ನಲ್ಲೇ, ಸಮರ ಸಾಗಾಣಿಕೆ ಒಪ್ಪಂದ ಮಾಡಿಕೊಳ್ಳಲಾಯಿತು. ಅದರ ನಂತರ, ಭಾರತವು ಅಮೆರಿಕದ ಒಂದು ಪ್ರಮುಖ ರಕ್ಷಣಾ ಪಾಲುದಾರ ಆಗಿರುತ್ತದೆ ಎಂದು ಘೋಷಿಸಲಾಯಿತು. ಡೊನಾಲ್ಡ್ ಟ್ರಂಪ್ ಅಧ್ಯಕ್ಷರಾಗಿ ಚುನಾಯಿತರಾಗಿರುವುದರಿಂದ ಈ ಅಡಿಯಾಳು ಸಂಬಂಧವನ್ನು ಮೋದಿ ಸರಕಾರ ಬಲಪಡಿಸುತ್ತದೆಂದು ಯಾರು ಬೇಕಾದರೂ ನಿರೀಕ್ಷಿಸಬಹುದು. ಅದರ ಬಲಪಂಥೀಯ ಪರಿಣಾಮಗಳು ಭಾರತದ ಆಂತರಿಕ ನೀತಿಗಳ ಮೇಲೂ ಪರಿಣಾಮ ಬೀರಲಿವೆ.

15 ಕೋಟಿ ಕಾರ್ಮಿಕರು ಮತ್ತು ನೌಕರರನ್ನು ಒಳಗೊಂಡ ಸೆಪ್ಟೆಂಬರ್ 2ರ ಸಾರ್ವತ್ರಿಕ ಮುಷ್ಕರ; ಜಾರ್ಖಂಡ್, ಆಂಧ್ರ ಪ್ರದೇಶ, ತೆಲಂಗಾಣ ಮತ್ತಿತರ ಕಡೆಗಳಲ್ಲಿ ಬಲವಂತದ ಭೂಸ್ವಾಧೀನ ಹಾಗೂ ಒಕ್ಕಲೆಬ್ಬಿಸುವಿಕೆ ವಿರುದ್ಧ ರೈತರು ಮತ್ತು ಬುಡಕಟ್ಟು ಜನತೆ ನಡೆಸಿದ ಹೋರಾಟಗಳು; ಹೈದರಾಬಾದ್ ಕೇಂದ್ರೀಯ ವಿವಿ, ಜೆಎನ್‌ಯು ಮತ್ತು ಇತರ ಶಿಕ್ಷಣ ಸಂಸ್ಥೆಗಳನ್ನು ಕೇಂದ್ರವಾಗಿರಿಸಿ ನಡೆದ ವಿದ್ಯಾರ್ಥಿ ಚಳವಳಿಗಳು; ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ, ಅರಣ್ಯ ಹಕ್ಕುಗಳ ಕಾನೂನು ಮತ್ತು ಸಾರ್ವಜನಿಕ ವಿತರಣೆ ವ್ಯವಸ್ಥೆ ಜಾರಿಗಾಗಿ ಆಗ್ರಹಿಸಿ ನಡೆದ ಅಸಂಖ್ಯಾತ ಹೋರಾಟಗಳು; ಮಹಿಳೆಯರ ವಿರುದ್ಧದ ದೌರ್ಜನ್ಯಗಳ ವಿರುದ್ಧ ಹಾಗೂ ಮಹಿಳೆಯರ ಹಕ್ಕುಗಳಿಗಾಗಿ–ಸಮಾನತೆಗಾಗಿ ನಡೆದ ಹೋರಾಟಗಳು, ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ಹಿಂದೂತ್ವ ಶಕ್ತಿಗಳ ದಾಳಿಗಳ ವಿರುದ್ಧ ಪ್ರತಿಭಟನೆಗಳು ಮತ್ತು ದಲಿತರ ಹಕ್ಕುಗಳಿಗಾಗಿ ಪ್ರತಿಭಟನೆಗಳು– ಇವೆಲ್ಲವೂ 2016ರಲ್ಲಿ ದಾಖಲಾದವು.

ಆದರೆ, ಬಲಪಂಥೀಯ ಆಕ್ರಮಣವನ್ನು ಎದುರಿಸಲು ಅಗತ್ಯವಾದ ರಾಜಕೀಯ ಪ್ರಭಾವ ಬೀರಲು ಈ ಹೋರಾಟಗಳು ಸಾಕಾಗುವುದಿಲ್ಲ, ಹೋರಾಟ ಮತ್ತು ಚಳವಳಿಗಳ ಪ್ರಖರತೆಯೂ ಸಾಕಷ್ಟಿಲ್ಲ. ಮುಂಬರುವ ವರ್ಷದಲ್ಲಿ ಇಂಥ ಹೋರಾಟಗಳನ್ನು ತೀವ್ರಗೊಳಿಸಬೇಕು ಮತ್ತು ಹೊಸ ಕ್ಷೇತ್ರಗಳಲ್ಲಿ ಹಾಗೂ ಹೊಸ ವಿಭಾಗಗಳ ನಡುವೆ ಅವುಗಳನ್ನು ಕೈಗೆತ್ತಿಕೊಳ್ಳಬೇಕು. ಅನಾಣ್ಯೀಕರಣದ ಪರಿಣಾಮವಾಗಿ ಜನತೆ ಎದುರಿಸುತ್ತಿರುವ ಗಂಭೀರ ಆರ್ಥಿಕ ಸಂಕಷ್ಟಗಳ ಹಿನ್ನೆಲೆಯಲ್ಲಿ ಇದು ವಿಶೇಷವಾಗಿ ಅಗತ್ಯ.

ಸಾಮಾನ್ಯವಾಗಿ ಉತ್ತಮ ನಿರೀಕ್ಷೆಗಳು ಮತ್ತು ಆಶಾವಾದದೊಂದಿಗೆ ಹೊಸ ವರ್ಷವನ್ನು ಸ್ವಾಗತಿಸಲಾಗುತ್ತದೆ. ಆದರೆ ಆ ಸಂಪ್ರದಾಯಕ್ಕೆ ಇದು ಕಾಲವಲ್ಲ. ಜಗತ್ತಿನಾದ್ಯಂತ ಬಲಪಂಥೀಯ ಶಕ್ತಿಗಳು, ವಲಸಿಗ–ವಿರೋಧಿ ದಬ್ಬಾಳಿಕೆ ಮತ್ತು ಜನಾಂಗವಾದ ಹೆಚ್ಚುತ್ತಿದೆ. ಭಾರತದಲ್ಲಿ ಅವರ ಸೈದ್ಧಾಂತಿಕ ಆತ್ಮೀಯರದ್ದೇ ಕಾರುಬಾರು. ಇದು ಹೆಚ್ಚೆಚ್ಚು ಸರ್ವಾಧಿಕಾರಶಾಹಿಯ, ಜನರ ಆರ್ಥಿಕ ಹಕ್ಕುಗಳ ಮೇಲೆ ಹೆಚ್ಚೆಚ್ಚು ಬಲಪಂಥೀಯ ದಾಳಿಗಳು ಮತ್ತು ಹೆಚ್ಚೆಚ್ಚು ಕೋಮುವಾದದ ದುಷ್ಟ ಲಕ್ಷಣ. ಈ ಆಕ್ರಮಣಗಳನ್ನು ದೂರ ಮಾಡಲು ಮತ್ತು ಪರ್ಯಾಯವೊಂದಕ್ಕಾಗಿ ಹೋರಾಡಲು ಜನರನ್ನು ಒಗ್ಗೂಡಿಸಲು ಎಡಪಕ್ಷಗಳು, ಪ್ರಜಾಸತ್ತಾತ್ಮಕ ಮತ್ತು ಪ್ರಗತಿಪರ ಶಕ್ತಿಗಳು ಪಣ ತೊಡಬೇಕಾಗಿದೆ. ಸಾಮೂಹಿಕ ಹಾಗೂ ವರ್ಗ ಹೋರಾಟಗಳ ಮೂಲಕ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಒಗ್ಗಟ್ಟನ್ನು ಸಾಧಿಸಲು ದೃಢವಾಗಿ ಕೆಲಸ ಮಾಡುವುದು ಅಗತ್ಯವಾಗಿದೆ.

ಅನು: ವಿಶ್ವ ●



ಜನನುಡಿ 2016 ಡಿಸೆಂಬರ್ 24–25ರಂದು ಎಂದಿನಂತೆ ಮಂಗಳೂರಿನ ನಂತೂರಿನ ಶಾಂತಿಕಿರಣದಲ್ಲಿ ಸಾವಿರಕ್ಕೂ ಹೆಚ್ಚಿನ ಜನ ಕಿಕ್ಕಿರಿದು ತುಂಬಿ ಭಾಗವಹಿಸಿ ಯಶಸ್ವಿಯಾಗಿ ನಡೆಯಿತು. ಅಲ್ಲಿ ನಡೆದ ಗೋಷ್ಠಿಗಳು, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮತ್ತು ಅದರ ಒಳಗೆ–ಹೊರಗೆ ನಡೆದ ಚರ್ಚೆ–ಸಂವಾದಗಳನ್ನು ಸಂಕ್ಷಿಪ್ತವಾಗಿಯಾದರೂ ವರದಿ ಮಾಡುವುದು ಕಷ್ಟ. ಆದ್ದರಿಂದ ಅಲ್ಲಿ ಕೇಳಿ ಬಂದ ಗಮನಾರ್ಹ ಮಾತುಗಳನ್ನಷ್ಟೇ ಕೊಡಲಾಗಿದೆ. ಅದರ ಜತೆಗೆ "ಜನನುಡಿ – 2016 ಏನು ವಿಶೇಷ?" ಮತ್ತು "ಜನನುಡಿ – ಏನಿದರ ಅರ್ಥ, ಮಹತ್ವ ?" ಎಂಬ ಅನಿಸಿಕೆಗಳನ್ನು ಕೊಡಲಾಗಿದೆ.




ಸಮತೆಯ ಅರಿವು ಸಾರಿದ ಜನನುಡಿ–2016

ಜನನುಡಿ – 2016 ಏನು ವಿಶೇಷ ?

ಜನನುಡಿ–2016 ಯಶಸ್ವಿಯಾಗಿ ಮುಗಿದಿದೆ. ಈ ಬಾರಿ ಏನು ವಿಶೇಷ. ಜನನುಡಿ–2016ರ ಕೆಲವು ವಿಶಿಷ್ಟತೆಗಳು ಇವು.

ಯುವಜನರ ಅತ್ಯಂತ ಉತ್ಸಾಹದಾಯಕ ಪಾಲುಗೊಳ್ಳುವಿಕೆ ಅವುಗಳಲ್ಲಿ ಮುಖ್ಯವಾದದ್ದು.. ಕಳೆದ ಬಾರಿಯೇ ಆರಂಭವಾಗಿದ್ದ ಈ ಟ್ರೆಂಡ್ ಈ ಬಾರಿ ಗಟ್ಟಿಯಾಗಿ ಮುಂದುವರೆದಿದೆ. "ಎಲ್ಲಿದ್ದಾರೆ ಯುವಜನರು? ಅವರೆಲ್ಲ ಬಲಪಂಥದ ಜೊತೆಗಿದ್ದಾರೆ. ಇಲ್ಲಿ ನಾವು ನಾವೇ ಸೇರೋದು, ನಾವು ನಾವೇ ಚರ್ಚಿಸೋದು" ಎಂಬ ಆತಂಕ, ಬೇಸರವನ್ನು ನಿವಾಳಿಸಿಬಿಡುವಂತೆ ಯುವ ಜನರು ದಂಡು ಕಟ್ಟಿ ಜನನುಡಿಗೆ ಬಂದುಬಿಟ್ಟರು. ಎರಡೂ ದಿನ ಗಮನವಿಟ್ಟು ಮಾತುಗಳನ್ನು ಕೇಳಿದರು. ಪರಸಪ್ಪರ ಕಲೆತರು, ಬೆರೆತರು. ಜನನುಡಿಗೆ ಉತ್ಸಾಹದಾಯಕವಾಗಿ ಪ್ರತಿಕ್ರಿಯಿಸಿದರು. ಹಾಡುಗಳಿಗೆ ಕುಣಿದರು." ಎಂಬ ಮಾತು ಅಕ್ಷರಶಃ ನಿಜ. ಯುವಜನರೇ ಅಲ್ಲದೆ ಹಲವು ಹೊಸ ಮುಖಗಳು ಕಂಡವು



ಪ್ರತಿ ಬಾರಿ ಜನನುಡಿಗೆ ಒಂದು ಘೋಷವಾಕ್ಯ ಇತ್ತು. ಆದರೂ ಅಂಬೇಡ್ಕರ್ 125ನೇ ವಾರ್ಷಿಕೋತ್ಸವದ ಹಿನ್ನೆಲೆಯಲ್ಲಿ "ಸಮತೆ ಎಂಬುದು ಅರಿವು" ಎಂಬ ಘೋಷವಾಕ್ಯ ಪ್ರತಿ ಗೋಷ್ಠಿಯಲ್ಲೂ ಪರಿಣಾಮಕಾರಿಯಾಗಿ ಧ್ವನಿಸಿ ಅತ್ಯಂತ ಅರ್ಥಪೂರ್ಣವಾಗಿದ್ದಿದು ಬಹುಶಃ ಈ ಬಾರಿಯೇ.

"ಜಾತಿ ವಿನಾಶ ಮತ್ತು ನಾನು" ಎಂಬ ಅಂತರ್ಜಾತೀಯ ಮದುವೆಯಾದವರ ಅನುಭವಗಳ ಬಗೆಗಿನ ಮಹಿಳಾಗೋಷ್ಠಿ ಪರಿಕಲ್ಪನೆಯಲ್ಲೂ ಅದು ಸಾಕಾರವಾದ ರೀತಿಯಲ್ಲೂ ಅತ್ಯಂತ ವಿಶಿಷ್ಟವಾಗಿತ್ತು. ಇಂದು ರಾಜಕಾರಣದಲ್ಲಿ ಬಹುವಾಗಿ ಚಾಲ್ತಿಯಲ್ಲಿರುವ ಅಹಿಂದ ಪರಿಕಲ್ಪನೆ ಬಗ್ಗೆ ಹಮ್ಮಿಕೊಂಡಿದ್ದ "ಮುಸ್ಲಿಂ–ದಲಿತ–ಹಿಂದುಳಿದವರ ಐಕ್ಯತೆ" ಗೋಷ್ಠಿ, ಅದರಲ್ಲೂ 'ಮುಸ್ಲಿಂ ರಾಜಕಾರಣ'ದ ಇಂದಿನ ಆಚರಣೆಗಳು ಮತ್ತು ಅದಕ್ಕೆ ಪರ್ಯಾಯದ ಬಗೆಗಿನ ರಹಮತ್ ತರಿಕರೆಯವರ ವಿಶ್ಲೇಷಣೆ ಮತ್ತು ಜಯಪ್ರಕಾಶ್ ಬಂಜಗೆರೆಯವರ ಅಧ್ಯಕ್ಷೀಯ ಮಾತುಗಳು ನೆನಪಿನಲ್ಲಿ ಉಳಿಯುವಂತಹವು ಆಗಿದ್ದವು.

ಜನನುಡಿ ಸಮಾವೇಶದ ಮೊದಲೂ, ಸಮಾವೇಶದ ಸಮಯದಲ್ಲೂ ನಂತರವೂ ಸಾಮಾಜಿಕ ಮಾಧ್ಯಮದಲ್ಲಿ ಅದಕ್ಕೆ ಪ್ರಚಾರ ಕಳೆದ ಬಾರಿ ಆರಂಭವಾಗಿದ್ದರೂ, ಈ ಬಾರಿ ತಾರಕಕ್ಕೆ ಮುಟ್ಟಿತ್ತು. ಸಮಾವೇಶಕ್ಕೆ ಬಾರದಿದ್ದವರಿಗೂ ಫೇಸ್ ಬುಕ್ಕಿನಲ್ಲಿ ಅದರ ಹೆಚ್ಚು ಕಮ್ಮಿ ಪೂರ್ಣ 'ಲೈವ್ ಪ್ರಸಾರ' ಮತ್ತು ಅದರ ಮುಖ್ಯ ಅಂಶಗಳು ಲಭ್ಯವಿದ್ದವು. ಸಮಾವೇಶದ ಮೊದಲೂ ಆಹ್ವಾನ ಪತ್ರ ರಾಜ್ಯದ ಹಲವು ಕಡೆ ಬಿಡುಗಡೆ ಮಾಡುತ್ತಾ, ಪೋಸ್ಟರ್ ಸ್ಪರ್ಧೆಯಲ್ಲಿ ಬಂದ ಪೋಸ್ಟರುಗಳು, ಹಿಂದೆ ಬಂದ ಇಂದು ಬರುತ್ತಿರುವ ಪ್ರಮುಖರ ಹೇಳಿಕೆಗಳ ಪೋಸ್ಟರುಗಳ ಮೂಲಕ, ದಿನವಾರು 'ಕೌಂಟ್ ಡೌನ್' ಮೂಲಕ ಪ್ರಚಾರ ಅತ್ಯಂತ ಪರಿಣಾಮಕಾರಿಯಾಗಿತ್ತು. ಎಲ್ಲಾ ಸಾಂಸ್ಕೃತಿಕ–ಸಾಮಾಜಿಕ–ರಾಜಕೀಯ ಚಳುವಳಿಗಳಿಗೆ ಇದು ಮಾದರಿಯಾಗುವಂತಿತ್ತು. ಜನನುಡಿಯ ಸಾಮಾಜಿಕ ಮಾಧ್ಯಮದ ಪ್ರಚಾರದಿಂದಲೂ ಮತ್ತು ಅದು ಹುಟ್ಟಿಸಿದ ಸಂಚಲನದಿಂದಲೂ ಮುಖ್ಯವಾಹಿನಿಯ ಪತ್ರಿಕೆಗಳೂ ಜನನುಡಿಯನ್ನು ವಿವರವಾಗಿ ಕವರ್ ಮಾಡಲೇಬೇಕಾದ ಒತ್ತಡ ಉಂಟು ಮಾಡಿದವು.

ತುಳುನಾಡಿನ ಜನಪರ ಸಾಂಸ್ಕೃತಿಕ ಪರಂಪರೆಗಳಾದ ಕೊರಗರ ಗಜಮೇಳ, ಡೊಳ್ಳು ಕುಣಿತ, ಕೊಳಲು ವಾದನ, ಸಾಹಸ ಕಲೆ; ಕಂಗಿಲು ನೃತ್ಯ, ಕೊರಂಗಲ್ ನೃತ್ಯಗಳು; ಉತ್ತರ ಕರ್ನಾಟಕದ ತತ್ವಪದ ಗಾಯನಗಳನ್ನು ಮತ್ತು ಅಸಂಖ್ಯ ಹೋರಾಟದ ಹಾಡುಗಳನ್ನು ಪ್ರಸ್ತುತ ಪಡಿಸುವ ಮೂಲಕ ಸಾಂಸ್ಕೃತಿಕವಾಗಿಯೂ ಶ್ರೀಮಂತವಾಗಿ, ಅತ್ಯಂತ ಸಂಭ್ರಮದ ವಾತಾವರಣ ಉಂಟು ಮಾಡಿದ್ದೂ ವಿಶೇಷವಾಗಿತ್ತು. ಹಲವು ಪ್ರಸಕ್ತ ವಿಷಯಗಳಿಗೆ ನಿರ್ಣಯಗಳ ಮೂಲಕ ಸ್ಪಂದಿಸಿದ್ದೂ ವಿಶೇಷವಾಗಿತ್ತು.

– ವಸಂತರಾಜ ಎನ್.ಕೆ.

ಜನನುಡಿ – ಏನಿದರ ಅರ್ಥ, ಮಹತ್ವ ?

ಜನನುಡಿ 2016 ಎಲ್ಲರ ನಿರೀಕ್ಷೆಗಳನ್ನು ಮೀರಿ ಯಶಸ್ಸು ಕಂಡಿದೆ. ಆಳ್ವಾಸ್ ನುಡಿಸಿರಿಗೆ ಪ್ರತಿರೋಧವಾಗಿ ಹುಟ್ಟಿಕೊಂಡ ಜನನುಡಿ ನಾಲ್ಕನೇ ವರ್ಷಕ್ಕೆ ಹೊಸ ಎತ್ತರಕ್ಕೆ ಏರಿದೆ. ಕರ್ನಾಟಕದ ಸಾಂಸ್ಕೃತಿಕ–ಸಾಮಾಜಿಕ–ರಾಜಕೀಯ ಸಂದರ್ಭದಲ್ಲಿ ಏನಿದರ ಅರ್ಥ? ಅದರ ಯಶಸ್ಸಿನ ಗುಟ್ಟೇನು? ಮುಂದಿನ ದಿನಗಳಲ್ಲಿ ಅದರ ಮಹತ್ವವೇನು?

ಜನನುಡಿ ವಾರ್ಷಿಕ ಸಾಂಸ್ಕೃತಿಕ ಜಾತ್ರೆಯೇ? ಹಾಗೆ ಆರಂಭವಾದರೂ ಅಷ್ಟೇ ಆಗಿ ಉಳಿದಿಲ್ಲ. ಪ್ರಮುಖವಾಗಿ ಇದೊಂದು ಕೋಮುವಾದಿ–ವಿರೋಧಿ ವೇದಿಕೆಯೇ? ಕರಾವಳಿ ಪ್ರದೇಶದ ಭೀಕರ ಕೋಮುವಾದಿ ಪರಿಸ್ಥಿತಿಗೆ ಪ್ರತಿರೋಧವಾಗಿ ಹುಟ್ಟಿ ಬೆಳೆದಿದ್ದು ಹೌದು, ಆದರೆ ಬರಿಯ ಅಷ್ಟೇ ಅಲ್ಲ. ಅದು ಇತರ ಹಲವು ಸಾಮಾಜಿಕ–ಸಾಂಸ್ಕೃತಿಕ ಕಾಳಜಿಗಳನ್ನು ಇಟ್ಟುಕೊಂಡಿದೆ. ರಾಜಕೀಯ ಪ್ರಶ್ನೆಗಳಿಂದಲೂ ದೂರ ನಿಂತಿಲ್ಲ. ಈ ಬಾರಿಯ ಜನನುಡಿಯಲ್ಲಿ ಮೊದಲ ಬಾರಿಗೆ ಪಾಲ್ಗೊಂಡ ಕೆಲವರಿಗೆ (ಮಾಲಗತ್ತಿ, ಶಿವಾಜಿ ಗಣೇಶನ್) ಅದು "ಬಂಡಾಯ ಸಾಹಿತ್ಯ ಸಂಘಟನೆಯ ಮರುಹುಟ್ಟು' ಆಗಿ ಕಂಡಿದೆ. ಪ್ರಮುಖವಾಗಿ ಪ್ರಗತಿಪರ ಸಾಹಿತಿಗಳನ್ನು ಒಂದು ವೇದಿಕೆಗೆ ತಂದರೂ, ಅದು ಒಂದು ಹೊಸ ಸಾಹಿತ್ಯಕ ಟ್ರೆಂಡನ್ನು ಹುಟ್ಟು ಹಾಕಿಲ್ಲ. ಸಾಹಿತಿಗಳ ಸಂಘಟನೆಯ ಸ್ವರೂಪವನ್ನೂ ಪಡೆದಿಲ್ಲ. ಆ ರೀತಿಯಲ್ಲಿ 'ಬಂಡಾಯ'ಕ್ಕಿಂತ ಭಿನ್ನವಾಗಿದೆ. ಇದೊಂದು ಎಡ–ಪ್ರಜಾಸತ್ತಾತ್ಮಕ ಸಾಂಸ್ಕೃತಿಕ ರಂಗವೇ? ನಿರ್ದಿಷ್ಟ ನಿಲುವುಗಳು, ಕಾರ್ಯಕ್ರಮ, ಸಂಘಟನಾ ಸ್ವರೂಪ ಪಡೆದುಕೊಳ್ಳದೆ ಅದು ಅಂತಹ ರಂಗವಾಗದು. ಹಾಗಾದರೆ ಏನಿದು?



ಜನನುಡಿ ಈ ಶತಮಾನದಲ್ಲಿ ದಕ್ಷಿಣ ಅಮೆರಿಕದ ಬ್ರೆಜಿಲಿನಲ್ಲಿ ಆರಂಭವಾಗಿ ವಿಶ್ವವ್ಯಾಪಿಯಾಗಿ ಹಬ್ಬಿದ 'ಸೋಶಿಯಲ್ ಫೋರಂ' ಎಂಬ ವೇದಿಕೆಯನ್ನು ಹೆಚ್ಚು ಹೋಲುತ್ತದೆ. ಆದರೆ ಅದರಂತೆ ರಾಜಕಾರಣವನ್ನೂ, ರಾಜಕೀಯ ಪಕ್ಷ/ನಾಯಕರನ್ನೂ ಹೊರಗಿಡದೆ ಅದಕ್ಕಿಂತ ಭಿನ್ನವಾಗಿದೆ. ಇನ್ನೊಂದು ಪ್ರಗತಿಪರ ಸಂಘಟನೆಯಾಗದೆ ಹಲವು ಎಡ–ಪ್ರಜಾಸತ್ತಾತ್ಮಕ ಸಂಘಟನೆಗಳಿಗೆ, ಚಳುವಳಿಗಳಿಗೆ, ಶಕ್ತಿಗಳಿಗೆ, ವ್ಯಕ್ತಿಗಳಿಗೆ, ಭಿನ್ನ ಧ್ವನಿಗಳಿಗೆ ಪರಿಣಾಮಕಾರಿ ವೇದಿಕೆಯಾಗಿದ್ದು, ಹೆಚ್ಚೆಚ್ಚು ಇಂತಹವನ್ನು ಒಳಗೊಳ್ಳುತ್ತಾ ಅದೇ ಸಮಯದಲ್ಲಿ ತನ್ನದೇ ಸ್ಪಷ್ಟ ಧೋರಣೆಗಳನ್ನು ಸಹಮತದಿಂದ ರೂಪಿಸಿಕೊಳ್ಳುತ್ತಾ ಹೋಗಿದ್ದು ಬಹುಶಃ ಜನನುಡಿಯ ಯಶಸ್ಸಿಗೆ ಕಾರಣ.

ಕಳೆದ ಕೆಲವು ವರ್ಷಗಳಲ್ಲಿ ಸಾಮಾಜಿಕ ಸಾಂಸ್ಕೃತಿಕ ಚಳುವಳಿಗಳು, ವೇದಿಕೆಗಳು ಹುಟ್ಟಿಕೊಂಡು ಹಲವು ಒಲವು/ನಿಲುವುಗಳ ಪ್ರಗತಿಪರರು, ಅಂಬೇಡ್ಕರವಾದಿಗಳು, ಎಡಪಂಥೀಯರು, ಸೆಕ್ಯುಲರ್ ಪ್ರಜಾಸತ್ತಾವಾದಿಗಳು ಅವುಗಳಲ್ಲಿ ಕೂಡಿ ಭಾಗವಹಿಸುತ್ತಿರುವುದು ಒಂದು ಆಶಾದಾಯಕ ಬೆಳವಣಿಗೆ. ಇಂತಹ ಹಲವು ವೇದಿಕೆಗಳಲ್ಲಿ ಜನನುಡಿ ಅತ್ಯಂತ ಹೆಚ್ಚಿನ ವ್ಯಾಪಕತೆ ಮತ್ತು ಒಳಗೊಳ್ಳುವಿಕೆಯನ್ನು ಸಾಧಿಸಿದೆ. ಹಲವು ಮಹತ್ವದ ಸಾಂಸ್ಕೃತಿಕ ಸಾಮಾಜಿಕ–ರಾಜಕೀಯ ಪ್ರಶ್ನೆಗಳಿಗೆ ಸ್ಪಂದಿಸುತ್ತಾ ಸರಿಯಾದ ನಿಲುವುಗಳನ್ನು ರೂಪಿಸಿಕೊಳ್ಳುತ್ತಿದೆ. ಆ ಮೂಲಕ ಇತರ ಇಂತಹ ವೇದಿಕೆಗಳೊಂದಿಗೆ ಕರ್ನಾಟಕದಲ್ಲಿ ಎಡ–ಪ್ರಜಾಸತ್ತಾತ್ಮಕ ಸಾಂಸ್ಕೃತಿಕ ರಂಗವೊಂದನ್ನು ವಿಕಾಸಗೊಳಿಸುವ ಹೆಚ್ಚಿನ ಸಾಧ್ಯತೆ ಹೊಂದಿದೆ. ಇಂದಿನ ಸಂದರ್ಭದಲ್ಲಿ ವ್ಯವಸ್ಥೆಯಲ್ಲಿ ನಿರ್ಣಾಯಕ ಜನಪರ ಬದಲಾವಣೆ ತರಲು ಎಡ–ಪ್ರಜಾಸತ್ತಾತ್ಮಕ ರಂಗವನ್ನು ಕಟ್ಟುವ ಮಹಾಕಾಯಕಕ್ಕೆ ಅಗತ್ಯ ಸನ್ನಿವೇಶ ನಿರ್ಮಿಸಲು ಇಂತಹ ಸಾಂಸ್ಕೃತಿಕ ರಂಗವೊಂದು ಅಗತ್ಯವಿದೆ. ಇದು ಜನನುಡಿಯ ಮಹತ್ವ.

– ವಸಂತರಾಜ ಎನ್.ಕೆ.



ಉದ್ಘಾಟನಾ ಸಮಾರಂಭದಲ್ಲಿ

ಗಾಂಧೀಜಿಯವರು 150 ವರ್ಷದ ಆಡಳಿತ ನಡೆಸಿದ್ದ ಬ್ರಿಟೀಷ್ ವಿರುದ್ಧ ಹೋರಾಟ ಮಾಡಿದರು. ಆದರೆ ಅಂಬೇಡ್ಕರ್ ಅವರು ಸಾವಿರಾರು ವರ್ಷದಿಂದ ಇದ್ದ ಶೋಷಣೆ–ಅಸಮಾನತೆ ವಿರುದ್ಧ ಹೋರಾಟ ಮಾಡಿದರು. ಗಾಂಧೀಜಿ ಗೆದ್ದರು. ಆದರೆ, ಅಂಬೇಡ್ಕರ್ ಹೋರಾಟ ಮುಗಿದಿಲ್ಲ. ಸಿಕ್ಕಿದ್ದು ರಾಜಕೀಯ ಸ್ವಾತಂತ್ರ್ಯ ಮಾತ್ರ. ಪೂರ್ಣ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಬೇಕಿದೆ. ಸಾಮಾಜಿಕವಾಗಿ ನಾವಿನ್ನೂ ಸ್ವತಂತ್ರರಾಗಿಲ್ಲ. ಸಾಮಾಜಿಕ ಸ್ವಾತಂತ್ರ್ಯ ದೊರೆಯದ ಹೊರತು ಯಾವ ರಾಷ್ಟ್ರವೂ ಸಂಪೂರ್ಣ ಸ್ವಾತಂತ್ರ್ಯ ಪಡೆಯಲು ಸಾಧ್ಯವಿಲ್ಲ

ನಾನು ಮೊದಲೆಲ್ಲ ಅಂಬೇಡ್ಕರ್ ಹೆಸರೆತ್ತಲೂ ಭಯ ಪಡುತ್ತಿದ್ದೆ. ಅಂಬೇಡ್ಕರರ ಫೋಟೋವನ್ನೂ ಇಟ್ಟುಕೊಳ್ತಿರಲಿಲ್ಲ. ಈಗ ಹಾಗಿಲ್ಲ. ನಾನು ಅಂಬೇಡ್ಕರರ ಹೆಸರನ್ನು ಜೋರಾಗಿಯೇ ಹೇಳುತ್ತೇನೆ. ಯಾರೋ ನನ್ನನ್ನು 'ನೀವು ಅಕ್ರಮ ಸಂತಾನ'ವಾ ಅಂತ ಕೇಳಿದರು. ನಾನು ಅಕ್ರಮ ಸಂತಾನ ಅಲ್ಲ, ಅಂಬೇಡ್ಕರ್ ಸಂತಾನ ಅಂತ ಉತ್ತರಿಸಿದೆ. ನಾನೀಗ 'ಜೈ ಭೀಮ್' ಎಂದು ಧೈರ್ಯದಿಂದ ಘೋಷಣೆ ಕೂಗುತ್ತೇನೆ

ಅಂದು ಬರುತ್ತಿದ್ದ ಬಹಳಷ್ಟು ಕಾವ್ಯಗಳು ಈಶ್ವರನೇ ಸುಂದರ, ಈಶ್ವರನೇ ಅನಂತ ಎಂದು ಹೇಳುತ್ತಿದ್ದವು. ಅವುಗಳಿಗೆ ಸಾಮ್ರಾಜ್ಯವಾದದ ಮುಖವಾಡ ಇತ್ತು. ನಾವು ಅದನ್ನೇ ಓದಬೇಕಿತ್ತು. ತೇರೆ ಹೋಟ್, ತೇರೆ ಗಾಲ್ ಎನ್ನುವಂತಹ ಕವಿತೆಗಳೇ ಇದ್ದವು. ನಾವು ಓದಿದ್ದು ಏನು? ಆ ದಿನಗಳಲ್ಲಿ ನಾವು ಬೂಸಾ ಸಾಹಿತ್ಯವನ್ನೇ ಓದುತ್ತಿದ್ದೆವು. ಅದರಲ್ಲಿ ಮೇಲ್ವರ್ಗದ ಜನಗಳ ರಮ್ಯ ಕಲ್ಪನೆಗಳಲ್ಲದೆ ಗಟ್ಟಿಯಾದ ವಿಚಾರಗಳೇ ಇರುತ್ತಿರಲಿಲ್ಲ. ಅಲ್ಲಿ ನಮ್ಮ ನೋವುಗಳಿಗೆ, ವೇದನೆಗೆ, ಸಂಕಷ್ಟಗಳಿಗೆ ಜಾಗವೇ ಇರಲಿಲ್ಲ. ನಾವು ಅಷ್ಟು ವರ್ಷ ಸಾಹಿತ್ಯ ಓದಿದರೂ ನಮಗೆಲ್ಲೂ ಅಂಬೇಡ್ಕರ್ ಸಿಗಲೇ ಇಲ್ಲ. ಆದರೆ ನಾವು ಸುಮ್ಮನೆ ಕೂರಲಿಲ್ಲ. ನಾವು ನಮ್ಮ ಜನರ ಕಷ್ಟಗಳನ್ನು ಬರೆಯತೊಡಗಿದೆವು. ನಮ್ಮ ಜನರ ಬವಣೆಗಳನ್ನು ಬರೆಯತೊಡಗಿದೆವು. ಸಾವಿರಾರು ವರ್ಷಗಳ ಕಾಲ ಯಾವುದನ್ನು ಸಾಹಿತ್ಯಲೋಕದಿಂದ ದೂರ ಇಡಲಾಗಿತ್ತೋ ಅದನ್ನು ಬರೆದೆವು. ಹಾಗೆ ದಲಿತ ಸಾಹಿತ್ಯವು ಹುಟ್ಟಿಕೊಂಡಿತು. ನಾವೇ ಪ್ರಕಾಶಿಸಿದೆವು. ಸಾಹಿತ್ಯ ಸಮ್ಮೇಳನಗಳನ್ನೂ ಮಾಡಿದೆವು.

ಅವರು ಯಾವುದನ್ನು ಮುಖ್ಯ ವಾಹಿನಿ ಅನ್ನುತ್ತಾರೋ ಅದು ಮುಖ್ಯ ವಾಹಿನಿಯೇ? ಅವರು ದೇವರ ಬಗ್ಗೆ, ದೊರೆಗಳ ಬಗ್ಗೆ ಬರೆಯುತ್ತಾರೆ. ಅದು ಮುಖ್ಯವಾಹಿನಿಯ ಸಾಹಿತ್ಯ ಹೇಗಾಗುತ್ತದೆ? ಜನಸಾಮಾನ್ಯರು ದೇವರಿಗಿಂತ ದೊಡ್ಡವರು. ಜನರು ದೊರೆಗಳಿಗಿಂತ ದೊಡ್ಡವರು. ಅವರ ಹಾಡುಪಾಡುಗಳಿಗೆ ಹೆಚ್ಚಿನ ಮಹತ್ವ ಇರುವುದು. ಆದ್ದರಿಂದ ನಾನು ಬರೆಯುವುದು ಕೂಡ 'ಜನನುಡಿ'ಯೇ.

"ತಮ್ಮನ್ನು ಮುಖ್ಯವಾಹಿನಿ ಎಂದು ಕರೆದುಕೊಳ್ಳುವವರು ಮಹಿಳೆಯರ ಬಗ್ಗೆ ಬರೆದಿಲ್ಲ, ಆದಿವಾಸಿಗಳ ಬಗ್ಗೆ ಬರೆದಿಲ್ಲ, ದೀನ ದಲಿತರ ಬಗ್ಗೆ ಬರೆದಿಲ್ಲ, ಅಲ್ಪಸಂಖ್ಯಾತರ ಬಗ್ಗೆ ಬರೆದಿಲ್ಲ. ಅವರು ಬರೆದಿದ್ದೆಲ್ಲ ದೇವರು ದೊರೆಗಳ ಬಗ್ಗೆಯಷ್ಟೆ. ಆ ಸಾಹಿತ್ಯ ಬೂಸಾ ಸಾಹಿತ್ಯ. ಅದೊಂದು ಅಪರಾಧ. ಅವರ ಸಾಹಿತ್ಯ ನಮ್ಮನ್ನು ತಟ್ಟುವುದು ಹೇಗೆ? ಅವರ ರಾಮಾಯಣದಲ್ಲಿ ಶಂಭೂಕನಿದ್ದಾನೆ. ಅವರ ಮಹಾಭಾರತದಲ್ಲಿ ಏಕಲವ್ಯನಿದ್ದಾನೆ. ಅವರ ಭಗವದ್ಗೀತೆಯಲ್ಲಿ ಚಾತುರ್ವರ್ಣದ ತಾರತಮ್ಯವನ್ನು ಎತ್ತಿಹಿಡಿಯ ಲಾಗಿದೆ. ಇಂಥ ಸಾಹಿತ್ಯಕೃತಿಗಳು ನಮಗೆ ಹೇಗೆ ತಾನೆ ಪ್ರಿಯಾಗುತ್ತವೆ? ಹೇಗೆ ತಾನೆ ಪೂಜನೀಯವಾಗುತ್ತವೆ?"

– ಶರಣಕುಮಾರ್ ಲಿಂಬಾಳೆ, ಖ್ಯಾತ ಮರಾಠಿ ಲೇಖಕ (ಉದ್ಘಾಟನಾ ಭಾಷಣದಲ್ಲಿ)

ಪುಟ 10 ಕ್ಕೆ

ಸಮಾನತೆಯ ಆಶಯ ಮತ್ತು ಮೀಸಲಾತಿ



ಮೇಲ್ಜಾತಿಯವರಿಗೆ ಕೆಳಜಾತಿಯವರು ಬಂಡವಾಳ ಆಗಿರುವುದರಿಂದ ಅವರು ಜಾತಿವಿನಾಶವನ್ನು ತಿರಸ್ಕರಿಸುತ್ತಾರೆ. ನಮ್ಮ ತಳಸಮುದಾಯಗಳು ಅವರನ್ನು ಧಿಕ್ಕರಿಸುವ ನಿರ್ಧಾರ ಮಾಡಬೇಕು. ಆತ್ಮಗೌರವ ಘನತೆಯಿಂದ ನಡೆಯುವುದನ್ನು ರೂಢಿಸಿಕೊಳ್ಳಬೇಕು. ಎಮ್ಮೆನ್ಸಿ ಕಂಪನಿಗಳಿಗೆ ಸರ್ಕಾರ ನೀಡುತ್ತಿರುವ ಸೌಲಭ್ಯಗಳನ್ನು ನೋಡಿದರೆ ಅದು ಮೀಸಲಾತಿಗೆ, ದಲಿತರಿಗೆ ನೀಡುತ್ತಿರುವುದು ಏನೇನೂ ಅಲ್ಲ. ಮೇಲ್ವರ್ಗದವರಂತೆ ನಾವೂ ಇಂಗ್ಲಿಷ್ ಮಾತಾಡಬೇಕು, ಅವರಂತೆ ನಡೆನುಡಿಯಿರಬೇಕು ಅನ್ನುವ ಕೀಳರಿಮೆ ಕೆಳವರ್ಗಗಳಿಗೆ ಇದೆ. ಅದಕ್ಕೆ ಸರಿಯಾಗಿ ಮೇಲ್ವರ್ಗದವರು ಕೂಡ ದಲಿತರಿಗೆ ತಮ್ಮಂತೆ ಮಾತಾಡಲು ಬರುವುದಿಲ್ಲ, ತಿಳಿವಳಿಕೆ ಇಲ್ಲ ಅನ್ನುವಂಥ ಕೀಳರಿಮೆ ಹುಟ್ಟುಹಾಕುತ್ತಿದ್ದಾರೆ.

*

ಮೇಲ್ಜಾತಿಯವರು ಕೀಳುಜಾತಿಯವರನ್ನು ಬೌದ್ಧಿಕ ದಾಸ್ಯಕ್ಕೆ ಒಳಪಡಿಸಿದ್ದು, ಸತತವಾಗಿ ಮಾನಸಿಕವಾಗಿ ಭಯೋತ್ಪಾದನೆಯನ್ನು ನಿರಂತರವಾಗಿ ನಡೆಸುತ್ತ ಬಂದಿದ್ದಾರೆ. ಇತ್ತೀಚೆಗೆ ಕೇಂದ್ರ ಸರ್ಕಾರ ಡಿಮಾನೆಟೈಸೇಷನ್ ಮಾಡಿದಾಗಲೂ ಕೂಡ ಹೆಚ್ಚು ಸಂಕಷ್ಟ ಅನುಭವಿಸಿದ್ದು ಕೆಳ ಸಮುದಾಯಗಳೇ.

ಫ್ಯಾಸಿಸ್ಟರು ಸೋಷಿಯಲ್ ಮೀಡಿಯಾದಲ್ಲಿ ಮನುಸ್ಮೃತಿಯನ್ನ ಮತ್ತೆ ಮತ್ತೆ ಪುನರುತ್ಥಾಪನೆ ಮಾಡ್ತಿದ್ದಾರೆ. ದಲಿತರನ್ನು ಅವಹೇಳನ ಮಾಡುವುದನ್ನೆ ಅವರು ಉದ್ಯೋಗ ಮಾಡಿಕೊಂಡಿದ್ದಾರೆ.

**

ಜಾತಿ ಇಲ್ಲ ಎಂದು ವಾದಿಸುವವರು ಮೂರ್ಖರು. ದ್ರೋಹಿಗಳು ಮಾತ್ರ ಇಂಥ ಮಾತುಗಳನ್ನಾಡುತ್ತಾರೆ. ಕಮ್ಯುನಿಸ್ಟರು ಕೂಡ ಇತ್ತೀಚಿನ ದಿನಗಳಲ್ಲಿ ಜಾತಿ ತಾರತಮ್ಯಕ್ಕೆ ಒತ್ತುಕೊಟ್ಟು ಮಾತಾಡ್ತಿರುವುದು ಆಶಾದಾಯಕ ವಿಚಾರ.

**

ಜಾತಿ ನಿರ್ಮೂಲನೆಯಾಗಬೇಕು ಅನ್ನುವುದು ಎಲ್ಲರ ಆಶಯವಾಗಿದೆ. ಆದರೆ ಅದು ಸಾಧ್ಯವಾಗುವುದಿಲ್ಲ ಅನ್ನುವುದು ವಾಸ್ತವ.

ಇಂದು ಜಾತಿ ವಿನಾಶ ಮತ್ತು ಮೀಸಲಾತಿಯನ್ನೇ ಮತ್ತೆಮತ್ತೆ ಚರ್ಚಿಸುವ ಬದಲು ಆತ್ಮಗೌರವ ಮತ್ತು ಘನತೆಯಿಂದ ನಡೆಯುವ ಮಾದರಿಯನ್ನು ರೂಪಿಸಿಕೊಳ್ಳುವ ಅಗತ್ಯವಿದೆ.

– ಸಿ.ಜಿ.ಲಕ್ಷ್ಮೀಪತಿ

ನಾವು ಮೀಸಲಾತಿ ಚರ್ಚೆಯನ್ನು 'ಸಾಮಾಜಿಕ ಸಮಾನತೆ' ವ್ಯಾಪ್ತಿಯ ಹೊರಗಿಟ್ಟು ಕೇವಲ ಅದನ್ನು "ಸಮಾನತೆ"ಯನ್ನು ಸಾಧಿಸುವ ಸಾಧನ ಎಂಬ ಸರಳ ವಿಶ್ಲೇಷಣೆಗೆ ಇಳಿದುಬಿಟ್ಟರೆ ಮತ್ತೊಂದು ಅರ್ಥದಲ್ಲಿ ನಾವೂ ಸಹ ಮೀಸಲಾತಿಯನ್ನು ವಿರೋಧಿಸುತ್ತಿರುವ ಗುಂಪಿನ ವಾದವನ್ನೆ ಬಳಸಿದಂತೆ ಆಗುತ್ತದೆ. ಏಕೆಂದರೆ ಆ ಗುಂಪು ಒಟ್ಟು ಮೀಸಲಾತಿ ಚರ್ಚೆಯನ್ನು ಉದ್ದೇಶಪೂರ್ವಕವಾಗಿ ಸಮುದಾಯಗಳ ಸಾಮಾಜಿಕ ಸಂದರ್ಭದಿಂದ ಹೊರಗಿಟ್ಟು ಅದನ್ನು "ಆರ್ಥಿಕ ಮತ್ತು ಔದ್ಯೋಗಿಕ ಅವಕಾಶಗಳಲ್ಲಿ ಸಮಾನತೆ ಸೃಷ್ಟಿಸಲು ಬಯಸುತ್ತಿರುವ ಅಸಮಾನ ಸಾಧನ" ಎಂಬ ಸಂಕುಚಿತ ಅರ್ಥದಲ್ಲಿ ನೋಡುತ್ತಿದೆ. ಆದ್ದರಿಂದ ನಾವು ಇಂದು ಚರ್ಚಿಸುತ್ತಿರುವ ಮೀಸಲಾತಿಯ ಚರ್ಚೆ "ಸಾಮಾಜಿಕ ಸಮತೆ" ಬಯಸುವ ಚರ್ಚೆಯಾಗಿದೆ ಶತಮಾನಗಳ ಕಾಲ ಸಾಮಾಜಿಕ ಅಸಮಾನತೆಯನ್ನು ಅನುಭವಿಸುತ್ತಿರುವ ಸಮುದಾಯಗಳಿಗೆ "ಮನುಷ್ಯ ಸಹಜ ಸಾಮಾಜಿಕ ಘನತೆ" ತಂದುಕೊಡುವ ಉದ್ದೇಶ ಸಾಧನೆಗೆ ಆರ್ಥಿಕ ಮತ್ತು ಔದ್ಯೋಗಿಕ ಅವಕಾಶಗಳನ್ನು ಸಾಧನಗಳಂತೆ ಮೀಸಲಾತಿ ನೀತಿ ಪ್ರತಿಪಾದಿಸುತ್ತಿದೆ ಎಂಬ ವಿಷಯದಲ್ಲಿ ಅಂತ್ಯಂತ ಸ್ಪಷ್ಟವಾದ ದೃಷ್ಟಿಕೋನವೊಂದನ್ನು ರೂಪಿಸಿಕೊಳ್ಳಬೇಕಿದೆ.

– ಕಿರಣ್ ಗಾಜನೂರು

ಜಾತಿ ತಾರತಮ್ಯ ಸಮಾಜದಲ್ಲಿ ಹಾಸುಹೊಕ್ಕಾಗಿದೆ. ಶಾಲೆ ಕಾಲೇಜುಗಳಲ್ಲಿ ಪ್ರೀತಿ ಮಾಡುವಾಗ ಕೂಡ ಜಾತಿ ನೋಡುವ ಪರಿಪಾಠವಿದೆ. ಹಳ್ಳಿಜಾತ್ರೆಗಳಲ್ಲಿ ಒಂದೊಂದು ಜಾತಿಯ ಹೆಸರು ಹೇಳಿ ವೀಳ್ಯ ಕೊಡುತ್ತಾರೆ. ಇದು ಆಯಾ ಜಾತಿಯವರು ನಿರ್ದಿಷ್ಟ ಕೆಲಸಗಳನ್ನು ಮಾತ್ರ ಮಾಡಬೇಕು ಅನ್ನುವ ತಾರತಮ್ಯ ಧೋರಣೆ. ಈ ತಾರತಮ್ಯದಿಂದ ದಲಿತರನ್ನು ಹೊರತರಲೆಂದೇ ಮೀಸಲಾತಿ ಇರುವುದು. ಅಂಬೇಡ್ಕರ್‌ಗೂ ಮುನ್ನವೇ ನಾಲ್ವಡಿ ಕೃಷ್ಣರಾಜ ಒಡೆಯರ್ ಮೀಸಲಾತಿಯ ಪರಿಕಲ್ಪನೆಯನ್ನು ಕೊಟ್ಟಿದ್ದರು. 1890ರಲ್ಲಿ ಕುದ್ಮಲ್ ರಂಗರಾಯರು ಮಂಗಳೂರಿನಲ್ಲಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ದಲಿತರ ಓದಿಗೆ ಅವಕಾಶ ಕಲ್ಪಿಸಿದ್ದರು.

ದಲಿತ ಮೀಸಲಾತಿಗೆ ತಾತ್ವಿಕತೆಯ ಕೊರತೆಯಿದೆ. ಇಂದು ಕೆಲವರು ಮೀಸಲಾತಿಯನ್ನು ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳುತ್ತಿದ್ದಾರೆ. ಮೀಸಲಾತಿಯನ್ನು ಬಳಸಿ ಮೇಲೆ ಬಂದವರು ಕೆಳಗಿರುವ ಜನರ ಬಗ್ಗೆ ಗಮನ ಕೊಡುತ್ತಿಲ್ಲ. ರಾಜಕೀಯ ವ್ಯಕ್ತಿಗಳು ದಲಿತರನ್ನು ಬಳಸಿಕೊಳ್ಳುತ್ತಿದ್ದಾರೆ. ಅದಕ್ಕೆ ಅವಕಾಶ ನೀಡಬಾರದು. ಮೀಸಲಾತಿ ಹಾಗೂ ಸಮಾನತೆ ಕೇವಲ ಪುಸ್ತಕಗಳಲ್ಲಿ ಬರುವ ವಿಚಾರಗಳಾಗಿ ಉಳಿಯಬಾರದು. ಈ ನಿಟ್ಟಿನಲ್ಲಿ ಹೆಚ್ಚು ಹೆಚ್ಚು ಚರ್ಚೆಗಳು ನಡೆಯುತ್ತಿರುವುದು ಸಮಾಧಾನದ ಸಂಗತಿಯಾಗಿದೆ.

– ಹುಲಿಕುಂಟೆ ಮೂರ್ತಿ

ಜಾತಿ ವಿನಾಶ ಮತ್ತು ನಾನು

ಜಾತಿ ವಿನಾಶ ಸಾಧ್ಯವಾದರೆ ಅದು ಹೆಣ್ಣಿಂದಲೇ ಅನ್ನುವ ಮಾತಿನಲ್ಲಿ ಮತ್ತೆ ಭರವಸೆ ಮೂಡುವಂತೆ, ಅಂತರ್ಜಾತೀಯ ವಿವಾಹ ಆದ ಮಹಿಳೆಯರಿಂದ ಅರ್ಥಪೂರ್ಣ ಗೋಷ್ಠಿ

ನಾನು ಜಾತಿಮೀರಿ ವಿವಾಹವಾಗಿ ಬದುಕುವಾಗ ಆಹಾರ, ಶುಚಿತ್ವ, ಭಾಷೆ, ಜನರನ್ನು ನಡೆಸಿಕೊಳ್ಳುವುದು, ಮುಂತಾದ ಕಂಪಾರ್ಟ್ಮೆಂಟ್ ಗಳನ್ನು ಮೊದಮೊದಲಿಗೆ ಬಿಡಲೊಪ್ಪದ ನಾನು ನಿದಾನವಾಗಿ ಬಿಡಲಾರಂಬಿಸಿದೆ.



ನನ್ನ ಬಾಣಂತನ ಯಾವುದೇ ಕಟ್ಟುಪಾಡುಗಳಿಲ್ಲದೆ ನಮ್ಮಮ್ಮ ಮಾಡಿದರು. ಸಮಾನತೆಯ ಜೀವನ ಬಹಳ ಕಷ್ಟ ಆದರೆ ಸಮತೆಯ ಅರಿವಿನೊಂದಿಗೆ ಮಾಡುವ ಜೀವನ ಬಹಳ ಸುಂದರ **– ವಾಣಿ ಪೆರಿಯೋಡಿ**

ಜಾತಿ ಅಸ್ಮಿತೆ, ಶಕ್ತಿ ಒಕ್ಕೂಟವಾಗಿ ಕೆಲಸ ಮಾಡುತ್ತಿದೆ. ಜಾತಿ ವಿನಾಶಕ್ಕಿಂತ ತಾರತಮ್ಯ ನಿವಾರಣೆಗೆ ಶ್ರಮಿಸಬೇಕು. ಜಾತಿಯನ್ನು ನಿರಾಕರಿಸಿದ ಮೇಲುಜಾತಿಯವರನ್ನು ಅನುಮಾನದಿಂದ ನೋಡುವ ದೃಷ್ಟಿ ಬದಲಾಗಬೇಕು. ಜಾತಿಗೂ ಮದುವೆಗೂ ಸಂಬಂಧವಿರಲು ಸಾಧ್ಯವಿಲ್ಲ. ಆದರೆ ವ್ಯವಸ್ಥೆ ಇದೇ ಸತ್ಯ ಎನ್ನುವಂತೆ ಮಾಡಿಬಿಟ್ಟಿದೆ. ಅಂಬೇಡ್ಕರರು ಮನುಸ್ಮೃತಿಯನ್ನು ಸುಟ್ಟ ದಿನವೇ ನಾವು 'ಜಾತಿ ವಿನಾಶ ಮತ್ತು ನಾನು' ಕುರಿತು ಮಾತಾಡ್ತಿರುವುದು ಒಂದು ಅರ್ಥಪೂರ್ಣ ಆಕಸ್ಮಿಕ!

~ ಡಾ.ಸಬಿತಾ ಬನ್ನಾಡಿ

ತುಳುನಾಡಿನ ಜನಪರ ಸಾಂಸ್ಕೃತಿಕ ಪರಂಪರೆಗಳು



ದಲಿತರ ಆತ್ಮಕಥನಗಳು. ದಲಿತರೇ ಸೃಷ್ಟಿಸಿಕೊಂಡ ಆತ್ಮಕಥನಗಳು ಪ್ರಭಾವಶಾಲಿಯಾಗಿ ಬರಲಿಲ್ಲ ಅನ್ನುವವರು ಪಾಡ್ದನಗಳನ್ನು ಗಮನಿಸಬೇಕು. ದಲಿತರ ಆತ್ಮಕಥನಗಳು ಅಷ್ಟಾಗಿ ಬರಲಿಲ್ಲ ಅನ್ನುವುದು ಸರಿಯಲ್ಲ. ಅವರು ಅದನ್ನು ಬರೆದುಕೊಂಡ ಕ್ರಮವೇ ಬೇರೆ. ಅವನ್ನು ಓದುವ ಕ್ರಮವನ್ನು ನಾವು ಕಲಿಯಲಿಲ್ಲ. ಈ ನಿಟ್ಟಿನಲ್ಲಿ ದಲಿತ ಹಾಗೂ ತಳಸಮುದಾಯಗಳ ಕೊಡುಗೆ ಎಷ್ಟು ಮಹತ್ವದ್ದು.

– ಪ್ರೊ. ಪುರುಷೋತ್ತಮ ಬಿಳಿಮಲೆ, ಜೆ.ಎನ್.ಯು. ವಿ.ವಿ. ಪ್ರಾಧ್ಯಾಪಕ,

ಹಿಂದೂಗಳ ಯಾವ ಸಂಸ್ಕೃತಿಯನ್ನ ವಿರೋಧಿಸಿ ಪ್ರತಿರೋಧದ ಕಲೆಗಳು ಹುಟ್ಟಿದವೋ ಅವುಗಳನ್ನ ಕಳೆದ 10 ವರ್ಷದಲ್ಲಿ ಬಲಪಂಥೀಯ ರಾಜಕಾರಣ ಸಂಪೂರ್ಣವಾಗಿ ಆಕ್ರಮಿಸಿದೆ. ವೈವಿದ್ಯತೆ ನಾಶವಾಗುತ್ತಿದೆ

ಕರಾವಳಿಯ ಭೂತಗಳ ಹುಟ್ಟು–ಸಾವುಗಳ ಕಥನವೇ ಪಾಡ್ದನ. ಇವು ಕರಾವಳಿಯ ಮಣ್ಣಿನ

ಕುಡ್ಲದ ಕೊರಲ್ ಕಲಾತಂಡದ ಬಾಲರಾಜ್ ಅವರ ಮಾರ್ಗದರ್ಶನದಲ್ಲಿ ಕಲಾವಿದರು ಕೊರಗರ ಗಜಮೇಳ, ಡೊಳ್ಳು ಕುಣಿತ, ಕೊಳಲು ವಾದನ, ಸಾಹಸ ಕಲೆ ಪ್ರದರ್ಶಿಸಿದರು. ಮಂಗಳೂರಿನ ಫೇಸ್ ಟ್ರಸ್ಟ್ ತಂಡದ ಕಲಾವಿದರು ಕಂಗಿಲು ನೃತ್ಯ, ಕೊರಂಗಲ್ ನೃತ್ಯ ಪ್ರಸ್ತುತ ಪಡಿಸಿದರು.



ಸಮಾರೋಪ

'ಭಾರತೀಯ ಜಾತಿವ್ಯವಸ್ಥೆಯ ಮೇಲೆ ಸರ್ಜಿಕಲ್ ದಾಳಿ ಮಾಡಿ...'

– ಡಾ. ಅರವಿಂದ ಮಾಲಗತ್ತಿ

ನಾಲ್ಕು ವರ್ಷಗಳಲ್ಲಿ ಜನನುಡಿ ಸಾಧಿಸಿದ್ದೇನು ಎಂದು ಕೆಲವರು ಪ್ರಶ್ನಿಸುತ್ತಾರೆ. ಉತ್ತರ ಕಣ್ಣ ಮುಂದಿದೆ. ಇತ್ತೀಚೆಗೆ ಅಭೂತಪೂರ್ವ ಯಶಸ್ಸು ಕಂಡ ಉಡುಪಿ ಚಲೋ, ಮೊನ್ನೆ ಮೊನ್ನೆ ನಡೆದ ಮಡಿಕೇರಿ ಚಲೋ ಹೋರಾಟಗಳು ಜನನುಡಿಯ ವಿಸ್ತರಣೆಗಳಾಗಿವೆ ಎನ್ನುವುದನ್ನು ಮರೆಯಬಾರದು. ಈ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಾ ಬಂದ ಮುಸ್ಲಿಮ್ ಪ್ರಗತಿಪರರು ಸದ್ದಿಲ್ಲದೆ 'ಮುಸ್ಲಿಮ್ ಚಿಂತಕರ ಚಾವಡಿ' ಯನ್ನು ಕಟ್ಟಿ ಆ ಸಮುದಾಯಕ್ಕೆ ಸರಿಯಾದ ದಿಕ್ಕು ತೋರಿಸುವ ಪ್ರಯತ್ನ ಮಾಡುತ್ತಿದ್ದಾರೆ. ಇದೇನು ಕಡಿಮೆ ಸಾಧನೆಯೇ?

~ ದಿನೇಶ್ ಅಮೀನ್ ಮಟ್ಟು

'ಜನರ ನುಡಿಯನ್ನು ಅರಿತರಷ್ಟೇ ಸಮತೆ ಎಂಬುದು ಸಾಧ್ಯ...'

– ಜ್ಯೋತಿ ಚೇಳ್ಯಾರು

ಜನನುಡಿ 2016 ನಿರ್ಣಯಗಳು

1) ರಾಜ್ಯದ ಎಲ್ಲಾ ವಸತಿಹೀನ, ಭೂಹೀನ ಜನವರ್ಗವನ್ನು ಗುರುತಿಸಿ ಕೂಡಲೇ ಅವರಿಗೆ ಭೂಮಿ ನೀಡುವ ಕ್ರಿಯಾ ಯೋಜನೆ ರೂಪಿಸಿ ಕಾಲಮಿತಿಯೊಳಗೆ ಜಾರಿ ಮಾಡುವಂತೆ ಈ ಸಭೆ ಸರ್ಕಾರವನ್ನು ಒತ್ತಾಯಿಸುತ್ತದೆ.
2) ರಾಜ್ಯದ ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ಸಮೀಕ್ಷಾ ವರದಿಯನ್ನು ಈ ಕೂಡಲೇ ಬಿಡುಗಡೆ ಮಾಡುವಂತೆ ಈ ಸಭೆ ಸರ್ಕಾರವನ್ನು ಒತ್ತಾಯಿಸುತ್ತದೆ.
3) ಕಪ್ಪು ಹಣವನ್ನು ವಿದೇಶದಿಂದ ತರುತ್ತೇವೆಂದು ಹೇಳಿ, ತರಲಾಗದೇ ಹೋದವರು ಆ ಲೋಪ ಮುಚ್ಚಿಕೊಳ್ಳಲು ನೋಟು ಅಪಮೌಲ್ಯೀಕರಣ ಕ್ರಮಕೈಗೊಂಡು ಜನಸಾಮಾನ್ಯರು, ಬಡವರು ಬೀದಿಯಲ್ಲಿ ಸಮಯ ಕಳೆಯುವಂತೆ ಮಾಡಿರುವುದನ್ನು ಸಭೆ ಖಂಡಿಸುತ್ತದೆ.
4) ಭಾರತದ ಮುಸ್ಲಿಮ್ ರು ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ, ಹಿಂದುಳಿದಿರುವಿಕೆಯ ಬಗ್ಗೆ ಜಸ್ಟೀಸ್ ಸಾಚಾರ್ ಸಮಿತಿ ನೀಡಿದ ಸಮೀಕ್ಷಾ ವರದಿಯನ್ನು ಚರ್ಚೆಗೆತ್ತಿಕೊಳ್ಳಬೇಕು ಮತ್ತು ಜಾರಿ ಮಾಡಬೇಕೆಂದು ಸಭೆ ಒತ್ತಾಯಿಸುತ್ತದೆ.
5) ಅಂತರ್ ಜಾತಿ ವಿವಾಹವಾದವರ ಮಕ್ಕಳಿಗೆ ಶೇ.1ರಷ್ಟು ಮೀಸಲಾತಿ ನೀಡಬೇಕೆಂಬ ಪ್ರೊ. ರವಿವರ್ಮ ಕುಮಾರ್ ಶಿಫಾರಸ್ಸನ್ನು ರಾಜ್ಯ ಸರ್ಕಾರ ತಕ್ಷಣ ಜಾರಿಗೊಳಿಸಬೇಕೆಂದು ಸಭೆ ಸರ್ಕಾರವನ್ನು ಒತ್ತಾಯಿಸುತ್ತದೆ.

ತತ್ತ್ವಪದಗಳ ಗಾಯನ

ಭಾಷೆಗೆ ಮೈಲಿಗೆ ಇಲ್ಲ. ನುಡಿಗೆ ಮೈಲಿಗೆ ಇಲ್ಲ. ತತ್ವಪದಕಾರರೂ ಸಹ ಮೈಲಿಗೆ ಇಲ್ಲದ ಹಲವು ದರ್ಶನಗಳನ್ನ ಪ್ರತಿಪಾದಿಸಿದರು. ತತ್ತ್ವಪದಗಳು ವೈದಿಕಷಾಹಿಯ ವಿರುದ್ಧ ಪ್ರಬಲವಾದ ಅಸ್ತ್ರ. ಸಂಪ್ರದಾಯವಾದಿಗಳು ಈ ತತ್ತ್ವಪದಗಳ ಚಿಂತನೆಗಳು ಇಂದಿಗೂ ಸಲ್ಲುತ್ತವೆ.

ಮೀನಾಕ್ಷಿ ಬಾಳಿ, ಹೋರಾಟಗಾರ್ತಿ, ಚಿಂತಕಿ

ಮಹಿಳೆಯರು ಮತ್ತು ತಳಸಮುದಾಯಗಳ ಮೇಲೆ ನಡೆಸುವ ದೌರ್ಜನ್ಯವನ್ನು, ಸೂಕ್ಷ್ಮ ಹಿಂಸೆಗಳನ್ನು ತತ್ತ್ವಪದಕಾರರು ಕಟ್ಟಿಕೊಟ್ಟ ಬಗೆಯನ್ನು ನಿರೂಪಿಸುತ್ತಾ, ಅವರು ನಿರ್ವಚನೆಯೊಂದಿಗೆ ಬಸಮ್ಮ ಸ್ಥಾವರ ಮಠ ಅಕ್ಕಲಕೋಟಿ ತಂಡದೊಂದಿಗೆ ತತ್ತ್ವಪದಗಳ ಗಾಯನ ನಡೆಸಿಕೊಟ್ಟರು,

ಮುಸ್ಲಿಂ-ದಲಿತ-ಹಿಂದುಳಿದ ವರ್ಗಗಳ ಐಕ್ಯತೆ



ಮುಸಲ್ಮಾನರು ರಾಜಕೀಯವಾಗಿ ಒಡೆದಮನೆ. ದಲಿತರಷ್ಟು ಸಹ ರಾಜಕೀಯ ಪ್ರಜ್ಞೆ ಇಲ್ಲ, ರಾಜಕೀಯವಾಗಿ ದಿಕ್ಕೆಟ್ಟ ಸಮುದಾಯ ಇದಾಗಿದೆ. ಶೈಕ್ಷಣಿಕವಾಗಿ ಹಿಂದಿಳುದಿರುವಿಕೆ ಬಹಳ ದೊಡ್ಡ ಶಾಪ. ಧಾರ್ಮಿಕ ಕಾರಣಕ್ಕೆ ಒಂದಾಗುವವರು ಸಾಚಾರ್ ವರದಿ ತರದ ಬದಲಾವಣ ಕಾರ್ಯಕ್ಕೆ ಒಂದಾಗುವುದಿಲ್ಲ. ಸಂಖ್ಯೆ, ಆಯುದ, ವಕ್ತಾರರಾಗಿ ನಿರ್ಜೀವವಾಗಿ ಕಾಣುತ್ತಿದ್ದಾರೆ. ಛಿದ್ರೀಕರಣ ಮತ್ತು ಧ್ರುವೀಕರಣದ ರಾಜಕೀಯ. ಮುಸ್ಲಿಂ ರಾಜಕೀಯ ಪಕ್ಷ ಆತ್ಮಹತ್ಯಾತ್ಮಕವಾದದ್ದಾಗಿದೆ. ಅಂತರ್ ಧರ್ಮೀಯ ಅಂತರ್-ಸಮುದಾಯ ಸಂಭಂದಗಳಿಲ್ಲದೆ ಭಾರತ ದಲ್ಲಿ ಮುಸ್ಲಿಮರಿಗೆ ಭವಿಷ್ಯವಿಲ್ಲ. ಚಳುವಳಿ ಗಳಲ್ಲಿ ಹೆಚ್ಚಿನ ಮಟ್ಟದಾಗಿ ಇರಬೇಕಾದವರು ಮುಸಲ್ಮಾನರು. ಸಮುದಾಯ ರಾಜಕಾರಣ ಚಳುವಳಿ ರಾಜ-ಕಾರಣದ ಭಾಗವಾಗಿರಬೇಕು.ಮುಸಲ್ಮಾನರಿಗೆ ಆ ಸಮುದಾಯದ ಅಂಬೇಡ್ಕರ್ ಬೇಕಾಗಿದೆ. ಅಧಿಕಾರ ರಾಜಕಾರಣಿಗಳು ಮಾಡುವ ಸಾಂಸ್ಕೃತಿಕ ರಾಜ-ಕಾರಣ ನಾವು ಚಳುವಳಿ, ಜನನುಡಿ ಪರ ಇರುವವರು ಮಾಡಬೇಕಿದೆ. **– ರಹಮತ್ ತರೀಕೆರೆ.**

ಕರ್ನಾಟಕದ ಯಾವ ದಲಿತ ರಾಜಕಾರಣಿಗಳೂ 'ಮಾಸ್ ಲೀಡರ್' ಆಗಲು ಪ್ರಯತ್ನ ಪಡಲಿಲ್ಲ. ಪಕ್ಷಗಳ ಹಂಗಿನಲ್ಲಿದ್ದಾರೆ. ಬಸವಲಿಂಗಪ್ಪನವರಿಗೆ ಆ ತರದ ಎಲ್ಲಾ ಸೌಲಭ್ಯ ಮತ್ತು ಅವಕಾಶಗಳಿದ್ದರೂ ಅವರೂ ಆಗಲಿಲ್ಲ.

– ಶಿವಾಜಿಗಣೇಶ್

ಹಿಂದುಳಿದವರು ಜಾಣ ನಿದ್ದೆಮಾಡುತ್ತಿದ್ದಾರೆ. ಅಹಿಂದ ಇದು ಸಾಂದರ್ಭಿಕ ವಾದದ್ದು ಒಂಥರಾ ಓಯಾಸಿಸ್ ಇದ್ದಂತೆ. ಜಾತಿಯ ಲೀಡರ್ ಗಳು ತಮ್ಮ ಅಧಿಕಾರಕ್ಕಾಗಿ ಅವರನ್ನು ಸಾಕುತ್ತಿದ್ದಾ-ರೆ. ಹಿಂದುಳಿದವರು ಹಿಂದುಗಳಾಗುತ್ತಿದ್ದಾರೆ. ಇದು ಆತಂಕದ ವಿಷಯ. ಪ್ರಬಲ ಜಾತಿಗಳು ಹಾವನೂರು ವರದಿಯನ್ನು ದಿಕ್ಕು ತಪ್ಪಿಸುತ್ತಿವೆ. ಕರ್ನಾಟಕದಲ್ಲಿ ಇನ್ನೂ ಬಹು ಸಂಖ್ಯಾತರ ಪ್ರಾತಿನಿದ್ಯವಿಲ್ಲ. ಇವುಗಳಿಗೆ ಸಾಮಾಜಿಕ ಶಿಕ್ಷಣದ ಅವಶ್ಯಕತೆ ಇದೆ. ಜನಸಮುದಾಯಗಳ ವಸ್ತುಸ್ಥಿತಿ ಹೇಳಿದರೆ ದೇಶದ್ರೋಹಿ ಎನ್ನುವ ಪರಿಸ್ಥಿತಿ ಇದೆ. ರಾಜಕಾರಣದ ಪ್ರಾತಿನಿದ್ಯಕ್ಕೆ ಅಣಿಯಾಗಬೇಕು. ನಾವು ಸುಸ್ಥಿರಗೊಳ್ಳುವ ಕಡೆ ಚಲಿಸಬೇಕು. ಈಗಿನ ಎಷ್ಟೋ ಜನಕ್ಕೆ ಮೀಸಲಾತಿ ಬಗ್ಗೆ ಸರಿಯಾದ ತಿಳುವಳಿಕೆಯೇ ಇಲ್ಲ. ಅಹಿಂದದ ಸೈದಾಂತಿಕ ರಚನೆ ಯಾಗಬೇಕಿದೆ.

– ರಾಜಪ್ಪ ಧಳವಾಯಿ

ಸಾವಿರಾರು ಸಮುದಾಯಗಳಿರುವ ಭಾರತದಲ್ಲಿ ಐಕ್ಯತೆ ಕಷ್ಟಸಾಧ್ಯ. ಸಾಂಸ್ಕೃತಿಕ ಎಚ್ಚರ ಇಲ್ಲದಿದ್ದರೆ ಐಕ್ಯತೆ ಸಾಧ್ಯವೇ ಇಲ್ಲ. ಸಮಾಜದ ಬೆಳವಣಿಗೆ, ವಿಕಾಸ ಕ್ರಮದ ಸಮಗ್ರ ಅರಿವಿದ್ದರೆ ಮಾತ್ರ ಸಾಧ್ಯ. ಸಮಾನತೆ ಅರಿವಿದ್ದಂತೆ, ಐಕ್ಯತೆಯೂ ಅರಿವೇ ಆಗಿದೆ. ವಿಚಾರವಾದಿಗಳು ಹಾಗೂ ಪ್ರಗತಿಪರರು ಸೈನಿಕರಿಲ್ಲದ ಸೇನಾನಿಗಳಾಗಿದ್ದೇವೆ. ಅವರು ಹೇಳುವುದು ಜನರಿಗೆ ಗೊತ್ತಾಗುತ್ತಿಲ್ಲ. ಅವರು ಸಮುದಾಯದ ಜತೆಗಿಲ್ಲ, ಅರಿವು ಎಂಬುದು ಒಂದೇ ಸಾರಿ ಬರುವುದಿಲ್ಲ. ಹಿಂದುಳಿದ ಜಾತಿಗಳು ಇಂದಿಗೂ ಅಸ್ಪೃಷ್ಯತೆಯನ್ನು ಆಚರಿಸಿಕೊಂಡು ಬಂದಿದ್ದಾರೆ. ಅಸ್ಪಷ್ಯತೆಯು ಹಳ್ಳಿಗಳಲ್ಲಿ ಜೀವಂತವಾಗಿದೆ. ಹಿಂದುಳಿದ ವರ್ಗದವರು ಮೇಲ್ವರ್ಗದವರಿಂದ ಆದಂತ ದಬ್ಬಾಳಿಕೆಯನ್ನು ಮರೆತಂತೆ ಕಾಣುತ್ತದೆ. ಮುಸ್ಲಿಂರ ಮೇಲೆ ಹಲ್ಲೆಗಳಾಗುತ್ತಿದ್ದ ಸಂದರ್ಭದಲ್ಲಿ ಹಿಂದುಳಿದ ಹಾಗೂ ದಲಿತರು ಅವರ ಜೊತೆ ತಡೆಗೋಡೆಗಳಾಗಿ ನಿಲ್ಲಬೇಕಾಗಿತ್ತು. ಅವರನ್ನು ರಕ್ಷಿಸಲು ಮುಂದಾಗಬೇಕಿತ್ತು.

– ಬಂಜಗೆರೆ ಜಯಪ್ರಕಾಶ್

ಕವಿ ಗೋಷ್ಠಿ

"ಇಲ್ಲಿ ಬಣ್ಣಗಳೆಲ್ಲವ ಗುತ್ತಿಗೆ ಹಿಡಿದಿದ್ದಾರೆ,
ಮತ್ತೆ ತಮ್ಮ ತಮ್ಮ ಬಾವುಟಗಳಿಗೆ ಮೆತ್ತಿಕೊಂಡಿದ್ದಾರೆ,
ಸತ್ತ ಪ್ರಾಣಿಯೂ ಈಗ ದೈವವಾಗಿದೆ,
ಹೊಟ್ಟೆಗಿಲ್ಲದೇ ಜನ ಸತ್ತರೂ ದನ ಸಾಯಕೂಡದು,
ದನ ಸತ್ತರೂ ಜನ ತಿನ್ನಕೂಡದು"

– ಸಚಿನ್ ಅಂಕೋಲ

ರೈತ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾನೆ ಅದನ್ನೊಂದು
ಸುದ್ದಿ ಮಾಡಿ ಮಾಧ್ಯಮದ ಮಂದಿ ಊರ
ಸಾಹುಕಾರನ ಮಗಳ ಮದುವೆಗೆ ಸಾಲುಗಟ್ಟಿದ್ದಾರೆ..
ಡಾಕ್ಟ್ರು ದೇಶ ಸೇವೆ ಅಂತಾನ, ಮುಂಗಡ ಹಣ
ಕೊಡದೆ ರೋಗಿ ನೋಡಲ್ಲ ಅಂತಾನ! ತಂಗಿ
ಮದುವೆ ಎದಿಮ್ಯಾಲೆ ಬಂದು ಅವ್ವ ದವಾಖಾನೆ
ಸೇರ್ಯಾಳ ...
ಇದಕ್ಕೆಲ್ಲಾ ಜವಾಬ್ದಾರಿ ಆಗಬೇಕಾದ ಮನೆ
ಯಜಮಾನ ನಾನು ಪಕೀರ ಅಂತಾನ, ನಾನು
ಸನ್ಯಾಸಿ ಅಂತಾನ .....

– ವೀರಪ್ಪ ತಾಳದವರ್

ಕವಿಗೋಷ್ಠಿಯಲ್ಲಿ ಪಾಲ್ಗೊಂಡಿದ್ದ ಬಹುತೇಕ ಕವಿಗಳು ವರ್ತಮಾನದ ಸ್ಥಿತಿಗತಿಗಳನ್ನೇ ವಿಶ್ಲೇಷಿಸಿದ್ದು ವಿಶೇಷ. ವಾಸುದೇವ ನಾಡಿಗ್ ಅವರು "ಕವಿತೆಯೊಂದರ ಮರಣೋತ್ತರ ಪರೀಕ್ಷೆ" ಕವನವನ್ನು ಮುಗಿಸುವಾಗ "ಇನ್ನು ಬರೆಯಲಾಗುತ್ತಿಲ್ಲ, ಸೋತ ಕವಿತೆಯೊಂದರ ಮರಣೋತ್ತರ ಪರೀಕ್ಷೆ ನಡೆಯುತ್ತಿದೆ" ಎನ್ನುತ್ತಾ ಕವಿತೆ ಬರೆಯಲಾಗದ, ಗೆದ್ದ ಕವಿತೆಗಳ ಪೊಳ್ಳುತನಗಳನ್ನು ವಿಶ್ಲೇಷಿಸಿದರು. "ಕತ್ತರಿಸಿಟ್ಟ ಮರದ ಬೊಡ್ಡೆಯ ಮೇಲೆ ನಾಳಿನ ಭವಿಷ್ಯ ಬರೆಯಲು ನೂಕುನುಗ್ಗಲು" ಎಂದರು.

ರಮೇಶ್ ಅರೋಲಿ ಅವರು ತಮ್ಮ ಕವನವನ್ನು ಹಾಡುತ್ತಾ "ಮೇಕೆಗೆ ಮೇವಿಲ್ಲ, ಮೇಕಿಂಗ್ ಇಂಡಿ-ಯಾ" ಎಂದು ರಾಜಕೀಯ ವಿಡಂಬನಾತ್ಮಕ ಸ್ಥಿತಿಯನ್ನು ಹೇಳಿದರು.

ಹೇಮಲತಾ ಮೂರ್ತಿ ಅವರು "ಅಂತರಂಗದ ಅಳಲಿಗೆ ಕಣ್ಣು ಕಿವಿ ಮುಚ್ಚಿ ಕುಳಿತ" ಸ್ಥಿತಿಯನ್ನು ಬಿಂಬಿಸಿದರು.

ಪ್ರದೀಪ್ ಮಾಲ್ಗುಡಿ ಅವರು "ಮಾಧ್ಯಮ ಉದ್ಯಮ" ಕವಿತೆಯಲ್ಲಿ ಮಾಧ್ಯಮ ಕ್ಷೇತ್ರದ ಕೆಲವರ ನೈತಿಕತೆಯನ್ನು ಪ್ರಶ್ನಿಸುವಂತೆ "ಕೊಟ್ಟದ್ದು ಯಾ-ರೋ, ಆದರೆ ಪಡೆದಿದ್ದು ನಾನೇ, ಈಗ ಕೈಸೋತು ಬರೆಯಲಾಗುತ್ತಿಲ್ಲ" ಎಂದರು.

ಯಂಶ ಬೆಂಗಿಲ ಅವರು "ಅಪ್ಪ ಮತ್ತು ವಾಸು" ಎಂಬ ಕವನದಲ್ಲಿ ಸಮಾಜದಲ್ಲಿನ ತಾರತಮ್ಯ-ದ್ವೇಷವನ್ನು ತೆರೆದಿಡುತ್ತಾ ಕರಾವಳಿ ಸಾಗುತ್ತಿರುವ ದಿಕ್ಕಿನತ್ತ ಬೆಳಕು ಚೆಲ್ಲಿದರು.

ಡಾ. ಕಾವ್ಯಶ್ರೀ ಎಚ್. ಅವರು "ಕ್ಷಮಿಸಿಬಿಡು ವೇಮುಲ ಸಹಿಸುವುದನ್ನು ಕಲಿಯುತ್ತಾ ಕಲಿಯುತ್ತಾ ನಾನು ಅಸಹನೆಯನ್ನು ಅಡವಿಟ್ಟಿದ್ದೇನೆ, ಬೀದಿಗಿಳಿಯಲಾರೆ" ಎಂದರು.

ವೀರಪ್ಪ ತಾಳದವರ್ ಅವರು, "ತಲೆ ಚಿಟ್....ಹಿಡಿದದ" ಕವನ ವಾಚಿಸುತ್ತಾ, "ನನಗಿಗ ತಲಿ ಚಿಟ್ ಹಿಡಿದದ! ದಿನಕ್ಕೊಂದು ಕಾಯ್ದೆ ಜಾರಿ ಕಂಡು ದೇಶ ಆಳೋರ್ದ ನೀತಿ ಕಂಡು ತಲಿ ಕೆಟ್ಟಂಗ ಆಗೆದ ನನಗಿಗ ನೋಡಿ ಎತ್ಲಾಗರ ಓಡಿ ಹೋಗುವಂಗ ಆಗೆದ" ಎನ್ನುತ್ತಾ ಪ್ರಸ್ತುತ ಭಾರತದ ಪರಿಸ್ಥಿತಿ ತೆರೆದಿಟ್ಟರು.

ಡಾ. ಅರುಂಧತಿ ಅವರು "ಅಂಬೇಡ್ಕರ್" ಕವನವನ್ನು ಮಗುವಿನ ಕಣ್ಣುಗಳಲ್ಲಿ ನೋಡುತ್ತಾ, "ಅಮ್ಮಾ ಅಲ್ಲಿ ಅಂಬೇಡ್ಕರ್ ಅನ್ನೋ ತಿಂಡಿ ಕೊಡ್ತಾರಾ" ಎಂದಾಗ ತಾಯಿಯು "ತಿಂಡಿಯಲ್ಲ ಮಗಳೇ, ಮುಟ್ಟಲಾಗದ ಅಕ್ಷರಗಳ ದಕ್ಕಿಸಿಕೊಟ್ಟ ಸಂಜೀವಿನಿ"ಯನ್ನ ಎಂದು ಮಾರ್ಮಿಕವಾಗಿ ಉತ್ತರಿಸಿದ್ದನ್ನು ವಾಚಿಸಿದರು.

ದೀಪಾ ಗಿರೀಶ್ ಅವರು, "ಅವರು ನಿಮ್ಮನ್ನು ಒದ್ದ ಕಾಲಿಗೆ ಹುಟ್ಟಿದ ಕೂಸು ನಾನು" ಎಂದು ಅಂಬೇಡ್ಕರ್ ಅವರನ್ನು ಸ್ಮರಿಸಿದರು.

ಚಾಂದಿನಿ ಅವರು ನಾನು ಅವಳಾಗಲು ಹೋದಾಗ ಆದ ಅನುಭವಗಳನ್ನು ಹಂಚಿಕೊಂಡರು.

ಸೈಫ್ ಜಾನ್ಸೆ ಕೊಟ್ಟೂರು, "ಕಡಲ ಚೂರುಗಳು ಜೋಳಿಗೆಗೆ ತುಂಬಿ ಊರ ಹಬ್ಬಿದ್ದು, ನೀರಡಿಸಿದೆ ಕರಾವಳಿಗೆ" ಎಂದರು.

ವಿಪ್ಲವಿ ರಾಯಚೂರು ಅವರು "ಸ್ತ್ರೀಸಂಭೂತೆ" ಕವನ ವಾಚಿಸುತ್ತಾ "ನಿರುತ್ತರಳಾಗಿದ್ದೇನೆ ಅನೈತಿಕತೆಯ ಮಾರಣಹೋಮದಲ್ಲಿ" ಎಂದರು.

ಚೀಮನಹಳ್ಳಿ ರಮೇಶ್ ಬಾಬು ಅವರು, "ಅಪ್ಪನ ಹಣೆಯ ಕಿಂಡಿ", ಕಾವ್ಯಶ್ರೀ ಎಚ್. ನಾಯ್ಕ್ ಅವರು, "ನಿನ್ನ ಮೌನದ ಮಹಾಮನೆ" ಎಂಬ ಕವನ ವಾಚಿಸಿದರು. ಮಂಜುಳಾ ಹುಲಿಕುಂಟೆ ಅವರು, "ಯುದ್ಧದ ಬಗ್ಗೆ ನನಗೆ ಮೋಹವಿಲ್ಲ" ಎನ್ನುತ್ತಾ ಅದರ ಭಯಾನಕತೆಯನ್ನು ತೆರೆದಿಟ್ಟರು.

ರಮೇಶ್ ಹಿರೇಜಂಬೂರು ಅವರು, "ಕೋವಿಯೊಳಗಿನ ಸತ್ಯ", ಅಸಂಗಿ ಗಿರಿಯಪ್ಪ ಅವರು, "ಹೆಜ್ಜೆ ಮೂಡಿಸಿದ ಸದ್ದು" ಕವನ ವಾಚಿಸಿದರು. ಗುರು ಸುಳ್ಯ, ದುರ್ಗೇಶ್ ಪೂಜಾರಿ, ರೂಪಶ್ರೀ ಕಲ್ಲಿಗನೂರು, ಚಾಂದ್ ಬಾಷಾ ಅವರೂ ಸಹ ಕವನ ವಾಚಿಸಿದರು.

----

* ಅಂಬೇಡ್ಕರ್ ಗಾಂದೀಜಿಗೆ we have no home-land ಎಂದಿದ್ದರು, ಆದರೆ ಈಗ ನಮ್ಮಲ್ಲಿ ಸ್ವಾತಂತ್ರ ಇಲ್ಲ ಎನ್ನುವ ಪರಿಸ್ಥಿತಿ ಇದೆ. ಮಾದ್ಯಮಗಳು ಎಲ್ಲಿಯವರೆಗೂ ಬ್ರಾಹ್ಮಣ್ಯದ ಗೀಳಿನಿಂದ ಹೊರ ಬರುವುದಿಲ್ಲವೋ ಅಲ್ಲಿಯವರೆಗೂ ಬಹುಸಂಖ್ಯಾತರಿಗೆ ಅನ್ಯಾಯ ವಾಗುತ್ತದೆ. ಮತಾಂದರು ರಾಜಕಾರಣಿಗಳು ಮೂರ್ಖ ಹೇಳಿಕೆಗಳನ್ನು ನೀಡುತ್ತಿದ್ದಾರೆ ಮತ್ತು ನಂಬಿಸುತ್ತಿದ್ದರೆ. ಇದರಿಂದ ಎಚ್ಚರಗೊಂಡು ನಾವು ಪ್ರಜಾಪ್ರಭುತ್ವ ರಕ್ಷಿಸಬೇಕು.

* ನಾನು ನೊಂದವರ ಅಂಗಾಲಿನ ಮುಳ್ಳ ತೆ-ಗೆದು ದುಡಿದವರ ಬೆವರನ್ನು ಶಾಹಿಮಾಡಿ ಕವಿತೆ ಬರೆಯುವವ.

*ನಾನು ಇವರ ಶಾಸ್ತ್ರಕ್ಕೆ ಹೊಗ್ಗುವವನಲ್ಲ, ಭವಿಷ್ಯಕ್ಕೆ ಬಗ್ಗುವವನಲ್ಲ, ಕರ್ಮಠ ನನ್ನ ಹಣೆಗೆ ಹೊಗ್ಗೊಲ್ಲ. ನಾನು ಕೆಸರಲ್ಲಿ ಅರಳಿದ ಕಮಲ.

– ಮೂಡ್ನಕೂಡು ಚಿನ್ನಸ್ವಾಮಿ,
ಕವಿಗೋಷ್ಠಿಯ ಅದ್ಯಕ್ಷೀಯ ಮಾತುಗಳಲ್ಲಿ

ಉದ್ಘಾಟನಾ ಸಮಾರಂಭದಲ್ಲಿ............

ಪುಟ 8 ರಿಂದ

ಇಲ್ಲಿ ಬಂದಿರುವವರೆಲ್ಲರೂ ಅಸಮಾನತೆಯ ಕಾರಣ ತಿಳಿದುಕೊಂಡವರೇ. ಆದರೆ ಸಮಾಜದಲ್ಲಿ ಗೊತ್ತಿದ್ದೋ, ಗೊತ್ತಿಲ್ಲದೆಯೋ ಶೋಷಣೆಗೆ ಕಾರಣ-ರಾಗುತ್ತಿದ್ದಾರೆ. ಒಳಗಾದ ಸಮಾಜದಲ್ಲಿ ಅರಿವನ್ನ ಬಿತ್ತುವ ಅರಿವು ಆಗಬೇಕಿದೆ. ಇದಕ್ಕಾಗಿ ಶಿಕ್ಷಣ ವ್ಯವಸ್ಥೆ ಬದಲಾಗಬೇಕಿದೆ. ಶ್ರೀಮಂತರಿಗೆ, ಬಡವರಿಗೆ ಬೇರೆಬೇರೆ ರೀತಿ ಶಿಕ್ಷಮ ಸಿಗುತ್ತಿದೆ. ಮೂಲ ಹಂತದಲ್ಲಿ ಸಮಾನತೆ ತರದಿದ್ದರೆ, ಪ್ರತಿ ಪ್ರಜೆಗೆ ಸಮಾನತೆಯ, ಗುಣಮಟ್ಟದ ಶಿಕ್ಷಣ ಕೊಡದಿದ್ದರೆ ಅಸಮಾನತೆ ನಿರಂತರ. ಸಂವಿಧಾನದಲ್ಲಿಯೇ ಸಮಾನತೆಯ ಅಂಶಗಳಿವೆ. ನಮ್ಮಿಂದ ಆಯ್ಕೆಯಾದವರಿಗೆ ಇದನ್ನು ಪಾಲಿಸುವ ಎಚ್ಚರಿಕೆ ಕೊಡಬೇಕಿದೆ. ಸಂವಿಧಾನದ ಆಶಯಗಳಿಗೆ ಪೂರಕವಾಗಿ ನಡೆದುಕೊಳ್ಳಬೇಕು ಎಂದು ಅವರಿಗೆ ಹೇಳಬೇಕಿದೆ. ಸಂವಿಧಾನದ ಆಶಯಗಳಿಗೆ ಪೂರಕವಾಗಿಯೇ ನಮ್ಮ ಹೋರಾಟ ರೂಪಿಸಬೇಕಿದೆ.

– ಡಾ. ನಾಗಪ್ಪ ಗೌಡ, ನಿರ್ದೇಶಕ, ಮಂಗಳೂರು
ವಿವಿ ಕಾಲೇಜಿನ ಅಂಬಿಗರ ಚೌಡಯ್ಯ ಅಧ್ಯಯನ ಪೀಠ

ಕರ್ನಾಟಕದ ಸಾಹಿತ್ಯಿಕ- ಸಾಂಸ್ಕೃತಿಕ ಪರಿಸರದಲ್ಲಿ ಇಂದು ಆಗುತ್ತಿರುವ ಮುಖ್ಯ ಪಲ್ಲಟಗಳು ನಾವು ಇಲ್ಲಿ ಒಟ್ಟು ಸೇರಲು ಕಾರಣ. ಜನಸಮುದಾಯಗಳ ನಡುವೆ ಅಸಹನೆ ಹೆಚ್ಚಾಗುತ್ತಿರುವ ಸಮುದಾಯಗಳು ತಮ್ಮ ಐಡೆಂಟಿಟಿ ಪ್ರಜ್ಞೆಯನ್ನು ಅಸ್ತಿತ್ವದ ಪ್ರಶ್ನೆಯಾಗಿಸಿಕೊಳ್ಳುತ್ತಿರುವ ಕಾಲದಲ್ಲಿ ಸೌಹಾರ್ಧತೆಯ ಸೂಕ್ಷ್ಮ ನೇಯ್ಗೆ ಘಾಸಿಗೊಳ್ಳುತ್ತಿದೆ ಎಂಬ ಆತಂಕ ಮುಂದಿಡಲಾಗಿದ್ದು, ಪರಿಸ್ಥಿತಿ ಮತ್ತಷ್ಟು ಛಿದ್ರಗೊಂಡಿದೆ. ಆದರೆ ಛಿದ್ರಗೊಳಿಸುವ ಶಕ್ತಿಗಳನ್ನು ಅವು ಬೆಚ್ಚಿ ಬೀಳುವಷ್ಟು ಗಟ್ಟಿಯಾಗಿ ಅನ್ಯಾಯಕ್ಕೊಳಗಾದವರು ಪ್ರಶ್ನಿಸುತ್ತಿದ್ದಾರೆ.

ಜನನುಡಿಗೆ ನಾವು ಕೇವಲ ಪ್ರತಿಕ್ರಿಯಯಾತ್ಮಕ ವಾಗುತ್ತಿದ್ದೇವೆಯೇ ಎಂಬ ಆತಂಕ ಇತ್ತು. ಆದರೆ ಎಲ್ಲ ಜನಪರ ಮನಸ್ಸುಗಳು, ಎಲ್ಲ ಸಂಘಟನೆಗಳು ಕೈಜೋಡಿಸಿ ಕಳೆದುಹೋದ, ಕಳೆದುಕೊಳ್ಳುತ್ತಲೇ ಇರುವ ತಮ್ಮ ಮೂಲಭೂತ ಹಕ್ಕುಗಳನ್ನು ಪಡೆದುಕೊಳ್ಳಲು ದನಿ ಎತ್ತಿ ಅಧಿಕಾರಶಾಹಿಯನ್ನು, ಸರ್ಕಾರಗಳನ್ನು ನೇರವಾಗಿ ಪ್ರಶ್ನಿಸಿ ಎಚ್ಚರಿಸತೊಡಗಿದೆ ಎಂಬುದು ಸಮಾವೇಶದ ಸಾರ್ಥಕತೆಯ ಭಾಗವಾಗಲಿದೆ.

– ಡಾ. ವಿಜಯಮ್ಮ, ಹಿರಿಯ ಲೇಖಕಿ

'ಎಸ್ಟೇಟ್ ಮಾಫಿಯಾಕ್ಕೆ ಮಣಿದಿರುವ ಸರ್ಕಾರ ಆದಿವಾಸಿಗಳನ್ನು ಒಕ್ಕಲೆಬ್ಬಿಸಿದೆ. ಈಗ ಅವರ ಪುನರ್ವಸತಿಯ ಭರವಸೆ ಸಿಕ್ಕಿದೆ. ಅದು ಈಡೇರದಿದ್ದರೆ ತೀವ್ರ ಸ್ವರೂಪದ ಹೋರಾಟ ಕೈಗೆತ್ತಿಕೊಳ್ಳುತ್ತೇವೆ'

– ಚೇತನ್, ಚಿತ್ರನಟ

ದಿಡ್ಡಳ್ಳಿ ಆದಿವಾಸಿ ಕುಟುಂಬಗಳಿಗೆ ಪೂರ್ಣ ಪ್ರಮಾಣದ ಪುನರ್ವಸತಿ ಕಲ್ಪಿಸಬೇಕು, ರಾಜ್ಯದ ಎಲ್ಲಾ ವಸತಿಹೀನರು ಮತ್ತು ಭೂರಹಿತರಿಗೆ ಜಮೀನು ನೀಡಲು ಅಗತ್ಯ ಕ್ರಮ ಕೈಗೊಳ್ಳುವಂತೆ ರಾಜ್ಯ ಸರ್ಕಾರವನ್ನು ಆಗ್ರಹಿಸುವ ನಿರ್ಣಯವನ್ನು ಚೇತನ್ ಅವರು ಮಂಡಿಸಿದರು.

ನುಡಿ, ಭಾಷೆ, ಸಾಹಿತ್ಯ ಯಾರ ಪರವಾಗಿರಬೇಕು. ಯಾರ ಜತೆಗಿರಬೇಕು. ಯಾವ ಜನರ ಜತೆಗೆ ವಿಚಾರ ವಿನಿಮಯ ಮಾಡಿಕೊಳ್ಳಬೇಕು ಎಂಬುದು ಮುಖ್ಯ ಪ್ರಶ್ನೆಯಾಗಿದ್ದ ಕಾಲದಲ್ಲಿ, ಇಂತಹ ಆಂತರಿಕ ಒತ್ತಾಯದ ಫಲವಾಗಿ ಜನನುಡಿ ರೂಪುಗೊಂಡಿತು. ಇದು ಯಾವುದೇ ಒಂದು ಗುಂಪಿನ ಬಲಾಬಲ ತೋರಿಸಲಿಲ್ಲಕ್ಕೆ, ಸಾವಿರಾರು ಜನರನ್ನ ಗುಡ್ಡೆ ಹಾಕ ಬ್ರೈನ್ ವಾಷ್ ಮಾಡಲು ಅಲ್ಲ. ಪ್ರಶ್ನಿಸುವ ಸಮುದಾಯಗಳನ್ನು ಒಂದೆಡೆ ಸೇರುವುದು ಉದ್ದೇಶ.

– ಡಾ. ಎಚ್.ಎಸ್. ಅನುಪಮ, ಲೇಖಕಿ

ಹೆಜ್ಜೆ ಹೆಜ್ಜೆಗೂ ಹೋರಾಟದ ಫಲ - ಅಂಗವಿಕಲರ ಹೊಸ ಕಾಯಿದೆ

ಜಿ.ಎನ್.ನಾಗರಾಜ್

2016 ರ ಸಂಸತ್ತಿನ ಚಳಿಗಾಲದ ಅಧಿವೇಶನ ಎಲ್ಲರಿಗೂ ತಿಳಿದಿರುವಂತೆ ನೋಟು ನಿಷೇಧದ ಬಗೆಗಿನ ಗದ್ದಲ, ಗೊಂದಲ, ಆಡಳಿತ ಮತ್ತು ವಿರೋಧ ಪಕ್ಷಗಳ ನಡುವಣ ಕಲಹಗಳಿಂದ ತುಂಬಿ ಹೋಯಿತು. ಆದರೆ ಈ ಅಧಿವೇಶನದ ಕೊನೆಯ ದಿನಗಳಲ್ಲಿ ರಾಜ್ಯ ಸಭೆ, ಲೋಕಸಭೆ ಎರಡೂ ಸದನಗಳಲ್ಲಿಯೂ ಅವುಗಳ ನಡುವೆ ಕದನ ವಿರಾಮ ಘೋಷಣೆಯಾಗಿ ಅಂಗವಿಕಲರ ಹೊಸ ಕಾಯಿದೆಯನ್ನು ಸರ್ವಾನುಮತದಿಂದ ಅಂಗೀಕರಿಸಿದರು. ಇದು ದೇಶದೆಲ್ಲರ ಅಚ್ಚರಿಗೆ, ಪತ್ರಿಕೆ,ಮಾಧ್ಯಮಗಳಲ್ಲಿ ಚರ್ಚೆಗೆ ಕಾರಣವಾಯಿತು. ಆದರೆ ಕಾಯಿದೆಯ ಅಂಗೀಕಾರದ ಹಿಂದೆ ಹತ್ತು ವರ್ಷಗಳಿಗಿಂತಲೂ ಹೆಚ್ಚು ಕಾಲದ ದೇಶದ ಅಂಗವಿಕಲರ ಚಳುವಳಿಯ ನಿರಂತರ ಹೋರಾಟ ಮತ್ತು ಪರಿಶ್ರಮ ಅಡಗಿದೆ.

"ತಡಮಾಡಬೇಡಿ, ದುರ್ಬಲಗೊಳಿಸಬೇಡಿ, ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿಯೇ ಅಂಗವಿಕಲರ ಹೊಸ ಕಾಯಿದೆ ಅಂಗೀಕರಿಸಿ". (ನೊ ಡಿಲೇ, ನೊ ಡೈಲ್ಯೂಷನ್). ವಿಶ್ವ ಅಂಗವಿಕಲರ ದಿನವಾದ ಡಿಸೆಂಬರ್ 3,2015 ರಂದು ಈ ಧ್ವನಿ ದೇಶದ ಹತ್ತಾರು ರಾಜ್ಯಗಳಿಂದ ಬಂದ ಹತ್ತು ಸಾವಿರಕ್ಕಿಂತ ಹೆಚ್ಚಿನ ಅಂಗವಿಕಲರಿಂದ ದೆಹಲಿಯ ಸಂಸತ್ ಮಾರ್ಗದಲ್ಲಿ ಮೊಳಗಿತು. ಎರಡೂ ಕಾಲುಗಳು ಸ್ವಾಧೀನವಿಲ್ಲದ ಅಂಗವಿಕಲರು ಕೆಲವರು ವಿಶೇಷ ದ್ವಿ ಚಕ್ರ ವಾಹನ ಚಲಾಯಿಸುತ್ತಾ ಬಾಗಲಕೋಟೆಯಿಂದ ಎರಡು ಸಾವಿರ ಕಿ.ಮೀ ದೂರದ ಹಾದಿಯುದ್ದಕ್ಕೂ ಈ ಧ್ವನಿಯೆತ್ತುತ್ತಾ ದೆಹಲಿ ತಲುಪಿದರು. ಇವರನ್ನೂ ಸೇರಿಸಿ ಕರ್ನಾಟಕದಿಂದ ಇನ್ನೂರು ಅಂಗವಿಕಲರು ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟದ ನೇತೃತ್ವದಲ್ಲಿ ತಮ್ಮ ಅಂಗವಿಕಲತೆಯ ಕಷ್ಟಗಳನ್ನು ಮೀರಿ ದೆಹಲಿ ಚಲೋ ಎಂದರು. ಪಶ್ಚಿಮ ಬಂಗಾಳದ ಪ್ರತಿಬಂಧಿ ಸಮ್ಮಿಲನಿಯಿಂದ ಒಂದು ವಿಶೇಷ ರೈಲನ್ನೇ ಪಡೆದು 2200ರಷ್ಟು ಅಂಗವಿಕಲರು ದೆಹಲಿಗೆ ಬಂದರು. ಅಂದು ಅಂಗವಿಕಲರ ಹಕ್ಕುಗಳ ರಾಷ್ಟ್ರೀಯ ವೇದಿಕೆ (ಎನ್.ಪಿ.ಆರ್. ಡಿ.) ಸಂಘಟಿಸಿದ ಈ ಪ್ರತಿಭಟನಾ ಮೆರವಣಿಗೆ ಮತ್ತು ಜಂತರ್ ಮಂತರ್ ನಲ್ಲಿ ನಡೆದ ಬಹಿರಂಗ ಸಭೆಯ ನಂತರ ರಾಷ್ಟ್ರಪತಿಗಳಿಗೆ ಮತ್ತು ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯ ಖಾತೆಯ ಮಂತ್ರಿಗಳಿಗೆ ಈ ಬಗ್ಗೆ ಮನವಿ ಸಲ್ಲಿಸಿದರು.

ಆದರೆ 2014 ರ ಛಳಿಗಾಲದ ಅಧಿವೇಶನದಲ್ಲಿ ಈ ಮಸೂದೆ ಮಂಡನೆಯಾಗಲಿಲ್ಲ. ಇದರಿಂದ ಸಿಟ್ಟುಗೊಂಡ ಅಂಗವಿಕಲರು ಹೊಸ ಕಾಯಿದೆಗಾಗಿ ಒಂದು ವರ್ಷ ಕಾಲ ಸ್ಥಳೀಯ ಹಾಗೂ ರಾಷ್ಟ್ರ ಮಟ್ಟದಲ್ಲಿ ನಿರಂತರವಾದ ಹೋರಾಟಗಳನ್ನು ನಡೆಸಿದರು. 2016ರ ಸೆಪ್ಟೆಂಬರ್ ನಲ್ಲಿ ದೇಶದ್ಯಾಂತ ಲಕ್ಷಾಂತರ ಜನರ ಸಹಿ ಸಂಗ್ರಹ ಆಂದೋಲನ ಆರಂಭಿಸಲಾಯಿತು. ಕರ್ನಟಕದಲ್ಲಿ ಬೆಂಗಳೂರಿನ ಪ್ರತಿಷ್ಠಿತ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ಜ್ಞಾನಪೀಠ ಪ್ರಶಸ್ತಿ ವಿಜೇತ ಚಂದ್ರಶೇಖರ ಕಂಬಾರರಿಂದ ಸಹಿ ಸಂಗ್ರಹ ಉದ್ಘಾಟನೆಯಾಯಿತು. ದೇಶಾದ್ಯಂತ ಲಕ್ಷಾಂತರ ಅಂಗವಿಕಲರ ಸಹಿ ಸಂಗ್ರಹಿಸಲಾಯಿತು. 2016 ರ ನವೆಂಬರ್ 21 ರಂದು, ಅಂಗವಿಕಲರ ಸಂಘ, ಸಂಸ್ಥೆಗಳ ಜಂಟಿ ಕ್ರಿಯಾ ಸಮಿತಿಯಿಂದ ಬೆಂಗಳೂರೂ ಸೇರಿದಂತೆ ರಾಜ್ಯಗಳ ರಾಜಧಾನಿಗಳಲ್ಲಿ ನಡೆದ ಪ್ರತಿಭಟನೆಗಳಲ್ಲಿ ಮತ್ತೆ ತಡಮಾಡದಿರಿ, ದುರ್ಬಲಗೊಳಿಸದಿರಿ ಎಂಬ ಧ್ವನಿ ಮೊಳಗಿತು. ಕೆಲವೆಡೆ ರೈಲು ರೋಖೋ, ಮಾನವ ಸರಪಳಿ ಮೊದಲಾದ ಕ್ರಿಯೆಗಳು ಜರುಗಿದವು. ಕಾಯಿದೆ ಪರಿಶೀಲನೆಗಾಗಿ ರಚಿಸಲಾದ ರಾಜನಾಥ್ ಸಿಂಗರ ನೇತೃತ್ವದ ಕೇಂದ್ರ ಸಚಿವ ಸಂಪುಟದ ಉಪ ಸಮಿತಿಗೆ ಹಾಗೂ ಎಲ್ಲಾ ರಾಜಕೀಯ ಪಕ್ಷಗಳಿಗೂ ಮನವಿ ಅರ್ಪಿಸಲಾಯಿತು. ಮತ್ತೆ ಅಂಗವಿಕಲರ ದಿನಾಚರಣೆಯಂದು ದೆಹಲಿಯಲ್ಲಿ ಅಂಗವಿಕಲರು ಪ್ರತಿಭಟನೆ ನಡೆಸಿದರು. ಇದು ಕಾಯಿದೆಯ ಅಂಗೀಕಾರದ ಹಿಂದಿರುವ ಒಂದು ವರ್ಷ ಕಾಲದ ಹೋರಾಟಗಾಥೆ. ಆದರೆ ಈ ಕಾಯಿದೆ ಇಡೀ ದೇಶದ ಅಂಗವಿಕಲರ ಚಳುವಳಿ ಹತ್ತು ವರ್ಷಗಳ ಕಾಲ ಹೆಜ್ಜೆ ಹೆಜ್ಜೆಗೂ ನಡೆಸಿದ ಹೋರಾಟದ ಫಲ.



ಈ ಕಾಯಿದೆಯ ಜನನವೇ ವಿಶ್ವದ ಅಂಗವಿಕಲರ ಚಳುವಳಿ ದಯೆ , ಕರುಣೆ, ದಾನ ಕಲ್ಯಾಣ ಸಿದ್ಧಾಂತಗಳಿಗಿಂತ ಹಕ್ಕುಗಳ ಮೇಲೆ ಆಧಾರಿತವಾದ ಕಾಯಿದೆ ಬೇಕೆಂದು ವಿಶ್ವ ಸಂಸ್ಥೆಯ ಮೇಲೆ ಒತ್ತಡ ಹೇರಿದ್ದರಿಂದ ಆರಂಭವಾಯಿತು. ಹೊಸ ಸಹಸ್ರಮಾನದ ಆರಂಭದ 2000 ಇಸ್ವಿಯಲ್ಲಿ ವಿಶ್ವ ಅಂಗವಿಕಲರ ಹಕ್ಕುಗಳ ಹೊಸ ಒಡಂಬಡಿಕೆಯನ್ನು ಅಂಗೀಕರಿಸಲಾಯಿತು. ಈ ಒಡಂಬಡಿಕೆಗೆ ಸಹಿ ಹಾಕಿದ ದೇಶಗಳ ಮೊತ್ತ ಮೊದಲ ಸಾಲಿನಲ್ಲಿ ಭಾರತವೂ ಇದ್ದಿತು.ಆದ್ದರಿಂದ ಈ ಒಡಂಬಡಿಕೆಗೆ ಅನುಗುಣವಾಗಿ, 1995ರ ಅಂಗವಿಕಲರ ಕಾಯಿದೆಗೆ ಬದಲಾಗಿ ಹೊಸದೊಂದು ಕಾಯಿದೆ ರೂಪುಗೊಳ್ಳುತ್ತದೆಂದು ನಿರೀಕ್ಷಿಸಲಾಗಿತ್ತು. ಆದರೆ ಅಂದಿನ ಯುಪಿಎ ಸರ್ಕಾರ 2009 ರಲ್ಲಿ ಹಳೆಯ ಕಾಯಿದೆಗೇ ತೇಪೆ ಹಚ್ಚುವ ಕೆಲ ತಿದ್ದುಪಡಿಗಳ ಮೂಲಕ ಅದನ್ನು ಜಾರಿಗೊಳಿಸಲು ಯತ್ನಿಸಿತು. ಆದರೆ ಭಾರತದ ಅಂಗವಿಕಲರ ಚಳುವಳಿ ಈ ಪ್ರಯತ್ನವನ್ನು ನಿರಾಕರಿಸಿ ಹೊಸದೊಂದು ಕಾಯಿದೆಯನ್ನೇ ತರಬೇಕೆಂದು ಒತ್ತಾಯಿಸಿತು. ಆಗ ತಾನೇ ರೂಪುಗೊಂಡಿದ್ದ ದೇಶದ ಮೊತ್ತಮೊದಲ ಎಡ ನೇತೃತ್ವದ ಅಂಗವಿಕಲರ ಚಳುವಳಿ ಈ ಒತ್ತಡದಲ್ಲಿ ಮುಖ್ಯ ಪಾತ್ರ ವಹಿಸಿತು. ಸರ್ಕಾರ ಇದಕ್ಕೆ ಮಣಿದು 2010ರಲ್ಲಿ ಹೊಸ ಕಾಯಿದೆಯನ್ನು ರಚಿಸಲು ಒಂದು ಸಮಿತಿಯನ್ನು ನೇಮಿಸಿತು. ಇದಕ್ಕೆ ಹೈದರಾಬಾದ್ ಕಾನೂನು ವಿಶ್ವ ವಿದ್ಯಾಲಯದ ಸಹಾಯವನ್ನೂ ಪಡೆಯಲಾಯಿತು. ಕೇಂದ್ರ ಸರ್ಕಾರ ಈ ಸಮಿತಿ ರಚಿಸಿದ ಕಾಯಿದೆಯ ಕರಡನ್ನು ಮಾರ್ಪಡಿಸಿ ಹೊಸ ಕಾಯಿದೆಯನ್ನು ರಚಿಸಿ ಅಂಗೀಕರಿಸಲು ಮುಂದಾಯಿತು.

ಆದರೆ ದೇಶದ ಅಂಗವಿಕಲರ ಚಳುವಳಿ "ನತಿಂಗ್ ಎಬೌಟ್ ಅಸ್ ವಿತೌಟ್ ಅಸ್"– ನಮ್ಮ ಬಗೆಗಿನ ಯಾವುದೇ ವಿಚಾರ ನಮಗೆ ಗೊತ್ತಿಲ್ಲದೇ ತೀರ್ಮಾನ ಹೇಗೆ ಮಾಡುತ್ತೀರಿ ಎಂದು ಗರ್ಜಿಸಿತು. ಅಂಗವಿಕಲತೆ ಹತ್ತಾರು ರೂಪದ್ದಾಗಿದೆ. ಅತ್ಯಂತ ವೈವಿಧ್ಯತೆಯಿಂದ ಕೂಡಿದೆ. ಈ ಬಗ್ಗೆ ಹೆಚ್ಚೇನೂ ಅನುಭವವಿಲ್ಲದವರು ಕುಳಿತುಕೊಂಡು ಅಂಗವಿಕಲರ ಬದುಕನ್ನು ನಿರ್ಣಯಿಸುವ ಈ ಕಾನೂನನ್ನು ಹೇಗೆ ರಚಿಸುತ್ತೀರಿ ಎಂದು ಪ್ರಶ್ನಿಸಿತು.

ಇಡೀ ದೇಶದ ಅಂಗವಿಕಲರ ಸಂಘ ಮತ್ತು ಸಂಸ್ಥೆಗಳನ್ನು ಒಳಗೊಂಡು ಅವರ ಅಭಿಪ್ರಾಯಗಳು, ತಿದ್ದುಪಡಿಗಳನ್ನು ಪಡೆದು ಕಾಯಿದೆ ರೂಪಿಸಬೇಕೆಂದು ಒತ್ತಾಯಿಸಲಾಯಿತು. ಕಾಯಿದೆ ಅಂಗೀಕಾರವಾಗುವ ಮೊದಲೇ ಅದರ ಕರಡನ್ನು ದೇಶದ ಅನೇಕ ಭಾಷೆಗಳಿಗೆ ಭಾಷಾಂತರ ಮಾಡಲಾಯಿತು. ದೇಶದ 28 ರಾಜ್ಯಗಳು ಮತ್ತು ಎರಡು ಕೇಂದ್ರಾಡಳಿತ ಪ್ರದೇಶಗಳಲ್ಲಿ ಚರ್ಚೆಗಳು ನಡೆದವು. ಕರ್ನಾಟಕದ 23 ಜಿಲ್ಲೆಗಳೂ ಸೇರಿದಂತೆ ಹಲವಾರು ಜಿಲ್ಲೆಗಳಲ್ಲಿಯೂ ಸಂವಾದ ಏರ್ಪಡಿಸಲಾಯಿತು. ಪ್ರತಿ ಅಧ್ಯಾಯ , ಪ್ರತಿ ಕಲಂ, ಪ್ರತಿ ವಾಕ್ಯವನ್ನೂ ಕೂಲಂಕಷವಾಗಿ ಪರಿಶೀಲಿಸಲಾಯಿತು. ಬಿಸಿ ಬಿಸಿ ಚರ್ಚೆಗಳು ನಡೆದವು.

ಈ ಚರ್ಚೆಗಳಲ್ಲಿ ವಿವಿಧ ಅಂಗವಿಕಲತೆಗಳನ್ನು ಪ್ರತಿನಿಧಿಸುವ ಸಾವಿರಾರು ಅಂಗವಿಕಲರು, ಅವರ ಪಾಲಕರು, ಇತರ ಪರಿಣತರು ಪಾಲ್ಗೊಂಡರು. ತಯಾರಾಗಿದ್ದ ಕರಡಿಗೆ ಸಾವಿರಾರು ತಿದ್ದುಪಡಿಗಳು ಸೂಚನೆಗೊಂಡವು. 2011ರಲ್ಲಿ ಕರ್ನಾಟಕದ ಸಮಾಲೋಚನೆಗಳು ಮೂರು ಹಂತಗಳಲ್ಲಿ ನಡೆದು ನೂರಾರು ತಿದ್ದುಪಡಿಗಳನ್ನು ಸೂಚಿಸಿದವು. ಈ ಹಲವು ಸೂಚನೆಗಳು ಸೇರಿದ ಮತ್ತೊಂದು ಕರಡು ಸಿದ್ಧವಾಯಿತು. ಈ ಕರಡು ಯುಪಿಎ ಸರ್ಕಾರದ ಒಡಲು ಸೇರಿ ಸ್ತಬ್ಧವಾಯಿತು.

ತನ್ನ ಕೊನೆಯ ದಿನಗಳವರೆಗೂ ಅದನ್ನು ಸಂಸತ್ತಿನ ಮುಂದೆ ಮಂಡಿಸಲಿಲ್ಲ. ಅಪಾರ ಶ್ರಮ ವಹಿಸಿ ರೂಪಿಸಿದ ಮಸೂದೆ ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುವ ಪರಿಸ್ಥಿತಿಯುಂಟಾಗಿಬಿಟ್ಟಿತು. 2014 ರ ಜನವರಿ–ಫೆಬ್ರವರಿಯಲ್ಲಿ ಅಂಗವಿಕಲರ ಚಳುವಳಿ ಮಸೂದೆಯನ್ನು ರಾಜ್ಯಸಭೆಯ ಮುಂದೆ ಮಂಡಿಸುವ ಮೂಲಕ ಜೀವಂತ ಉಳಿಸಿಕೊಳ್ಳಬೇಕೆಂದು ದೇಶಾದ್ಯಂತ ಹೋರಾಟಕ್ಕಿಳಿಯಿತು.ಕೊನೆಗೆ ರಾಜ್ಯ ಸಭೆಯಲ್ಲಿ ಮಂಡಿತವಾಗಿ ಮಸೂದೆಯ ಜೀವ ಉಳಿಯಿತು.

ಹೊಸ ಸರ್ಕಾರ ಬಂದ ನಂತರವೂ ಹಲವು ನೆಪಗಳನ್ನೊಡ್ಡಿ ವಿಳಂಬ ತಂತ್ರ ಅನುಸರಿಸಲಾಯಿತು. ಸಂಸತ್ತಿನ ಜಂಟಿ ಸಮಿತಿ ವರದಿ ಕೊಟ್ಟ ನಂತರವೂ ಮಸೂದೆಯನ್ನು ದುರ್ಬಲಗೊಳಿಸುವ ನಿರಂತರ ಪ್ರಯತ್ನಗಳು ನಡೆದುವು. ಜಂಟಿ ಸಮಿತಿ ವರದಿಯ ಬಗ್ಗೆ ಸಂಪುಟ ತೀರ್ಮಾನ ತೆಗೆದು–ಕೊಂಡ ಮೇಲೆ ಅದನ್ನು ಸಂಸತ್ತಿನ ಮುಂದೆ ಮಂಡಿಸಿ ಅಂಗೀಕರಿಸುವುದು ಪದ್ಧತಿ. ಆದರೆ ಮತ್ತೆ ಸಚಿವ ಸಂಪುಟದ ಉಪಸಮಿತಿ ಒಂದನ್ನು ನೇಮಿಸಲಾಯಿತು. ಈ ಉಪಸಮಿತಿಯಲ್ಲಿ ಅಂಗವಿಕಲತೆಯ ಬಗ್ಗೆ ತಿಳಿದವರ್‍ಯಾರೂ ಇರಲಿಲ್ಲ. ಮಸೂದೆಯ ಕರಡನ್ನು ದುರ್ಬಲಗೊಳಿಸುವುದೇ ಈ ಉಪಸಮಿತಿಯ ನೇಮಕದ ಉದ್ದೇಶವಾಗಿತ್ತು. ಆಗ ಮತ್ತೆ ಚಳುವಳಿಗಳ ಸರಣಿ. ಮೇಲೆ ಹೇಳಿದಂತೆ ಒಂದು ವರ್ಷ ಕಾಲ ನಡೆದ ಹೋರಾಟಗಳ ಫಲವಾಗಿ ಸರ್ಕಾರ ರಾಜ್ಯಸಭೆಯ ಮುಂದೆ ಮಸೂದೆಯನ್ನು ಮಂಡಿಸಿತು. ಆದರೆ ನೋಟು ನಿಷೇಧದ ಬಗ್ಗೆ ವಿರೋಧ ಪಕ್ಷಗಳ ಕಟು ಟೀಕೆಯನ್ನು ಕೇಳಲಾಗದೆ ಮತ್ತು ಅದಕ್ಕೆ ಉತ್ತರಿಸಲಾಗದೆ ಮೋದಿ ಸಂಸತ್ತಿನಿಂದ ಪಲಾಯನಗೈದ ಕಾರಣ ಸಂಸತ್ತು 17ಕ್ಕಿಂತ ಹೆಚ್ಚು ದಿನಗಳ ಕಾಲ ನಡೆಯಲೇ ಇಲ್ಲ. ದೇಶದ ಅಂಗವಿಕಲರಿಗೆ ಮತ್ತೆ ಎಲ್ಲಿ ಈ ಮಸೂದೆ ಅಂಗೀಕಾರ ಪಡೆಯುವುದಿಲ್ಲವೋ ಎಂಬ ಆತಂಕ ಕಾಡಲಾರಂಭಿಸಿತು. ಇಂತಹ ಸಂದರ್ಭದಲ್ಲಿ ನೆರವಿಗೆ ಬಂದವರು ರಾಜ್ಯ ಸಭೆಯಲ್ಲಿ ಸಿಪಿಎಂ ನಾಯಕರಾದ ಕಾಂ ಸೀತರಾಂ ಎಚೂರಿಯವರು. ಅವರ ಪ್ರಯತ್ನದಿಂದ ರಾಜ್ಯ ಸಭೆಯಲ್ಲಿ ಈ ಮಸೂದೆ ಸಿಪಿಎಂ ಸದಸ್ಯರಾದ ಸಿ.ಪಿ.ನಾರಾಯಣನ್, ರಾಗೇಶ್ ಸೂಚಿಸಿದ ಕೆಲವು ತಿದ್ದುಪಡಿಗಳೊಂದಿಗೆ ಸರ್ವಾನುಮತದಿಂದ ಅಂಗೀಕಾರವಾಯಿತು. ನಂತರ ಲೋಕಸಭೆಯಲ್ಲಿಯೂ ಕೂಡ ಅಂಗೀಕಾರವಾಗಿದೆ. ಇನ್ನು ರಾಷ್ಟ್ರಪತಿಗಳ ಅಂಕಿತವಷ್ಟೇ ಬಾಕಿ ಉಳಿದಿದೆ.

ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟದ ಸೂಚನೆಗಳೂ ಸೇರಿದಂತೆ ದೇಶದ ಅಂಗವಿಕಲರ ಚಳುವಳಿಯಿಂದ ಸೂಚಿಸಲಾದ ಹಲವು ತಿದ್ದುಪಡಿಗಳನ್ನು ಸರ್ಕಾರ ಒಪ್ಪಲಾಗಿ ಈ ಕಾಯಿದೆಯಲ್ಲಿ ಸ್ಥಾನ ಪಡೆದಿವೆ. ಈ ಕಾಯಿದೆ ಸಬಲಗೊಳ್ಳಲು ಪ್ರಧಾನ ಅಂಶವಾಗಿದೆ. ಆದರೆ ಅದೇ ಸಂದರ್ಭದಲ್ಲಿ ಅನೇಕ ಮುಖ್ಯ ವಿಷಯಗಳ ಬಗೆಗಿನ ತಿದ್ದುಪಡಿಗಳ ಸಚನೆಯನ್ನು ಅಂಗೀಕರಿಸಲಾಗಿಲ್ಲ ಎಂಬುದು ಈ ಕಾಯಿದೆಯ ಪರಿಣಾಮವನ್ನು ಸೀಮಿತಗೊಳಿಸಿದೆ. ಅಂಗವಿಕಲರ ಘನತೆಯ ಜೀವನಕ್ಕೆ ಬಹು ಮುಖ್ಯವಾದ ಉದ್ಯೋಗ ಮತ್ತು ಜೀವನ ಸುಭದ್ರತೆಯ ಬಗೆಗಿನ ಹಕ್ಕುಗಳೂ ಸೇರಿದಂತೆ ಆಳುವ ವರ್ಗ ಒಪ್ಪಿಕೊಂಡಿಲ್ಲ. ಜನತೆಯ ಹಿತಗಳನ್ನು, ಆಶಯಗಳನ್ನು ಈಡೇರಿಸಲು ಅಗತ್ಯವಾದ ಸಂಪನ್ಮೂಲಗಳನ್ನು ತೊಡಗಿಸಲು ಸಿದ್ಧವಿಲ್ಲ. ಅಂಗವಿಕಲಪರ ಹೊಸ ಕಾಯಿದೆಯನ್ನು ಅಸ್ತಿತ್ವಕ್ಕೆ ತರಲು ಮಾಡಿದ ಹತ್ತು ವರ್ಷಗಳ ಸಂಘರ್ಷ ಕೇವಲ ಕೆಲ ಸೀಮಿತ ಹಕ್ಕುಗಳನ್ನು ಪಡೆಯುವುದಕ್ಕಷ್ಟೇ ಸಾಧ್ಯವಾಗಿದೆ. ಬಂಡವಾಳಶಾಹಿ ಪ್ರಭುತ್ವದಲ್ಲಿ ಆಳುವ ವರ್ಗ ಮತ್ತು ಜನತೆಯ ನಡುವಣ ವೈರುಧ್ಯದ ಒಂದು ನಿರ್ದಿಷ್ಟ ಉದಾಹರಣೆಯಾಗಿದೆ

ಸಾಮಾನ್ಯವಾಗಿ ಆಳುವ ವರ್ಗದ ಸರ್ಕಾರಗಳು ಯಾವ ಕಾಯಿದೆಯನ್ನು ಅಂಗೀಕರಿಸಿದಾಗಲೂ ಕೂಡ ಅದಕ್ಕೆ ಸಂಬಂಧಿಸಿದ ಜನ ಸಮುದಾಯದ ಸಲಹೆ ಪಡೆಯುವುದಾಗಲೀ, ಅವರೊಡನೆ ಚರ್ಚಿಸುವುದಾಗಲೀ ಮಾಡುವುದನ್ನು ಕಾಣುವುದಿಲ್ಲ. ಆದರೆ ಮಹಿಳಾ ದೌರ್ಜನ್ಯ ವಿರೋಧೀ ಕಾಯಿದೆಯಲ್ಲಿ ಮಹಿಳಾ ಚಳುವಳಿ ನಡೆಸಿದ ಹೋರಾಟ ಮತ್ತು ಸೀಮಿತ ಚರ್ಚೆಯನ್ನು ಹೊರತುಪಡಿಸಿದರೆ ಪ್ರತಿ ಕಲಂ ಬಗ್ಗೆ ಚರ್ಚಿಸಿ ದೇಶಾದ್ಯಂತ ಕಾಯಿದೆಗೆ ಸಂಬಂಧಿಸಿದ ಜನರು ಪಾಲ್ಗೊಂಡು ಕಾಯಿದೆಯನ್ನು ಬಲಪಡಿಸುವ ಮೂಲಕ ಈ ಕಾಯಿದೆ ಒಂದು ಇತಿಹಾಸವನ್ನು ನಿರ್ಮಿಸಿದೆ.

8,000 ಕೋಟಿ ರೂ (1.21 ಬಿಲಿಯನ್ ಡಾಲರ್) ಬಂಡವಾಳ ಹೂಡಿ 'ಚಿಲ್ಲರೆ ವ್ಯಾಪಾರ' ಮಾಡುತ್ತಿರುವ D-Mart

ಮಳಿಗೆ, ಶೇ. 10 ರಿಂದ 50 ರಷ್ಟು ರಿಯಾಯಿತಿ ದರದಲ್ಲಿ ವಸ್ತುಗಳನ್ನು ಮಾರಾಟ ಮಾಡುತ್ತಿದೆ. ಆನ್ಲೈನ್ ಮೂಲಕ ಖರೀದಿಸಿದವರಿಗೆ ಶೇ. 70 ರಷ್ಟು ರಿಯಾಯಿತಿ ನೀಡುವುದಾಗಿ ಜಾಹಿರಾತು ನೀಡುತ್ತಿದೆ. ಮೋದಿಯವರ 'ನಗದು ರಹಿತ ವ್ಯವಹಾರ'ದ ಕರೆಯಿಂದಾಗಿ ಮತ್ತು ಸಾಕಷ್ಟು ನಗದು ಸಿಗದಂತೆ ಮಾಡಿದ ಕಾರಣದ ಜೊತೆಗೆ ಬಾರಿ ರಿಯಾಯಿತಿಯ ಅಮಿಷಕ್ಕೆ ಒಳಗಾಗಿ ದೊಡ್ಡ ಬಂಡವಾಳಿಗರ 'ಚಿಲ್ಲರೆ ವ್ಯಾಪಾರ'ಕ್ಕೆ ಗ್ರಾಹಕರ ಸಂಖ್ಯೆ ಹೆಚ್ಚತೊಡಗಿದೆ. ದೊಡ್ಡ ವ್ಯಾಪಾರಿಗಳ ಜೊತೆ ಪೈಪೋಟಿ ನಡೆಸಲಾಗದ ಸಣ್ಣ ವ್ಯಾಪಾರಿಗಳ ಗ್ರಾಹಕರ ಸಂಖ್ಯೆ ಕ್ಷೀಣಿಸತೊಡಗಿದೆ. ಅವರೆಲ್ಲಾ ತಮ್ಮ ಅಂಗಡಿಗಳ ಬಾಗಿಲಿಗೆ ಶಾಶ್ವತವಾಗಿ ಬೀಗ ಜಡಿಯುವ ಕಾಲ ಸನ್ನಿಹಿತವಾಗುತ್ತಿದೆ. ನೋಟುಗಳ ರದ್ದತಿಯ ಮೋದಿಯ ಮುಚ್ಚಿಟ್ಟ ಉದ್ದೇಶದ ಗುರಿ ಈಡೇರುವ ಎಲ್ಲಾ ಲಕ್ಷಣ ಗೋಚರಿಸತೊಡಗಿವೆ.

– ಸಿದ್ಧಯ್ಯ

ರಿಝರ್ವ್ ಬ್ಯಾಂಕ್ ಮೌನವಾಗಿದೆ-ಆದರೆ ಅಂಕಿ-ಅಂಶಗಳು ಮಾತಾಡುತ್ತಿವೆ



ಹೀಗೆಂದಿದ್ದಾರೆ ಪ್ರೊ.ಸುರಜಿತ್ ಮಜುಂದಾರ್, ಜವಹರಲಾಲ್ ವಿವಿಯ ಅರ್ಥಶಾಸ್ತ್ರಜ್ಞರು, ಮೋದಿಯವರು ನವಂಬರ್ 8ರಂದು ಕೇಳಿದ 50 ದಿನಗಳ ಗಡುವು ಮುಗಿಯುವ ಹಿಂದಿನ ದಿನ. ಅನಾಣ್ಯೀಕರಣಕ್ಕೆ ಸಂಬಂಧಪಟ್ಟಂತೆ ರಿಝರ್ವ್ ಬ್ಯಾಂಕ್ ಅಂಕಿ-ಅಂಶಗಳನ್ನು ಕೊಡಲು ಹಿಂದೇಟು ಹಾಕುವಂತೆ ಕಾಣುತ್ತದೆ ಎನ್ನುತ್ತಾರೆ ಅವರು. ಆದರೂ ಅದು ಕೊಟ್ಟಿರುವ ಅಲ್ಪ-ಸ್ವಲ್ಪ ಮಾಹಿತಿಗಳ ಆಧಾರದಲ್ಲಿ ಲೆಕ್ಕ ಹಾಕಿದಾಗ ಕಪ್ಪು ಹಣವನ್ನು ಇಲ್ಲದಂತೆ ಮಾಡುವ 'ಒಳ್ಳೆಯ ದಿನ'ಗಳ ಪ್ರಚಾರ ಸಂಪೂರ್ಣ ಠುಸ್ಸಾಗಿರುವುದು ಕಾಣಬರುತ್ತಿದೆ ಎನ್ನುತ್ತಾರೆ ಪ್ರೊ. ಮಜುಂದಾರ್. ರಿಝರ್ವ್ ಬ್ಯಾಂಕ್ ಪೂರ್ಣ ಮಾಹಿತಿ ನೀಡದಿರಲು ಅದೂ ಒಂದು ಕಾರಣವಿರಬಹುದು .

ಡಿಸೆಂಬರ್13ರಂದು 12.44ಲಕ್ಷ ಕೋಟಿ ರೂ.ಗಳಷ್ಟು ರದ್ದುಗೊಳಿಸಿದ 500 ಮತ್ತು 1000ರೂ. ನೋಟುಗಳು ತಮಗೆ ತಲುಪಿರುವುದಾಗಿ ಅದರ ಡೆಪ್ಯುಟಿ ಗವರ್ನರ್ ಹೇಳಿದ್ದರು. ನಂತರ ಈ ಬಗ್ಗೆ ಅಂಕಿ-ಅಂಶಗಳನ್ನು ಕೊಟ್ಟಿಲ್ಲ. ಹೊಸ 2000 ಮತ್ತು 500ರ ನೋಟುಗಳನ್ನು ಎಷ್ಟು ಚಲಾವಣೆಗೆ ಕೊಡಲಾಗಿದೆ ಎಂಬ ಬಗ್ಗೆಯಂತೂ ಬಹಳ ಸಮಯದಿಂದ ಮಾಹಿತಿ ನೀಡಿಲ್ಲ. ಡಿಸೆಂಬರ್ 7ರಂದು ಒಂದು ಮಾಹಿತಿ ನೀಡಲಾಯಿತು, ನಂತರ ಅದನ್ನು ಹಿಂತೆಗೆದುಕೊಳ್ಳಲಾಯಿತು.

ಆದರೂ ಅಲ್ಲಿ-ಇಲ್ಲಿ ಲಭ್ಯವಿರುವ ಮಾಹಿತಿಗಳಿಂದ ಸಾಕಷ್ಟು ನಿಖರವಾದ ಅಂದಾಜು ಮಾಡಬಹುದು ಎಂದಿರುವ ಈ ಅರ್ಥಶಾಸ್ತ್ರಜ್ಞರ ಪ್ರಕಾರ ರದ್ದಾದ 500/1000ರೂ. ನೋಟುಗಳಲ್ಲಿ 1ಲಕ್ಷ ಕೋಟಿರೂ.ಗಳಿಗಿಂತಲೂ ಕಡಿಮೆ ಮೌಲ್ಯದ ನೋಟುಗಳನ್ನು ಬಿಟ್ಟು, ಸುಮಾರಾಗಿ ಎಲ್ಲವೂ ವಾಪಾಸಾಗಿದೆ, ಅಂದರೆ ಸರಕಾರ ಲೆಕ್ಕ ಹಾಕಿದ್ದ ಸುಮಾರು 3-4 ಲಕ್ಷ ಕೋಟಿ ರೂ.ಗಿಂತಲೂ ಹೆಚ್ಚು ಮೌಲ್ಯದ ಕಪ್ಪು ಹಣವೂ ಸುಮಾರಾಗಿ ಬಂದೇ ಬಿಟ್ಟಿದೆ. ಈ ಹಣ ವಾಪಾಸು ಬರಲಿಕ್ಕಿಲ್ಲ, ಆಮೂಲಕ ಅಷ್ಟು ಕಪ್ಪುಹಣವನ್ನು ಹೊರತೆಗೆದಂತಾಗುತ್ತದೆ ಎಂಬ ಸರಕಾರದ ದಾವೆ ಹುಸಿಯಾಗಿದೆ.



ವ್ಯಂಗ್ಯಚಿತ್ರ: ಕೇಶವ್, ದಿ ಹಿಂದು

ಇನ್ನು ಹೊಸ ನೋಟುಗಳನ್ನು ಮುದ್ರಿಸಿ ಚಲಾವಣೆಗೆ ತರುವಲ್ಲಿಯೂ ಸರಕಾರ/ ರಿಝರ್ವ್ ಬ್ಯಾಂಕ್ ಬಹಳ ಹಿಂದೆ ಬಿದ್ದಿದೆ ಎಂಬುದು ಕೂಡ ಸ್ಪಷ್ಟವಾಗುತ್ತಿದೆ. ಇನ್ನೂ ಸುಮಾರು 55% ಮೌಲ್ಯದ ನೋಟುಗಳು ಚಲಾವಣೆಗೆ ಬರಬೇಕಾಗಿದೆ, ಅಂದರೆ ಜನಗಳ ಮೇಲೆ ಹರಿಯ ಬಿಟ್ಟಿರುವ ನಗದು ಸಮರ ಡಿಸೆಂಬರ್ 30ಕ್ಕೆ ಕೊನೆಗೊಳ್ಳುವದಿಲ್ಲ, ಬದಲಿಗೆ ಇನ್ನೂ ಒಂದೆರಡು ತಿಂಗಳಾದರೂ ಮುಂದುವರೆಯುವ ಅಪಾಯವೇ ಹೆಚ್ಚಾಗಿದೆ.

ನವಂಬರ್ 8ರಂದು 500/1000ರೂ. ನೋಟುಗಳನ್ನು ರದ್ದು ಮಾಡಿದ ಎರಡು ದಿನಗಳ ನಂತರ ಪ್ರಧಾನಿಗಳು, ನನಗೆ 50ದಿನಗಳ ಅವಕಾಶ ಕೊಡಿ, ಆಮೇಲೆ ಬೇಕಾದರೆ ಯಾವ ಶಿಕ್ಷೆ ವಿಧಿಸಿದರೂ ಅದನ್ನು ಸ್ವೀಕರಿಸಲು ಸಿದ್ಧ ಎಂದು ಕಣ್ಣಲ್ಲಿ ನೀರು ತುಂಬಿಕೊಂಡು ಭಾವಪೂರ್ಣವಾಗಿ ಹೇಳಿದ್ದರು. 50ದಿನಗಳು ಮುಗಿಯುತ್ತ ಬಂದಿದ್ದರೂ ಕಪ್ಪು ಹಣವೂ ಹೊರಬಂದಂತಿಲ್ಲ, ಜನಗಳ ನಗದು ಬವಣೆಯೂ ತೀರುವಂತೆ ಕಾಣುತ್ತಿಲ್ಲ. ಆದರೆ ಅತ್ತ ಸಂಸತ್ತಿನಲ್ಲಿ ಮೌನವಾಗಿದ್ದ ಪ್ರಧಾನಿಗಳು ಹೊರಗೆ ನೀಡುತ್ತಿರುವ ಹೇಳಿಕೆಗಳು, ಮಾಡುತ್ತಿರುವ ಭಾಷಣಗಳನ್ನು ಕೇಳುತ್ತಿದ್ದರೆ, ಅವರು ಶಿಕ್ಷೆ ಅನುಭವಿಸಲು ಸಿದ್ಧವಾಗಿರುವಂತೆಯೂ ಕಾಣುತ್ತಿಲ್ಲ.

ಆದ್ದರಿಂದಲೇ ರಿಝರ್ವ್ ಬ್ಯಾಂಕ್ ನಿರ್ದಿಷ್ಟ ಅಂಕಿ-ಅಂಶಗಳನ್ನು ಪ್ರಕಟಿಸಲು ಹಿಂದೇಟು ಹಾಕುತ್ತಿರಬಹುದು ಎಂದು ಪ್ರೊ. ಸುರಜೀತ್ ಮಜುಂದಾರ್ ಹೇಳುತ್ತಾರೆ. ಇನ್ನೇನು 'ಜುಮ್ಲಾ' ಸೃಷ್ಟಿಸಬೇಕೆಂದು ಮೊದಲು ಸರಕಾರ ನಿರ್ಧರಿಸಲಿ, ಆಮೇಲೆ ಅದಕ್ಕೆ ಅನುಗುಣವಾಗಿ ಅಂಕಿ-ಅಂಶಗಳನ್ನು ನೀಡಿದರಾಯಿತು ಅದು ಕಾಯುತ್ತಿರುವಂತಿದೆ. ರಿಝರ್ವ್ ಬ್ಯಾಂಕಿನ ಮೌನಕ್ಕೆ ಬೇರೇನು ವಿವರಣೆ ಕಾಣುತ್ತಿಲ್ಲ ಎನ್ನುತ್ತಾರೆ ಪ್ರೊ. ಮಜುಂದಾರ್.

ಇದು ನಿಮಗೆ ಗೊತ್ತೇ?

* 2015-16ರಲ್ಲಿ ಬಿಜೆಪಿ ಪಡೆದ 'ದೇಣಿಗೆ'ಗಳ ಮೊತ್ತ 76.85 ಕೋಟಿ ರೂ. ಇದು ಕಾಂಗ್ರೆಸ್ ಕೂಡ ಸೇರಿದಂತೆ ಉಳಿದೆಲ್ಲ ಪಕ್ಷಗಳು ಪಡೆದ ದೇಣಿಗೆಗಳ ಮೊತ್ತದ ಮೂರು ಪಟ್ಟು! ಇದರಲ್ಲಿ 20,000ರೂ.ಗಿಂತ ಕಡಿಮೆ ದೇಣಿಗೆಗಳು ಸೇರಿರುವುದಿಲ್ಲ, ಏಕೆಂದರೆ ಅದನ್ನು ರಾಜಕೀಯ ಪಕ್ಷಗಳು ತಿಳಿಸಬೇಕಾಗಿಲ್ಲ.
* ಒಟ್ಟು ದೇಣಿಗೆಗಳಲ್ಲಿ ಬಿಜೆಪಿಯ ಪಾಲು 2014-15ರಲ್ಲಿ 69% ಇತ್ತು, 2015-16ರಲ್ಲಿ ಅದು 75% ಕ್ಕೆ ಏರಿತು!

ದೇವೇಶ್ ಕಪೂರ್ ಮತ್ತು ಮಿಲನ್ ವೈಷ್ಣವ್ ಈ ಅಂಕಿ-ಅಂಶಗಳನ್ನು ತಮ್ಮ ಪ್ರಬಂಧ 'ಎಲೆಕ್ಷನ್ ಫಿನಾನ್ಸ್ ಇನ್ ಇಂಡಿ-ಯಾ' ಪ್ರಬಂಧದಲ್ಲಿ ತಿಳಿಸಿದ್ದಾರೆ. ಅವರ ಅಧ್ಯಯನದ ಪ್ರಕಾರ ರಿಯಲ್ ಎಸ್ಟೇಟ್‌ನ ಕಾನೂನು ಬಾಹಿರ ಹಣ(ಕಪ್ಪು ಹಣ) ಮತ್ತು ಪಕ್ಷಗಳ ಚುನಾವಣಾ ನಿಧಿಯ ನಡುವೆ ನೇರ ಸಂಬಂಧ ಇದೆ. ಕಪ್ಪು ಹಣವನ್ನು ನಿರ್ಮೂಲ ಮಾಡುವ 'ಗುರಿ' ಇಟ್ಟುಕೊಂಡಿದ್ದೇನೆ ಎಂದು ಹೇಳಿಕೊಳ್ಳುತ್ತಿರುವ ಪ್ರಧಾನಿಗಳು ಈ ಬಗ್ಗೆ ಏನು ಹೇಳುತ್ತಾರೆ ಎಂದು ಒಬ್ಬ ಪತ್ರಕರ್ತರು ಕೇಳುತ್ತಾರೆ.

ಏನೂ ಹೇಳುವುದಿಲ್ಲ, ಆದರೆ ಇತ್ತೀಚೆಗೆ ಅವರು ಚುನಾವಣೆಗಳ ವೆಚ್ಚವನ್ನು ಸರಕಾರ ನೊಡಿಕೊಳ್ಳುವ ಕ್ರಮದ ಬಗ್ಗೆ ಯೋಚಿಸಬೇಕು ಎಂದು ಪ್ರಧಾನ ಮಂತ್ರಿಗಳು ಹೇಳಿರುವುದು ಈ ಹಿನ್ನೆಲೆಯಲ್ಲಿಯೇ ಇರಬಹುದು ಎಂದು ಆ ಪತ್ರಕರ್ತರು ಹೇಳುತ್ತಾರೆ. ಅಂದರೆ ಈ ಸಂಗತಿಯನ್ನು ಮರೆಮಾಚಲು ಇರಬಹುದೇ? ಅವರ ಈ ಹೇಳಿಕೆ ಪ್ರಾಮಾಣಿಕವಾಗಿದ್ದರೆ ತಮ್ಮ ಬಹುಮತವನ್ನು ಬಳಸಿ ಈ ಬಗ್ಗೆ ಕಾನೂನು ತರಬಾರದೇಕೆ ಎಂದು ಅವರು ಪ್ರಶ್ನಿಸಿದ್ದಾರೆ.

ಮಹಿಳೆಯರಿಗೆ 33% ಮೀಸಲಾತಿಯ ಮಸೂದೆಯ ಗತಿ ನೋಡಿದ ಮೇಲೆ ಈ ಪ್ರಶ್ನೆಗೆ ಉತ್ತರ ಬೇಕೇ?

ಪರಿಸರದ ನೆಪದಲ್ಲಿ ಜನತೆಯ ಎತ್ತಂಗಡಿ ಬೇಡ!

ಉತ್ತರ ಕನ್ನಡ ಜಿಲ್ಲೆಯ ಜೋಯಿಡಾದಲ್ಲಿ ಅರಣ್ಯ ಸಂಬಂಧಿಸಿದ ಕಾಯ್ದೆಗಳ ಹೇರಿಕೆಯಿಂದ ಜನರನ್ನು ಹೆದರಿಸಿ ಹೊರಗಟ್ಟುವ, ಕೃಷಿಯನ್ನು ನಂಬಿರುವ ಜೋಯಿಡಾ ಜನತೆಯನ್ನು ವಸತಿ ವಂಚಿತರನ್ನಾಗಿ ಮಾಡಲು ಜೋಯಿಡಾವನ್ನು ಪರಿಸರ ಸೂಕ್ಷ್ಮ ವಲಯ ಎಂದು ಆದೇಶ ಹೊರಡಿಸಿರುವುದನ್ನು ಖಂಡಿಸಿ ಡಿಸೆಂಬರ್ 27 ರಂದು ಬೃಹತ್ ಪ್ರತಿಭಟನೆ ನಡೆಯಿತು.

ಪ್ರಾಣಿಗಳಿಗೆ ತೊಂದರೆಯಾಗುತ್ತದೆ ಎಂಬ ನೆಪದಲ್ಲಿ ಸಂಜೆಯಿಂದ ಮುಂಜಾನೆವರೆಗೆ ರಸ್ತೆ ಬಂದ್ ಮಾಡಿ ನಾಗರಿಕರನ್ನು ತೊಂದರೆಗೆ ದೂಡಿದ್ದಾರೆ. ಪರಿಸರ ವಲಯವೆಂದು ಗುರುತು ಮಾಡಲು ಮುಖ್ಯ ಕಾರಣ ವನ್ಯಜೀವಿ ಕಾಯ್ದೆ, ಡಾ॥ಕಸ್ತೂರಿ ರಂಗನ್ ವರದಿ, ವಿಶ್ವ ಪರಂಪರಾ ತಾಣದಲ್ಲಿ ಗುರುತಿಸಿರುವುದು ಹಾಗೂ ಕಾಳಿ ಹುಲಿ ಯೋಜನೆಯ ರಾಷ್ಟ್ರೀಯ ಉದ್ಯಾನವನದ ವಿವಿಧ ಅರಣ್ಯ ಸಂಬಂಧಿ ಕಾಯ್ದೆಗಳಿಂದಾಗಿದೆ.

ಜನರ ಸಂರಕ್ಷಣೆಗೆ ಯಾವುದೇ ಯೋಜನೆ ತರದೆ ಅರಣ್ಯವಾಸಿಗಳ ಶೋಷಿಸುವ ಮತ್ತು ರೈತಾಪಿ ದುಡಿಯುವ ಜನರ ಬದುಕನ್ನು ಬಿಕರಿ ಮಾಡುವ ಸರ್ಕಾರದ ಧೋರಣೆ ವಿರುದ್ಧ ಜನತೆ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಸಿಪಿಐ(ಎಂ) ಒಳಗೊಂಡು ಎಲ್ಲಾ ಪಕ್ಷಗಳ ಜಂಟಿ ಹೋರಾಟ ನಡೆಯಿತು. ಸಿಪಿಐ(ಎಂ) ಪಕ್ಷದ ಪರವಾಗಿ ಜಿಲ್ಲಾ ಸಮಿತಿ ಸದಸ್ಯರಾದ ಪ್ರೇಮಾನಂದ ವೆಳಿಪ್ ಮತ್ತು ಜಿಲ್ಲಾ ಕಾರ್ಯದರ್ಶಿ ಯಮುನಾ ಗಾಂವ್ಕರ್ ಮಾತನಾಡಿದರು. ಕೆಪಿಆರ್‌ಎಸ್ ಮುಖಂಡರಾದ ರಾಜೇಶ ಗಾವಡಾ, ಡಿವೈಎಫ್‌ಐ ಜಿಲ್ಲಾ ಕಾರ್ಯದರ್ಶಿ ಡಿ.ಸ್ಯಾಮ್‌ಸನ್, ಎಸ್‌ಎಫ್‌ಐ ಜಿಲ್ಲಾ ಸಂಚಾಲಕ ಗಣೇಶ್ ಹಾಗೂ ರೈತ ಯುವಜನ ಸಂಘಟನೆಯ ನೂರಾರು ಕಾರ್ಯಕರ್ತರು ಭಾಗವಹಿಸಿದ್ದರು.

ವರದಿ : ಯಮುನಾ ಗಾಂವ್ಕರ್



ನಿವೇಶನ ರಹಿತರ ಅನಿರ್ದಿಷ್ಟಾವಧಿ ಹೋರಾಟಕ್ಕೆ ಕರೆ



ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಕೊಲ್ಲಳ್ಳಿ ಗ್ರಾಮದಲ್ಲಿ ನಿವೇಶನ ರಹಿತರ ಸಭೆಯು ಡಿಸೆಂಬರ್ 29ರಂದು ನಡೆಯಿತು. ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್)ದ ರಾಜ್ಯ ಅಧ್ಯಕ್ಷರಾದ ಮಾರುತಿ ಮಾನ್ಪಡೆರವರು ಮಾತನಾಡಿದರು.

ಜನವರಿ 05 ರಂದು ನಿವೇಶನ ರಹಿತರ ಅನಿರ್ದಿಷ್ಟಾವಧಿ ಹೋರಾಟಕ್ಕೆ ಕರೆ ನೀಡಿದರು. ಸಭೆಯಲ್ಲಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಧರ್ಮೇಶ್, ಕೆಪಿಆರ್‌ಎಸ್ ಜಿಲ್ಲಾಧ್ಯಕ್ಷರಾದ ಹೆಚ್. ಆರ್.ನವೀನ್‌ಕುಮಾರ್, ದಲಿತ ಹಕ್ಕುಗಳ ಸಮಿತಿ ಜಿಲ್ಲಾ ಸಂಚಾಲಕರಾದ ಪೃಥ್ವಿ, ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಹರೀಶ್ ಮತ್ತು ದಲಿತ ಮುಖಂಡರಾದ ಮಲ್ಲಪ್ಪ, ಸಂದೇಶ್, ವಿಜಯ್‌ಕುಮಾರ್ ಮತ್ತು ಸ್ಥಳೀಯರಾದ ಸಲೀಂ ಭಾಗವಹಿಸಿದ್ದರು.

ಕ್ಯಾಲೆಂಡರ್ ಹಾಗೂ ಪುಸ್ತಕ ಬಿಡುಗಡೆ



ದಾವಣಗೆರೆಯಲ್ಲಿ ಡಿಸೆಂಬರ್ 25, 2016ರಂದು ಸೋವಿಯತ್ ಸಮಾಜವಾದಿ ಕ್ರಾಂತಿ ಶತಮಾನೋತ್ಸವದ ಆಚರಣೆ ಅಂಗವಾಗಿ ಕ್ಯಾಲೆಂಡರ್ ಹಾಗೂ ಪುಸ್ತಕ ಬಿಡುಗಡೆ ಕಾರ್ಯಕ್ರಮ ನಡೆಯಿತು. ಹಿರಿಯ ಪತ್ರಕರ್ತ ಬಿ.ಎನ್.ಮಲ್ಲೇಶ, ಕನ್ನಡ ಪ್ರಾಧ್ಯಾಪಕರಾದ ಡಾ.ಎ.ಬಿ.ರಾಮಚಂದ್ರ, ಸಿಐಟಿಯು ರಾಜ್ಯ ಕಾರ್ಯದರ್ಶಿಗಳಾದ ಕೆ.ಮಹಾಂತೇಶ್ ಹಾಗೂ ಬಾಲಕೃಷ್ಣ ಶೆಟ್ಟಿ ಮೊದಲಾದವರು ಭಾಗವಹಿಸಿದ್ದರು.



ಕೆ.ಎಂ.ನಾಗರಾಜ್

ಸರ್ವಾಧಿಕಾರಶಾಹಿಯೂ ಮತ್ತು ವಿಚಾರಹೀನತೆಯ ಬಗ್ಗೆ ಹೆಮ್ಮೆಯೂ

ಯಾವ ಸರ್ಕಾರ ಕೈಗೊಂಡ ಕ್ರಮವು ಜನರನ್ನು ಅತೀವ ಸಂಕಷ್ಟಕ್ಕೆ ಈಡು ಮಾಡಿದೆಯೋ ಅದೇ ಕಾರಣದ ಮೇಲೆ ಅದೇ ಸರ್ಕಾರವನ್ನೇ ಹಾಡಿ ಹೊಗಳುತ್ತಿರುವುದೇ ಈಗ ನಮ್ಮ ಮುಂದಿರುವ ಸನ್ನಿವೇಶ. ಏಕೆಂದರೆ 'ಜನತೆ'ಯ ಬದಲಾಗಿ 'ನಾಯಕ'ನ ಮೇಲೆ ಗಮನ ಕೇಂದ್ರೀಕರಣಗೊಂಡಿದೆ. ಈ ರೀತಿ ಗಮನದಲ್ಲಾಗಿರುವ ಪಲ್ಲಟದಲ್ಲಿ ತೊಂದರೆಗೊಳಗಾದ 'ಜನರೇ' ತಮಗೆ ಅದರಿಂದ ಕಷ್ಟ ಬಂದಿದ್ದರೂ, 'ನಾಯಕ'ನ ಧೈರ್ಯ-ಮುಂದಾಲೋಚನೆಗಳನ್ನು ಕೊಂಡಾಡುತ್ತಿದ್ದಾರೆ ಎಂದು ದಾವೆ ಹೂಡಲಾಗುತ್ತಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಿಂದ ಸರ್ವಾಧಿಕಾರಶಾಹಿಯತ್ತ ಪರಿವರ್ತನೆಯ ಒಂದು ದ್ವಂದ್ವವನ್ನು ರೂಪಿಸುವ ಇದು ಅತ್ಯಂತ ಅಪಾಯಕಾರಿ ಎನ್ನುತ್ತಾರೆ ಪ್ರೊ. ಪ್ರಭಾತ್ ಪಟ್ನಾಯಕ್. ಅವರ The Dialectics of Authoritarianism ಲೇಖನದ ಭಾವಾನುವಾದ ಇಲ್ಲಿದೆ.

ದೊಡ್ಡ ಮೊತ್ತದ ನೋಟುಗಳ ರದ್ದತಿಯ ನಂತರ ದೇಶದಲ್ಲಿ ತರ್ಕ ಸರಣಿ ತಲೆಕೆಳಗಾಗಿರುವುದನ್ನು ಕಾಣುತ್ತಿದ್ದೇವೆ. ಅಂದರೆ ಮೋದಿ ಸರ್ಕಾರದ ನೋಟು ರದ್ದತಿಯ ಪರಿಣಾಮವಾಗಿ ಜನಸಾಮಾನ್ಯರ ಸಮಸ್ಯೆಗಳು ದಿನೇ ದಿನೇ ಎಷ್ಟು ತೀವ್ರವಾಗಿ ಉಲ್ಬಣಗೊಳ್ಳುತ್ತಿವೆಯೋ ಅಷ್ಟೇ ಜೋರಾಗಿ ನೋಟು ರದ್ದತಿಯ ಕ್ರಮ ಕೈಗೊಂಡ ಮೋದಿಯವರ "ಧೈರ್ಯ"ವನ್ನು ಕೊಂಡಾಡುವುದೂ ನಡೆಯುತ್ತಿದೆ.

ಸಾಮಾನ್ಯವಾಗಿ, ಒಂದು ಮುಖ್ಯವಾದ ಆರ್ಥಿಕ ಕಾರ್ಯಕ್ರಮವನ್ನು ಹಮ್ಮಿಕೊಂಡಾಗ, ಅದರಿಂದ ಜನ ಸಾಮಾನ್ಯರಿಗೆ ಪ್ರಯೋಜನ ಆಗುತ್ತದೆ ಎಂದಾದರೆ ಆ ಕ್ರಮವನ್ನು ಹೊಗಳುವುದೂ ಮತ್ತು ಆ ಕ್ರಮದಿಂದ ಜನರಿಗೆ ತೊಂದರೆಯಾಗುವುದೆಂದಾರೆ ಅದನ್ನು ಹಳಿಯುವುದೂ ವಾಡಿಕೆ. ಆದರೆ, ನೋಟುಗಳ ರದ್ದತಿಯ ವಿಷಯದಲ್ಲಿ ಒಂದು ತದ್ವಿರುದ್ಧವಾದ ವಿದ್ಯಮಾನ ನಮ್ಮೆದುರು ಜರುಗುತ್ತಿದೆ: ನೋಟು ರದ್ದತಿಯಿಂದ ಜನರ ತೊಂದರೆಗಳು ಹೆಚ್ಚಾದಷ್ಟೂ ಮೋದಿಯವರ ಬುದ್ಧಿವಂತಿಕೆ ಮತ್ತು ಧೈರ್ಯವನ್ನು ಪ್ರಶಂಸಿಸುವುದೂ ಜೋರಾಗಿದೆ. ಈ ಪ್ರಶಂಸೆಯಲ್ಲಿ ತೊಡಗಿರುವವರು ಪಕ್ಕಾ ಬಿಜೆಪಿ ಪರಿವಾರದ ಬುದ್ಧಿಜೀವಿಗಳು ಮಾತ್ರವಲ್ಲ, ಹೊರ ದೇಶಗಳ ಶೈಕ್ಷಣಿಕ ವಲಯದ ಒಂದು ಗುಂಪಿನ ಎನ್‌ಆರ್‌ಐ ಬೋಧಕರೂ ಸೇರಿದಂತೆ ಅನೇಕ ವ್ಯಾಖ್ಯಾನಕಾರರೂ ಇಂತಹ ಒಂದು ತಲೆ-ಕೆಳಗು ತರ್ಕದ ವಾದ ಸರಣಿಯನ್ನು ಮಂಡಿಸುತ್ತಿದ್ದಾರೆ.

ಈ ರೀತಿಯಲ್ಲಿ ವಾದ ಮಾಡುತ್ತಿರುವವರು, ನೋಟುಗಳ ರದ್ದತಿಯಿಂದಾಗಿ ದೀರ್ಘಕಾಲದಲ್ಲಿ ಜನರಿಗೆ ಯಾವ ರೀತಿಯ ಪ್ರಯೋಜನವಾಗುತ್ತದೆ ಎಂಬುದನ್ನು ವಿವರಿಸಿದ್ದಿದ್ದರೆ ಜನರು ಎದುರಿಸುತ್ತಿರುವ ಸಮಸ್ಯೆಗಳು ತಾತ್ಕಾಲಿಕ ಎಂಬ ಅವರ ಮಾತುಗಳಿಗೆ ಸ್ವಲ್ಪವಾದರೂ ತೂಕವಿರುತ್ತಿತ್ತು. ಆಗ, ಜನರು ಎದುರಿಸುತ್ತಿರುವ ಸಮಸ್ಯೆಗಳನ್ನು ಲೆಕ್ಕಿಸದೆ ಅವುಗಳನ್ನು ಪಣಕ್ಕೊಡ್ಡಿ, ನೋಟು ರದ್ದತಿಯ ಕ್ರಮ ಕೈಗೊಂಡ ಮೋದಿಯವರ ಬುದ್ಧಿವಂತಿಕೆ ಮತ್ತು ಧೈರ್ಯವನ್ನು ಅವರು ಪ್ರಶಂಸಿಸುವುದಕ್ಕೆ ಒಂದು ಅರ್ಥವಿರುತ್ತಿತ್ತು. ಆದರೆ, ಮೋದಿ ಸರ್ಕಾರದ ನೋಟು ರದ್ದತಿಯ ಕ್ರಮವನ್ನು ಟೀಕಿಸುತ್ತಿರುವವರು ನೋಟು ರದ್ದತಿಯ ಕ್ರಮವು ಬಹುಶಃ ತನ್ನ ಉದ್ದೇಶಿತ ಗುರಿಗಳನ್ನು ತಲುಪುವುದರಲ್ಲಿ ವಿಫಲವಾಗುತ್ತದೆ ಎಂದು ಹೇಳುವ ಅಭಿಪ್ರಾಯವನ್ನು ಅಲ್ಲಗಳೆಯುತ್ತಿಲ್ಲ, ಅಥವ ಅಲ್ಲಗಳೆಯುವ ಒಂದು ಸಣ್ಣ ಪ್ರಯತ್ನವನ್ನೂ ಮೋದಿಯುವರನ್ನು ಹೊಗಳುತ್ತಿರುವವರಲ್ಲಿ ಯಾರೊಬ್ಬರೂ ಮಾಡಿಲ್ಲ. ಆದ್ದರಿಂದ, ನೋಟು ರದ್ದತಿಯ ಕ್ರಮವು ದೀರ್ಘಕಾಲದಲ್ಲಿ ಜನರಿಗೆ ಪ್ರಯೋಜನ ಉಂಟುಮಾಡುವ ಪ್ರಶ್ನೆಯೇ ಏಳುವುದಿಲ್ಲ.

ನೋಟು ರದ್ದತಿಯು ಇಡೀ ಜನತೆಯನ್ನು ಹೇಳಲಾರದಷ್ಟು ತೊಂದರೆಗಳಿಗೆ ಗುರಿಮಾಡಿದೆಯಲ್ಲದೆ ಬೇರೆ ಏನನ್ನೂ ಸಾಧಿಸಿಲ್ಲ ಎಂಬ ಅಂಶವು ಸಾಬೀತಾದ ಮೇಲೂ ನೋಟು ರದ್ದತಿ ಮಾಡಿದ ಮೋದಿಯವರನ್ನು ಹೊಗಳುತ್ತಿರುವ ಮಂದಿಯ ಅಭಿಪ್ರಾಯಗಳು ತಲೆ-ಕೆಳಗು ತರ್ಕವಲ್ಲದೆ ಬೇರೇನೂ ಅಲ್ಲ.

ನಾಟಕಕಾರ ಬರ್ಟೋಲ್ ಬ್ರೆಕ್ಟ್ ತನ್ನ ನಾಟಕವೊಂದರಲ್ಲಿ ವಿಡಂಬನಾತ್ಮಕವಾಗಿ ಹೀಗೆ ಬರೆದಿದ್ದರು: **"ಸರ್ಕಾರ ಜನರ ವಿಶ್ವಾಸ ಕಳೆದುಕೊಂಡಿದೆ ಎಂದು ಅನಿಸುತ್ತಿದೆ; ಅದು ಜನರನ್ನು ವಜಾ ಮಾಡಿ ಹೊಸ ಜನರನ್ನು ಏಕೆ ಆರಿಸಬಾರದು?"**. ಇಲ್ಲಿರುವುದು ಸರ್ಕಾರ ಜನತೆಯ ವಿಶ್ವಾಸ ಕಳೆದುಕೊಂಡರೂ ಜನತೆಯ ಹೆಸರಿನಲ್ಲಿ ಅಧಿಕಾರದಲ್ಲಿ ಮುಂದುವರಿಯುತ್ತಿದೆ ಎಂದಲ್ಲ; ಯಾವ ಸರ್ಕಾರ ಕೈಗೊಂಡ ಕ್ರಮವು ಜನರನ್ನು ಅತೀವ ಸಂಕಷ್ಟಕ್ಕೆ ಈಡು ಮಾಡಿದೆಯೋ ಅದೇ ಕಾರಣದ ಮೇಲೆ ಅದೇ ಸರ್ಕಾರವನ್ನೇ ಹಾಡಿ ಹೊಗಳುತ್ತಿರುವುದೇ ಈಗ ನಮ್ಮ ಮುಂದಿರುವ ಸನ್ನಿವೇಶ.

ಈ ರೀತಿ ತರ್ಕವನ್ನು ತಲೆಕೆಳಗಾಗಿಸುವುದೇ, ಮೂಲಭೂತವಾಗಿ, ಒಂದು ಪ್ರಜಾಪ್ರಭುತ್ವ ವಿರೋಧಿ ಕ್ರಮ. ಇದು ಉಂಟಾಗುವುದು 'ಜನತೆ 'ಯ ಬದಲಾಗಿ 'ನಾಯಕ'ನ ಕಡೆಗೆ ಗಮನ ಹೊರಳಿದಾಗ. ಇಂತಹ ಪಲ್ಲಟ, ಹೆಚ್ಚೆಂದರೆ, ಜನತೆಯನ್ನು ನಾಯಕನ ಪರಾಕ್ರಮವನ್ನು ಪ್ರದರ್ಶಿಸಲು ಹಿಂಪರದೆಯ ಮಟ್ಟಕ್ಕೆ ಇಳಿಸುತ್ತದೆ. ಎಲ್ಲ ಗಮನವೂ ನಾಯಕನತ್ತ ಕೇಂದ್ರೀಕೃತವಾಗುವುದರಿಂದ, ಆತ ಎಲ್ಲರ ಕಣ್ಮಣಿಯಾಗಿ ತನ್ನ ಶೌರ್ಯ ಪ್ರದರ್ಶನ ಮಾಡಬೇಕಾಗುತ್ತದೆ, ಆಗ ಅನಿವಾರ್ಯವಾಗಿಯೇ 'ಅವಾಕ್ಕಾಗಿಸುವ', ಅತಿರೇಕದ ನಿರ್ಣಯಗಳನ್ನು ಕೈಗೊಂಡು ಎಲ್ಲರೂ ನಿಬ್ಬೆರಗಾಗಿ ತಲೆಬಾಗುವಂತೆ ಮಾಡುವ ಪ್ರವೃತ್ತಿ ಕಂಡು ಬರುತ್ತದೆ, ಈ ನಿರ್ಣಯಗಳು ಅತಿರೇಕದ್ದಾಗಿದ್ದು ಜನಗಳಿಗೆ ತೀವ್ರ ಸಂಕಟಗಳನ್ನು ತರುವುದರಿಂದಲೇ, ಅವುಗಳ ಆ ಅತಿರೇಕದ ಸ್ವರೂಪವೇ ಒಂದು ಪರಾಕ್ರಮವಾಗಿ ಕಾಣಿಸುತ್ತದೆ.

'ಜನತೆ' ಯ ಬದಲಾಗಿ 'ನಾಯಕ'' ಕಡೆಗೆ ಗಮನ ಹೊರಳಿದಾಗ, ನಾಯಕ ಕೈಗೊಳ್ಳುವ ತೀರ್ಮಾನಗಳು, ಗತ್ಯಂತರವಿಲ್ಲದೆ, ವಿಚಾರಪರತೆಯಿಂದ ದೂರ ಉಳಿಯುತ್ತವೆ. ವಿಚಾರಪೂರ್ಣ ತೀರ್ಮಾನಗಳು ಒಳಿತು-ಕೆಡಕುಗಳ ಪರಿಗಣನೆಯ ನಂತರ ಹೊರ ಬರುತ್ತವೆ. ವಿಚಾರಪೂರ್ಣ ತೀರ್ಮಾನ ಎಂದಾಗ, ಅದು 'ಒಳ್ಳೆದು','ನೈತಿಕ'ವಾದುದು ಎಂದೇನೂ ಆಗಿರಬೇಕಾಗಿಲ್ಲ. ಆದರೆ, ತನ್ನ ಪರಾಕ್ರಮವನ್ನು ಸ್ಥಾಪಿಸಲು 'ಭಯ-ಭಕ್ತಿ'ಯನ್ನು ಉಂಟುಮಾಡುವ ಪ್ರಯತ್ನದಲ್ಲಿ, 'ನಾಯಕ' ತಾನು ಎಲ್ಲರ ಕಣ್ಣಣಿ ಎಂಬುದನ್ನು ಸಮರ್ಥಿಸಿಕೊಳ್ಳಲು ಜಾಗರೂಕತೆಯಿಂದ ಲೆಕ್ಕ ಹಾಕುವುದಿಲ್ಲ. ತಾನು ಜಾಗರೂಕತೆಯಿಂದ ಹಾಗೆ ಮೀನ ಮೇಷ ಎಣಿಸದೆ ತೀರ್ಮಾನ ಕೈಗೊಳುವ ಧೈರ್ಯ ಮಾಡುತ್ತೇನೆ, ಬೇರೆಯವರಂತೆ ಪುಕ್ಕಲ ಅಲ್ಲ ಎಂಬುದನ್ನು ಸಾಬೀತುಪಡಿಸುವ ರೀತಿಯಲ್ಲಿ ಹುಂಬ ತೀರ್ಮಾನ ತೆಗೆದುಕೊಂಡು ಅದನ್ನೇ ತನ್ನ ಶೌರ್ಯವೆಂದು ಮೆರೆಯುತ್ತಾನೆ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ, ತನ್ನ ವಿಚಾರಹೀನತೆಯ ಬಗ್ಗೆ ಆತ ಹೆಮ್ಮೆಪಡುತ್ತಾನೆ.

ಕೆಲವೊಮ್ಮೆ ಹಿಂದಿರುಗಿ ನೋಡಿದಾಗ 'ವಿಚಾರಪೂರ್ಣ ನಿರ್ಣಯ' ಕೂಡ ವಿಚಾರಹೀನವಾಗಿ ಕಾಣಬಹುದು. ಎಂಬುದನ್ನು ಮರೆಯುವಂತಿಲ್ಲ. ಏಕೆ-ಂದರೆ, ಇತಿ ಮಿತಿಗಳನ್ನು ತಪ್ಪಾಗಿ ಗ್ರಹಿಸಿರಬಹುದು, ಇಲ್ಲವೇ ಬಳಸಿದ ಸಾಧನವು ನಿರೀಕ್ಷಿತ ಫಲಿತಾಂಶ ಕೊಟ್ಟಿರದಿರಬಹುದು, ಆಧರಿಸಿದ ಅಂಕಿ ಅಂಶಗಳು ನಿಖರವಾಗಿರದ್ದರಿಂದಲೂ ಆಗಬಹುದು. ಆದರೂ ಇಂತಹ ನಿರ್ಣಯಗಳನ್ನು ಕೂಡ "ಆಘಾತ ಮತ್ತು ಭಯ ಭಕ್ತಿ"ಉಂಟುಮಾಡುವ ಉದ್ದೇಶದ ತೀರ್ಮಾನಗಳಿಗೆ ಹೋಲಿಸುವಂತಿಲ್ಲ. ಇವೆರಡೂ ಬೇರೆ ಬೇರೆಯೇ ಆಗಿರುತ್ತವೆ. ನರೇಂದ್ರ ಮೋದಿಯವರ ನಾಯಕತ್ವದಂತಹ ಸರ್ವಾಧಿಕಾರಶಾಹಿ ಆಡಳಿತವು ತೆಗೆದುಕೊಂಡಿರುವ ನಿರ್ಣಯ ಈ ಅರ್ಥದಲ್ಲಿ 'ವಿಚಾರಹೀನ'ವಾಗುತ್ತವೆ. ಈ ವಿಚಾರಹೀನತೆಗೆ ತಪ್ಪು ಅಂಕಿ ಅಂಶಗಳು ಕಾರಣವಲ್ಲ. ಬದಲಾಗಿ, ವೈಚಾರಿಕತೆ ಎಂಬುದು ಒಂದು ಪುಕ್ಕಲುತನವೆಂದೂ ಮತ್ತು ಅದು ಒಬ್ಬ ನಾಯಕನಿಗೆ ಸಲ್ಲದ ಲಕ್ಷಣವೆಂದೂ ಅವರು ಬಗೆದಿರುವುದೇ ಕಾರಣವಾಗಿರುತ್ತದೆ.

ಅಗಾಧ ಪ್ರಮಾಣದ ನೋಟು ರದ್ದತಿ ಮಾಡಿದ ಮೋದಿಯವರ ಉದ್ದೇಶವಾದರೂ ಏನು ಎಂಬ ಈ ಪ್ರಶ್ನೆಯನ್ನು ಅನೇಕ ಮಂದಿ ಪದೇ ಪದೇ ಕೇಳುತ್ತಾರೆ. ಕಪ್ಪು ಹಣ ಹೊರ ತೆಗೆಯುವುದು, ಭಯೋತ್ಪಾದನೆಯ ಬೆನ್ನೆಲಬು ಮುರಿಯುವುದು ಮುಂತಾದ ಘನವಾದ ಉದ್ದೇಶಗಳು ಈಡೇರುವುದಿಲ್ಲವೆಂದೂ ಮತ್ತು ಒಟ್ಟು ಉದ್ಯೋಗಗಳಲ್ಲಿ ಶೇ.80 ಮಂದಿ ದುಡಿಯುತ್ತಿರುವ ಹಾಗೂ ನಮ್ಮ ಆರ್ಥವ್ಯವಸ್ಥೆಯ ಸುಮಾರು ಅರ್ಧದಷ್ಟು ಉತ್ಪಾದನೆ ಮಾಡುವ ಅನೌಪಚಾರಿಕ ವಲಯವನ್ನು ಈ ನೋಟು ರದ್ದತಿಯು ಬಲಿ ತೆಗೆದುಕೊಳ್ಳುತ್ತದೆ ಎಂಬುದನ್ನು ಈ ಪ್ರಶ್ನೆ ಕೇಳುವವರಲ್ಲಿ ಅನೇಕರು ಒಪ್ಪುತ್ತಾರೆ. ಅನೌಪಚಾರಿಕ ವಲಯವನ್ನು ಬಲಿ ತೆಗೆದುಕೊಳ್ಳುವ ನೋಟು ರದ್ದತಿಯು ಚುನಾವಣೆಗಳಲ್ಲಿ ಬಿಜೆಪಿಯು ಭಾರಿ ಬೆಲೆ ತೆರುವಂತೆ ಮಾಡುತ್ತದೆ. ಹಾಗಿದ್ದರೂ, ಅಗಾಧ ಪ್ರಮಾಣದ ನೋಟು ರದ್ದತಿ ಮಾಡಿದ ಮೋದಿಯವರು ಉದ್ದೇಶವಾದರೂ ಏನು? ಎಂಬ ಅವರ ಪ್ರಶ್ನೆ ಪ್ರಸ್ತುತವಾಗಿಯೇ ಉಳಿಯುತ್ತದೆ.

ಈ ಪ್ರಶ್ನೆಗೆ ಉತ್ತರವನ್ನು ಬಯಸುವವರು ಅದು ಎರಡು ಸಾಧ್ಯತೆಗಳಲ್ಲಿ ಒಂದರಲ್ಲಿ ಇರಬಹುದು ಎಂದು ನಿರೀಕ್ಷಿಸುತ್ತಾರೆ: **ಒಂದೋ,** ತಪ್ಪು ಮಾಹಿತಿಗಳು ಮೋದಿಯವರ ವಿಚಾರಪೂರ್ಣ ನಿರ್ಧಾರವನ್ನು ಕುಲಗೆಡಿಸಿರಬಹುದು., **ಇಲ್ಲವೇ,** ಅವರಿಗೆ ಹೇಳಲಾಗದ ಉದ್ದೇಶ(ಅಂದರೆ ಅವರು ಸಾರ್ವಜನಿಕವಾಗಿ ಹೇಳಿರುವ ಉದ್ದೇಶಕ್ಕಿಂತ ಭಿನ್ನವಾದ) ವಿರಬಹುದು.

ಈ ಎರಡರಲ್ಲಿ ಯಾವುದೇ ಪ್ರಸಂಗದಲ್ಲಿಯೂ ಅವರು ಪರಾಕ್ರಮಪೂರ್ಣ 'ಅವೈಚಾರಿಕತೆ'ಯಿಂದ ನಿರ್ಧಾರ 'ಕೈಗೊಂಡಿರಲಿಕ್ಕಿಲ್ಲ, ವಿಚಾರ ಮಾಡಿಯೇ ತೀರ್ಮಾನಿಸಿದ್ದಾರೆ ಎಂದು ಅಂದುಕೊಳ್ಳಲಾಗುತ್ತಿದೆ. ಆದರೆ, ಅಂತಹ ತೀರ್ಮಾನಗಳಿಗೆ ವೈಚಾರಿಕತೆಯನ್ನು ಅಂಟಿಸಬೇಕಾಗಿಲ್ಲ. ಪ್ರಮುಖವಾಗಿ ನಗದು ಬಳಸುವ ದೇಶದ ಅರ್ಥವ್ಯವಸ್ಥೆಯಲ್ಲಿ, ಕೂಲಂಕುಶವಾಗಿ ವಿಚಾರ ಮಾಡಿ ಶೇ.86ರಷ್ಟು ನೋಟುಗಳನ್ನು ಅಮಾನ್ಯಗೊಳಿಸುವ ತೀರ್ಮಾನವನ್ನು ಯಾರೂ ತೆಗೆದುಕೊಳ್ಳುವುದಿಲ್ಲ. ಇವು ಶೌರ್ಯ- ಸಾಹಸಗಳನ್ನು ಮೆರೆಯುವುದಕ್ಕಾಗಿಯೇ ಕೈಗೊಂಡ 'ವಿಚಾರಹೀನ' ನಿರ್ಣಯಗಳೇ ಆಗಿವೆ. ಇದು ಸರ್ವಾಧಿಕಾರಶಾಹಿ ಆಳ್ವಿಕೆಯ, ಅಂದರೆ 'ಜನತೆ'ಯನ್ನು ಬದಿಗೆ ತಳ್ಳಿ 'ನಾಯಕ'ನ ಮೇಲೆಯೇ ಗಮನ ಕೇಂದ್ರೀಕರಿಸುವ ಆಳ್ವಿಕೆಯ ಒಂದು ಅಗತ್ಯ ಲಕ್ಷಣವೇ ಆಗಿದೆ.

ಈ 'ವಿಚಾರಹೀನತೆ'ಯ ಹೆಗ್ಗುರುತೆಂದರೆ, ನೋಟುಗಳ ರದ್ದತಿಯಿಂದಾಗಿ ಜನತೆಗೆ ಎರಗಿರುವ ತೊಂದರೆಗಳ ಹಿನ್ನೆಲೆಯಲ್ಲಿ ಅವುಗಳನ್ನು ಕಡಿಮೆ ಮಾಡುವ ಸಲುವಾಗಿ ಯಾವ ಕ್ರಮವನ್ನೂ ತೆಗೆದುಕೊಳ್ಳದಿರುವುದು ಮತ್ತು ಈ ಬಗ್ಗೆ ಬೇರೆಯವರೊಂದಿಗೆ ಚರ್ಚಿಸುವ ಸೌಜನ್ಯವೂ ಇಲ್ಲದಿರುವುದು. ಯಾವ ತೀರ್ಮಾನವು ಸೂಕ್ತ ಸಲಹೆ ಸೂಚನೆಗಳನ್ನು ಸ್ವೀಕರಿಸುತ್ತದೆಯೋ ಅಂತಹ ತೀರ್ಮಾನವನ್ನು ವೈಚಾರಿಕ ತೀರ್ಮಾನವೆನ್ನಬಹುದು. ಆದರೆ, ಅವೈಚಾರಿಕ ತೀರ್ಮಾನವು ಯಾವುದೇ ಸಲಹೆ ಸೂಚನೆಗಳನ್ನು ಧಿಕ್ಕರಿಸುತ್ತದೆ. ಏಕೆ-ಂದರೆ, ನಾಯಕನ ಶೌರ್ಯ- ಸಾಹಸಗಳನ್ನು ಮೆರೆಯುವುದೇ ಅದರ ಉದ್ದೇಶ. ಜನತೆಗೆ ಉಂಟಾಗಿರುವ ಸಮಸ್ಯೆಗಳನ್ನು ರಾಜಕೀಯ ಪಕ್ಷಗಳ ಜೊತೆ ಚರ್ಚಿಸಲು ಮೋದಿಯವರು ಸಿದ್ಧರಿಲ್ಲದಿರುವುದೇ ಅವೈಚಾರಿಕತೆಯ ರೋಗ ಲಕ್ಷಣ. ಮೋದಿಯವರ ಪ್ರತಿಷ್ಠೆಯೇ ಜನತೆಯ ಸಮಸ್ಯೆಗಳಿಗಿಂತ ಮುಖ್ಯವಾಗಿರುವುದು ಸ್ಪಷ್ಟವಾಗಿ ಕಾಣಿಸುತ್ತಿದೆ. 'ಜನತೆ'ಯ ಬದಲಾಗಿ 'ನಾಯಕ'ನ ಮೇಲೆ ಗಮನ ಕೇಂದ್ರೀಕರಣಗೊಂಡಿದೆ.

ಈ ರೀತಿ ಗಮನದಲ್ಲಾಗಿರುವ ಪಲ್ಲಟದಲ್ಲಿ ತೊಂದರೆಗೊಳಗಾದ 'ಜನರೇ' ತಮಗೆ ಅದ-ರಿಂದ ಕಷ್ಟ ಬಂದಿದ್ದರೂ, 'ನಾಯಕ'ನ ಧೈರ್ಯ-ಮುಂದಾಲೋಚನೆಗಳನ್ನು ಕೊಂಡಾಡುತ್ತಿದ್ದಾರೆ ಎಂದು ದಾವೆ ಹೂಡಲಾಗುತ್ತದೆ. ಉದಾಹರಣೆಗೆ, ಬಿಜೆಪಿ ಸಿದ್ಧಾಂತಿಗಳು ಮಾತ್ರವಲ್ಲ, ಕೆಲವು ಎನ್‌ಆರ್‌ಐ ಜಿಜ್ಞಾಸುಗಳ ವಾದ ಮಂಡನೆ ಹೀಗಿದೆ: ನೋಟು ರದ್ದತಿಯಿಂದ ತೊಂದರೆಗೊಳಗಾದ ಜನರೇ ಅದನ್ನು ಗಂಭೀರವಾಗಿ ಪ್ರತಿಭಟಿಸುತ್ತಿಲ್ಲ. ಅಂದರೆ, ಈ ಕ್ರಮದಿಂದ ಸಮಾಜಕ್ಕೆ ಒಳ್ಳೆಯದಾಗುತ್ತದೆ ಎಂಬುದನ್ನು ಅವರು ಒಪ್ಪಿದ್ದಾರೆ ಎಂದಲ್ಲವೇ?

ಇವು ಹುರುಳಿಲ್ಲದ ವಾದಗಳು. ಯಾವ ರೀತಿಯಲ್ಲಿ ದಬ್ಬಾಳಿಕೆಗಳ ವಿರುದ್ಧ ಪ್ರತಿಭಟನೆಗಳು ಇಲ್ಲದಿರುವುದು ದಬ್ಬಾಳಿಕೆಯನ್ನು ಒಪ್ಪಿಕೊಂಡ ಸೂಚನೆಯಾಗುವುದಿಲ್ಲವೋ, ಅದೇ ರೀತಿಯಲ್ಲಿ, ಅನಾಣ್ಯೀಕರಣದ ವಿರುದ್ಧ ಪ್ರತಿಭಟನೆಗಳು ಇಲ್ಲದಿರುವುದು ಅನಾಣ್ಯೀಕರಣ ಕ್ರಮವನ್ನು ಒಪ್ಪಿಕೊಂಡಂತೆ ಆಗುವುದಿಲ್ಲ. ಅನಾಣ್ಯೀಕರಣದಿಂದ ಜನತೆ ತೊಂದರೆಗಳಿಗೆ ಒಳಗಾಗಿದ್ದಾಗಲೂ ಅದನ್ನು ಅವರು ಏಕೆ ಪ್ರತಿಭಟಿಸುತ್ತಿಲ್ಲ ಎಂಬ ಅಂಶವನ್ನು ಪರಿಶೀಲನೆ ಒಳಪಡಿಸುವುದು ಒಂದು ಪ್ರ ತ್ಯೇಕ ವಿಷಯ. ಆದ್ದರಿಂದ, ಅನಾಣ್ಯೀಕರಣದ ವಿರುದ್ಧ ಪ್ರತಿಭಟನೆಗಳು ನಡೆಯದೇ ಇರುವುದು ಖಂಡಿತವಾಗಿಯೂ ಅನಾಣ್ಯೀಕರಣ ಕ್ರಮದ ಸಮರ್ಥನೆಯಲ್ಲ.

ಅನಾಣ್ಯೀಕರಣದ ವಿರುದ್ಧ ಪ್ರತಿಭಟನೆಗಳು ನಡೆಯದೇ ಇರುವುದರಿಂದ ಈ ಕ್ರಮವು ಪ್ರಯೋಜನಕಾರಿಯಾಗುತ್ತದೆ ಎಂಬ ನಂಬಿಕೆಯನ್ನು ಎಷ್ಟರ ಮಟ್ಟಿಗೆ ಸೂಚಿಸುತ್ತದೆಯೋ ಅಷ್ಟು ಮಟ್ಟಿಗೆ, ಆಳುವ ಗಣ್ಯರ ತಲೆಯಲ್ಲಿ ಹೊಕ್ಕಿರುವ ಅನಾಣ್ಯೀಕರಣದ ಸುತ್ತ ಹರಿದಾಡುತ್ತಿರುವ ಉಲ್ಟಾ ವಿಚಾರಗಳು ಅವರಿಗೇ ಸೀಮಿತಗೊಳ್ಳದೆ, ತೊಂದರೆಗಳಿಗೆ ಒಳಗಾದ ಮಂದಿಯ ತಲೆಯೊಳಗೂ ನುಸುಳುತ್ತವೆ. ಆ ತೊಂದರೆಗಳನ್ನು ತಮ್ಮ ಮೇಲೆ ನಿಷ್ಕಾರಣವಾಗಿ ಹೇರಿಲ್ಲ ಎಂದು ನಂಬಿರುವ ಈ ಜನರು ತಾವು ಅನುಭವಿಸುವ ಕಷ್ಟಗಳಿಂದ ಮುಂದೆ ಒಳ್ಳೆಯದಾಗುತ್ತದೆ ಎಂದು ಬಗೆ-ಯುತ್ತಾರೆ.ಇಂತಹ ಭಾವನೆಯನ್ನು ಒಪ್ಪಿಕೊಂಡಿರುವ ಜನ, ಸಂಕಷ್ಟಗಳನ್ನು ತಮ್ಮ ಮೇಲೆ ಹೇರಿದ ಸರ್ಕಾರದ ಹುಚ್ಚು ಧೈರ್ಯವನ್ನು ಶ್ಲಾಘಿಸುತ್ತಾರೆ. ಅನಾಣ್ಯೀಕರಣದ ಬಲಿ ಪಶುಗಳೂ ಸರ್ಕಾರದ "ಆಘಾತ ಮತ್ತು ಭಯ ಭಕ್ತಿ"ಉಂಟುಮಾಡುವ ಪ್ರಯತ್ನಕ್ಕೆ ಬಲಿಯಾಗಿದ್ದಾರೆ. ಸರ್ಕಾರದ ಪ್ರಯತ್ನ ಅಷ್ಟರಮಟ್ಟಿಗೆ ಯಶಸ್ವಿಯಾಗಿದೆ.

ಈ "ಆಘಾತ ಮತ್ತು ಭಯ ಭಕ್ತಿ"ಉಂಟುಮಾಡುವ ಗುಳ್ಳೆಯನ್ನು ಚುಚ್ಚದ ಹೊರತು ಮತ್ತು ತಾವು ಕಷ್ಟಕೋಟಲೆಗಳನ್ನು ಅನುಭವಿಸುತ್ತಿರುವ ಕಾರಣದಿಂದ ಘನವಾದ ಯಾವ ಉದ್ದೇಶಗಳೂ ಈಡೇರುವುದಿಲ್ಲ ಮತ್ತು ಕಷ್ಟಕೋಟಲೆಗಳನ್ನು ತಮ್ಮ ಮೇಲೆ ನಿಷ್ಕಾರಣವಾಗಿ ಹೇರಲಾಗಿದೆ ಎಂಬ ಅಂಶವನ್ನು ಜನರಿಗೆ ಮನವರಿಕೆ ಮಾಡಿಕೊಡುವವರೆಗೂ, 'ಜನತೆ'ಯ ಬದಲಾಗಿ 'ನಾಯಕ'ನ ಮೇಲೆ ಗಮನ ಹರಿಸುವ ಪ್ರಕ್ರಿಯೆಯು ಪ್ರಜಾಪ್ರಭುತ್ವ ವ್ಯವಸ್ಥೆಯಿಂದ ಸರ್ವಾಧಿಕಾರಶಾಹಿಯತ್ತ ಪರಿವರ್ತನೆಯ ಒಂದು ದ್ವಂದ್ವವನ್ನು ರೂಪಿಸುತ್ತದೆ. ಇದು ಅತ್ಯಂತ ಅಪಾಯಕಾರಿ. ●

ರಾಜ್ಯಗಳ ಸುತ್ತ



ಭಾರತಿ ಗಾಂವ್ಕರ್

ಪಶ್ಚಿಮ ಬಂಗಾಳ: ಧುಲಗೊರಿಯಲ್ಲಿ ಕೋಮುಶಕ್ತಿಗಳಿಗೆ ಸವಾಲು ಹಾಕಿದ ಸಿಪಿಐ(ಎಂ) ರ‍್ಯಾಲಿ



ಹೌರಾ ಜಿಲ್ಲೆಯ ಧುಲಗೊರಿ ಇತ್ತೀಚೆಗೆ ಕೋಮುಕಲಹದಿಂದ ಪೀಡಿತವಾದ ಪ್ರದೇಶ. ಆರ್‌ಎಸ್‌ಎಸ್ ಮತ್ತು ಟಿಎಂಸಿಗಳ ಬೆಂಬಲದಿಂದ ಕೆಲ ದುಷ್ಟರು ಯಲ್ಲಿ ಕೋಮು ಕಲಹವನ್ನು ಸೃಷ್ಟಿಸಿ ಶಾಂತಿ ಭಂಗಗೊಳಿಸಿದ್ದರು. ಇದರ ವಿರುದ್ಧ ಸಿಪಿಐ(ಎಂ) ಡಿಸೆಂಬರ್ 27ರಂದು ಒಂದು ಬೃಹತ್ ಸಭೆಯನ್ನು ಏರ್ಪಡಿಸಿತ್ತು.

ವಾಸ್ತವವಾಗಿ, ಇತ್ತೀಚಿನ ದಿನಗಳ ವರೆಗೆ ಮೌಖಿಕ ಆಡಳಿತಾತ್ಮಕ ಆದೇಶದ ಮೂಲಕ ಸಿಪಿಐ(ಎಂ)ಗೆ ಈ ಪ್ರದೇಶದಲ್ಲಿ ಪ್ರವೇಶ ನಿಷೇಧಿಸಲಾಗಿತ್ತು. ಟಿಎಂಸಿ ನೇತೃತ್ವದ ಆಡಳಿತ ಹಾಗೂ ಆರ್‌ಎಸ್‌ಎಸ್‌ನ ಕೋಮು ಪ್ರಚೋದನೆಯಿಂದಾಗಿ ಉಂಟಾಗಿರುವ ಕಲಹದಿಂದಾಗಿ ಈ ಪ್ರದೇಶ ಕುದಿಯುತ್ತಿದ್ದುದರಿಂದ ಈ ನಿಷೇಧವನ್ನು ಬದಿಗೊತ್ತಿ ಸಿಪಿಐ(ಎಂ) ಮತ್ತು ಇತರ ಎಡ ಪಕ್ಷಗಳು ಹಾಗೂ ಇನ್ನೂ ಹಲವಾರು ಪ್ರಗತಿಪರ ಸಂಘಟನೆಗಳು ಕೋಮು ಕಲಹ ಬಾಧಿತ ಪ್ರದೇಶದಲ್ಲಿ ಸಭೆ ನಡೆಸಿದವು. ಸಾವಿರಾರು ಸಂಖ್ಯೆಯಲ್ಲಿ ಸೇರಿದ್ದ ಸಭಿಕರನ್ನುದ್ದೇಶಿಸಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ, ಸಂಸತ್ ಸದಸ್ಯರೂ ಆದ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯ ಮಹಮ್ಮದ್ ಸಲೀಂ, ಎಡರಂಗದ ಶಾಸಕಾಂಗ ಪಕ್ಷದ ಮುಖ್ಯಸ್ಥರಾದ ಡಾ.ಸುಜಾನ್ ಚಕ್ರವರ್ತಿ ಮತ್ತು ಸಿಪಿಐ(ಎಂ) ಮುಖಂಡರಾದ ರೂಪ ಬಾಗ್ಚಿ ಮಾತನಾಡಿದರು.

ನಂತರ ಒಂದು ರ‍್ಯಾಲಿ ನಡೆಸಿ ಒಂದು ಕಿ.ಮೀ. ಮೆರವಣಿಗೆಯಲ್ಲಿ ಹೋಗಿ ಬಾಧಿತ ಹಳ್ಳಿಯನ್ನು ಪ್ರವೇಶಿಸಲು ಮುಂದಾದಾಗ ಪೋಲೀಸರು ಹಳ್ಳಿಯಲ್ಲಿ ಈಗಾಗಲೇ ಬಿಗುವಿನ ವಾತಾವರಣವಿದ್ದು ಇನ್ನೊಂದಿಷ್ಟು ಸಮಸ್ಯೆಯಾಗದಿರಲೆಂಬ ಮುನ್ನೆಚ್ಚರಿಕೆಯಿಂದ ಅಲ್ಲಿ ಹೋಗಬಾರದೆಂದು ನಿವೇದಿಸಿದರು. ಅದ-ಕ್ಕೆ ಸ್ಪಂದಿಸಿದ ರ‍್ಯಾಲಿಯ ಮುಖಂಡರು ಮುಂದಿನ 58 ದಿನದಲ್ಲಿ ಪರಿಸ್ಥಿತಿಯನ್ನು ಸಾಮಾನ್ಯಗೊಳಿಸಲು ಕ್ರಮ ಕೈಗೊಳ್ಳದಿದ್ದರೆ ಇನ್ನೂ ದೊಡ್ಡ ಪ್ರಮಾಣದ ಹೋರಾಟ ರೂಪಿಸುವದಾಗಿ ಘೋಷಿಸಿದರು.

ಆಳುವ ಪಕ್ಷಗಳು ಬಡಜನರ ಜೀವನಕ್ಕೆ ಕುತ್ತು ತರುವಂತಹ ಕೋಮು ಕಲಹದಂತಹ ಹುನ್ನಾರವನ್ನು ಮಾಡುತ್ತಲೇ ಇದ್ದರೂ, ಸಿಪಿಐ(ಎಂ) ಯಾವಾಗಲೂ ಜನ ಸಮುದಾಯದ ನಡುವೆ ಶಾಂತಿ ಮತ್ತು ಸೌಹಾರ್ದತೆಯನ್ನು ಗಟ್ಟಿಗೊಳಿಸುವ ಕಾರ್ಯವನ್ನು ಮಾಡುತ್ತದೆ ಎಂದು ಸೀತಾರಾಮ್ ಯೆಚುರಿ ಬಹಿರಂಗಸಭೆಯ ತಮ್ಮ ಭಾಷಣದಲ್ಲಿ ನುಡಿದರು. ಕೋಮು ಭಾವನೆಗಳನ್ನು ಕೆರಳಿಸಿ ಕಲಹ ಉಂಟುಮಾಡುವ ಇಂತಹ ಶಕ್ತಿಗಳ ಹುನ್ನಾರಗಳನ್ನು ಸಮಾಜದ ಒಳಿತಿಗಾಗಿ ಬಹಿರಂಗಗೊಳಿಸಬೇಕು ಮತ್ತು ಎಲ್ಲಾ ಪ್ರಗತಿಪರ ಶಕ್ತಿಗಳು ಇವುಗಳನ್ನು ಎಳ್ಳಷ್ಟೂ ಸಹಿಸಿಕೊಳ್ಳಬಾರದು ಎಂದು ಅವರು ಹೇಳಿದರು.

ತಮ್ಮ ರಾಜಕೀಯ ಲಾಭಕ್ಕಾಗಿ ಇಂತಹ ಕಲಹಗಳನ್ನು ಪ್ರಚೋದಿಸುವ ಮೋದಿಭಾಯಿ ಮತ್ತು ದೀದೀಬಾಯಿ ಕೂಟದ ಹುನ್ನಾರಗಳನ್ನು ಮುರಿಯಲು ಸರ್ವಪ್ರಯತ್ನ ನಡೆಸಿ ಪಶ್ಚಿಮ ಬಂಗಾಲದ ಜಾತ್ಯತೀತ ಹಂದರವನ್ನು ರಕ್ಷಿಸಬೇಕು ಎಂದು ಮಹಮದ್ ಸಲೀಂ ಕರೆ ನೀಡಿದರು.

ಜಮ್ಮು-ಕಾಶ್ಮೀರ: ಸಿಪಿಐ(ಎಂ) ಶಾಸಕರಿಂದ 3 ನಿರ್ಣಯಗಳು ಮತ್ತು ಸಾರ್ವಜನಿಕ ಸುರಕ್ಷಿತತೆ ಕಾಯ್ದೆಗೆ ತಿದ್ದುಪಡಿ ಮಸೂದೆ



ಸಿಪಿಐ(ಎಂ)ನ ಹಿರಿಯ ಮುಖಂಡರೂ ಮತ್ತು ಶಾಸಕರೂ ಆಗಿರುವ ಮೊಹಮ್ಮದ್ ಯೂಸೂಫ್ ತಾರಿಗಮಿ ಅವರು ಜಮ್ಮು-ಕಾಶ್ಮೀರದ ವಿಧಾನ ಸಭೆಯಲ್ಲಿ ಮೂರು ಮುಖ್ಯ ನಿರ್ಣಯಗಳನ್ನು ಮಂಡಿಸಿದ್ದಾರೆ. ಅವುಗಳೆಂದರೆ, ಕಾಶ್ಮೀರ ಕಣಿವೆಯಲ್ಲಿ ನಡೆಯುತ್ತಿರುವ ಕೊಲೆಗಳ ತನಿಖೆ ನಡೆಸಲು ನಿವೃತ್ತ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ನೇತೃತ್ವದಲ್ಲಿ ತನಿಖಾ ಸಮಿತಿಯ ರಚನೆ, ಕಾಶ್ಮೀರ ಸಮಸ್ಯೆಯನ್ನು ಬಗೆಹರಿಸಲು ಎಲ್ಲ ಮುಖ್ಯ ಭಾಗೀದಾರರನ್ನು ಕರೆದು ಒಂದು ರಚನಾತ್ಮಕ ಮಾತುಕತೆಯನ್ನು ಭಾರತ ಸರಕಾರ ಪ್ರಾರಂಭಿಸಬೇಕೆಂಬ ಒತ್ತಾಯ, ಕಾನೂನು ಮತ್ತು ಸುವ್ಯವಸ್ಥೆಯ ಪರಿಸ್ಥಿತಿಯನ್ನು ಸುಧಾರಿಸುವ ಸಲುವಾಗಿ ಭದ್ರತಾ ಸಿಬ್ಬಂದಿ ಉಪಯೋಗಿಸುತ್ತಿರುವ ಪೆಲೆಟ್ ಗುಂಡುಗಳ ನಿಷೇಧ.

ಈ ಮೂರು ನಿರ್ಣಯಗಳಲ್ಲದೆ, ಜಮ್ಮು ಕಾಶ್ಮೀರ ಸಾರ್ವಜನಿಕ ಭದ್ರತಾ ಕಾಯ್ದೆಗೆ ತಿದ್ದುಪಡಿಗಳನ್ನು ಸೂಚಿಸಿ ಖಾಸಗಿ ಸದಸ್ಯರ ಮಸೂದೆಯನ್ನೂ ಅವರು ಮಂಡಿಸಿದರು. ಇದು ಈ ಕಾಯ್ದೆಯ 8,9,10,13,14,16,17,18, ಮತ್ತು 20ನೇ ಪರಿಚ್ಛೇದಗಳಿಗೆ ತಿದ್ದುಪಡಿ ತರಬೇಕೆಂದು ಸೂಚಿಸಿದೆ. ಅಲ್ಲದೆ 11ನೇ ಪರಿಚ್ಛೇದವನ್ನು ತೆಗೆದು ಹಾಕಬೇಕು ಹಾಗೂ ಹೈಕೋರ್ಟ್ ಯಾವುದೇ ವ್ಯಕ್ತಿಯ ಬಂಧನವನ್ನು ರದ್ದು ಮಾಡಿದರೆ ಅಥವ ಹಿಂತೆಗೆದುಕೊಳ್ಳಬೇಕು ಎಂದು ಆದೇಶಿಸಿದರೆ ಆ ವ್ಯಕ್ತಿಯನ್ನು ಕೂಡಲೇ ಬಿಡುಗಡೆ ಮಾಡಿ ಕುಟುಂಬದ ಸದಸ್ಯರಿಗೆ ಒಪ್ಪಿಸಬೇಕು ಮತ್ತು ಹಾಗೆ ಒಪ್ಪಿಸಿದ ಬಗ್ಗೆ ಕುಟುಂಬದ ಸದಸ್ಯರಿಂದ ಪ್ರಮಾಣ ಪತ್ರ ಪಡೆಯಬೇಕು ಎಂದು ವಿಧಿಸುವ ಕಲಮು 19ಎ ಸೇರಿಸಬೇಕು ಎಂದೂ ಈ ಮಸೂದೆಯಲ್ಲಿ ಸೇರಿಸಿದ್ದಾರೆ.

1978ರಿಂದ ಈ ಸಾರ್ವಜನಿಕ ಭದ್ರತಾ ಕಾಯ್ದೆ ಜಮ್ಮು-ಕಾಶ್ಮೀರದಲ್ಲಿ ಚಾಲ್ತಿಯಲ್ಲಿದೆಯಾದರೂ ಅದರ ಅನ್ವಯವನ್ನು ಈ ವರೆಗೂ ಪರಾಮರ್ಶಿಸಿಲ್ಲ. ಈ ಕಾಯ್ದೆಯನ್ನು ಅಸ್ಪಷ್ಟ ಮತ್ತು ಸುಳ್ಳು ಆಧಾರಗಳ ಅಡಿಯಲ್ಲಿ ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ, ಇದು ಪ್ರತಿಬಂಧಕ ಕಾಯ್ದೆ ಆಗಿದ್ದರೂ ಸಹ ಬಂಧಿತ ವ್ಯಕ್ತಿಯನ್ನು ಶಿಕ್ಷಿಸುವಂತೆ ಅದನ್ನು ಬಳಸಲಾಗುತ್ತಿದೆ. ಒಬ್ಬ ವ್ಯಕ್ತಿಯ ಜೀವನ ಮತ್ತು ಸ್ವಾತಂತ್ರ್ಯವನ್ನು ಪ್ರತಿಬಂಧಿಸುವಾಗ ಅದನ್ನು ಅತ್ಯಂತ ಕಾಳಜಿ ಮತ್ತು ಎಚ್ಚರಿಕೆಯಿಂದ ಮಾಡಬೇಕಾಗುತ್ತದೆ. ಈ ಕಾಯ್ದೆಯನ್ನು ಅಪರೂಪವಾಗಿ ಬಳಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಈ ಕಾಯ್ದೆಗೆ ಕೆಲವು ತಿದ್ದುಪಡಿಗಳನ್ನು ತರುವುದು ಅನಿವಾರ್ಯವಾಗಿದೆ ಎಂದು ತರಿಗಾಮಿಯವರು ಹೇಳಿದ್ದಾರೆ.

2016ರಲ್ಲಿ ತ್ರಿಪುರಾ ತೋರಿಸಿದ ಎಡಪರ್ಯಾಯ:

ಶಾಂತಿಯ ದ್ವೀಪ,ಸಾಕ್ಷರತೆಯಲ್ಲಿ ಮತ್ತು ಗ್ರಾಮೀಣ ಉದ್ಯೋಗ ಒದಗಿಸುವುದರಲ್ಲಿ ಪ್ರಥಮ ಸ್ಥಾನ

ಈಗ ಮುಕ್ತಾಯಗೊಳ್ಳುತ್ತಿರುವ 2016 ತ್ರಿಪುರಾ ರಾಜ್ಯಕ್ಕೆ ಎರಡೆರಡು ಸಂತೋಷದ ಸಂಗತಿಗಳ ವರ್ಷ.

ಮೊದಲನೆಯದಾಗಿ ಹಿಂಸಾಚಾರ ಪೀಡಿತ ಈಶಾನ್ಯ ಭಾರತದಲ್ಲಿ ತ್ರಿಪುರ ಶಾಂತಿಯ ದ್ವೀಪವಾಗಿ ಮೂಡಿಬಂದಿದೆ. 2016ರಲ್ಲಿ ಅಲ್ಲಿ ಒಮದೇ ಒಮದು ಉಗ್ರಗಾಮಿ ಚಟುವಟಿಕೆ ವರದಿಯಾಗಿಲ್ಲ.

ಎರಡನೆಯದಾಗಿ, ಅದು 94% ಸಾಕ್ಷರತೆ ಸಾಧಿಸಿರುವ ಕೇರಳವನ್ನು ಕೂಡ ಹಿಮ್ಮೆಟ್ಟಿಸಿ, ಸುಮಾರು 97% ಸಾಕ್ಷರತೆ ಸಾಧಿಸಿ ಇಡೀ ದೇಶದಲ್ಲಿಯೇ ಪ್ರಥಮ ಸ್ಥಾನ ಪಡೆದುಕೊಂಡಿದೆ.

1960ರ ದಶಕದ ಮಧ್ಯದಿಂದ ತ್ರಿಪುರಾ ರಾಜ್ಯ ದಶಕಗಳವರೆಗೆ ಭಯೋತ್ಪಾದಕರ ಹಾವಳಿಗೆ ತುತ್ತಾಗಿತ್ತು. ಎಡರಂಗ ಸರಕಾರ ನಿರಂತರವಾಗಿ ಭಯೋತ್ಪಾದನೆ ವಿರುದ್ಧ ಕ್ರಮಗಳನ್ನು ತೆಗೆದುಕೊಳ್ಳುವ ಜತೆಗೇ, ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಂಡುದರಿಂದಾಗಿ ಕ್ರಮೇಣ ಭಯೋತ್ಪಾದನೆಯನನು ಹಿಮ್ಮಟ್ಟಿಸಲು ಸಾಧ್ಯವಾಗಿದೆ ಎಂದು ಮುಖ್ಯಮಂತ್ರಿ ಮಾಣಿಕ್ ಸರಕಾರ್ ಹೇಳಿದ್ದಾರೆ.

"ನಮ್ಮ ಸಮಗ್ರ ನಿಲುವಿನಿಂದಾಗಿ ಮತು ಬಹುಮುಖೀ ಕಾರ್ಯತಂತ್ರದಿಂದಾಗಿ ತ್ರಿಪುರಾದಲ್ಲಿ ದಶಕಗಳ ಭಯೋತ್ಪಾದನೆಯನ್ನು ನಿಯಂತ್ರಣಕ್ಕೆ ತರಲುಸ ಅಧ್ಯವಾಗಿದೆ" ಎಂದು 1998ರಿಂದ ಮುಖ್ಯಮಂತ್ರಿಗಳಾಗಿರುವ ಮಾಣಿಕ್ ಸರಕಾರ್ ಹೇಳಿದ್ದಾರೆ. ಸಶಸ್ತ್ರ ಪಡೆಗಳ ವಿಶೇಷ ಅಧಿಕಾರಗಳ ಕಾಯ್ದೆಯನ್ನು ಹಿಂತೆಗೆದುಕೊಂಡರೂ ಸಂತೃಪ್ತಿಯಿಂದ ಕುಳಿತಿಲ್ಲ, ಅವು ಪುನಃ ಯಾವಾಗ ಬೇಕಾದರೂ ತಲೆ ಎತ್ತಬಹುದೆಂದು ಸದಾ ಜಾಗರೂಕರಾಗಿದ್ದೇವೆ ಎಂದು ಅವರು ಹೇಳುತ್ತಾರೆ. ಅಭಿವೃದ್ಧಿ ಚಟುವಟಿಕೆಗಳಲ್ಲದೆ, ರಾಜ್ಯದಲ್ಲಿರುವ ವಿಭಿನ್ನ ಸಮುದಾಯಗಳಲ್ಲಿ ಭದ್ರತೆಯ ಭಾವವನ್ನು ಕಟ್ಟಿ ಬೆಳೆಸುವ ಮೂಲಕ ಆಡಳಿತ ವ್ಯವಸ್ಥೆಯಲ್ಲಿ ಬುಡಕಟ್ಟು ಜನಗಳು ವಿಶ್ವಾಸ ಹೊಮದುವಂತೆ ಮಾಡಲಾಗಿರುವುದೂ ಇದಕ್ಕೆ ಕಾರಣ ಎಂದು ರಾಜ್ಯದ ನಿವೃತ್ತ ಪೋಲೀಸ್ ಮುಖ್ಯಸ್ಥ ಸಲಿಂ ಅಲಿ ಕೂಡ ಹೇಳುತ್ತಾರೆ.

ಶಾಂತಿಯನ್ನು ಕಾಪಾಡಿಕೊಳ್ಳುವಲ್ಲಿ ಮಾತ್ರವಲ್ಲ, ಪ್ರಜಾಪ್ರಭುತ್ವ ಮತ್ತು ಸಾಮಾಜಿಕ ನ್ಯಾಯವನ್ನು ಖಾತ್ರಿಪಡಿಸಲು, ಬಡತನವನ್ನು ಹಿಮ್ಮೆಟ್ಟಿಸುವಲ್ಲಿ ಶಿಕ್ಷಣ ಪ್ರಮುಖ ಪಾತ್ರ ವಹಿಸುತ್ತದ ಎಂಬುದನ್ನು ಅರಿತು 2011ರಲ್ಲಿ ಎಡರಂಗ ಸರಕಾರ ಮೂರು ಹಂತಗಳ ರಾಜ್ಯವ್ಯಾಪಿ ಸಾಕ್ಷರತಾ ಆಂದೋಲನವನ್ನು ಆರಂಭಿಸಿತು. ಆಗ ಸಾಕ್ಷರತೆ 87.75 ಇತ್ತು. ಈ ವರ್ಷ ಸಾಕ್ಷರತಾ ಪ್ರಮಾಣ 96.82 ಪ್ರತಿಶತಕ್ಕೆ ಏರಿದೆ ಎಂದು ಮಾಣಿಕ್ ಸರಕಾರ್ ಘೋಷಿಸಿದ್ದು, ಈ ಯಶಸ್ಸನ್ನು ಅಧ್ಯಯನ ಮಾಡಲು ಬೇರೆ ರಾಜ್ಯಗಳಿಂದ ಅನೇಕ ಅಧಿಕಾರಿಗಳು ಇಲ್ಲಿಗೆ ಬರುತ್ತಿದ್ದಾರೆ.

ಈ ವರ್ಷದ ತ್ರಿಪುರಾದ ಮತ್ತೊಮದು ಸಾಧನೆಯೆಂದರೆ ರಾಷ್ಟ್ರದ ರಾಜಧಾನಿಯೊಂದಿಗೆ ರಾಜ್ಯದ ರೈಲು ಸಂಪರ್ಕಕ್ಕಾಗಿ 67 ವರ್ಷಗಳಿಮದ ನಡೆಯುತ್ತಿದ್ದ ಚಳುವಳಿ ಇವರ್ಷ ಶಾಂತಿಯುತವಾಗಿ ಕೊನೆಗೊಂಡಿದೆ, ಹೊಸದಾಗಿ ನಿರ್ಮಿಸಿರುವ ಬ್ರಾಡ್ ಗೇಜ್‌ನಲ್ಲಿ ಜುಲೈ 31ರಂದು ಅಗರ್ತಲಾ-ದೆಹಲಿ ಪ್ರಯಾಣಿಕರ ರೈಲು ಸಂಚಾರ ಆರಂಭವಾಗಿದೆ.

ತ್ರಿಪುರಾ ರಾಜ್ಯ ಮಹಾತ್ಮಾ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಸತತ 7 ನೇ ವರ್ಷವೂ ಉದ್ಯೋಗ ಒದಗಿಸುವುದರಲ್ಲಿ ಮೊದಲನೇಯ ಸ್ಥಾನದಲ್ಲಿ ಮುಂದುವರೆದಿದೆ ಎಂಬುದು ಎಡರಂಗ ಆಳ್ವಿಕೆಯ ಈ ರಾಜ್ಯದ ಮತ್ತೊಂದು ಮಹತ್ಸಾಧನೆ.

ಈ ಮೂಲಕ ಎಡ ಪರ್ಯಾಯುವೇ ನಿಜವಾದ ಪರ್ಯಾಯ ಎಂಬುದನ್ನು ತ್ರಿಪುರಾ ತೋರಿಸಿಕೊಟ್ಟಿದೆ.

ಝಾರ್ಖಂಡ್ ರಾಜ್ಯಪಾಲರ ಬಳಿಗೆ ಎಡಪಕ್ಷಗಳ ನಿಯೋಗ

ಎಡಪಕ್ಷಗಳ ನಿಯೋಗವೊಂದು ಝಾರ್ಖಂಡ ರಾಜ್ಯಪಾಲರನ್ನು ಭೇಟಿಯಾಗಿ ರಾಜ್ಯದಲ್ಲಿ ಉಂಟಾಗಿರುವ ಕಾನೂನು ಸುವ್ಯವಸ್ಥೆಯ ದೋಷವನ್ನು ಸರಿಪಡಿಸಲು ಮನವಿ ಮಾಡಿಕೊಂಡಿದೆ.

ಜಾರ್ಖಂಡ ರಾಜ್ಯದ ರಾಜಧಾನಿ ರಾಂಚಿಯ ಬಿ.ಟೆಕ್ 2ನೇ ವರ್ಷದಲ್ಲಿ ಓದುತ್ತಿದ್ದ ಆದಿವಾಸೀ ಕಾಲೇಜು ವಿದ್ಯಾರ್ಥಿನಿ ಜಯಾ ಭಾರತಿಯನ್ನು ಡಿಸೆಂಬರ್ 16ರಂದು ಆಕೆಯ ಬಾಡಿಗೆ ಮನೆಯಲ್ಲಿ ಭೀಕರವಾಗಿ ಅತ್ಯಾಚಾರ ಮಾಡಿ ಕೊಲೆಮಾಡಲಾಗಿದೆ. ಅದೇ ರೀತಿ 28 ನವೆಂಬರ್‌ರಂದು ಮನಿಷಾ ಎಂಬ ವಿದ್ಯಾರ್ಥಿನಿಯನ್ನು, ಗುಮ್ಲಾದ ಬಿಷ್ಣುಪುರದಿಂದ ಅಪಹರಿಸಿ ಅತ್ಯಾಚಾರಮಾಡಿ ಕೊಲೆಮಾಡಲಾಗಿದೆ. ಹೂಳಲ್ಪಟ್ಟಿದ್ದ ಆಕೆಯ ಶವ ಡಿಸೆಂಬರ್ 16 ರಂದು ದೊರೆತಿದೆ. ಈ ಎರಡೂ ಪ್ರಕರಣಗಳು ಈ ರಾಜ್ಯದಲ್ಲಿ ಬಿಜೆಪಿ ಆಳ್ವಿಕೆಯಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಡುತ್ತಿರುವುದನ್ನು ತೋರಿಸುತ್ತದೆ ಎಂದು ಖಂಡಿಸಿದ ನಿಯೋಗ ಈ ಎಲ್ಲ ಘಟನೆಗಳ ಬಗ್ಗೆ ಸೂಕ್ತ ತನಿಖೆ ಆಗಬೇಕು ಮತ್ತು ಈ ರೀತಿಯ ಘೋರ ಅಪರಾಧಗಳ ವಿಚಾರಣೆಗೆ ತ್ವರಿತಗತಿಯ ನ್ಯಾಯಾಲಯಗಳ ಸ್ಥಾಪನೆ ಆಗಬೇಕು, ಸಂತ್ರಸ್ತರ ಕುಟುಂಬಕ್ಕೆ ಸೂಕ್ತ ಪರಿಹಾರ ಒದಗಿಸಬೇಕು, ಈ ರೀತಿ ಕಾನೂನು ಮತ್ತು ಸುವ್ಯವಸ್ಥೆ ಕುಸಿಯಲು ಕಾರಣವಾದ ಪೋಲೀಸ್ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಜರುಗಿಸಬೇಕೆಂದು ಆಗ್ರಹಿಸಿದೆ.



ಅಂಗವಿಕಲರಿಗೆ ಮಾನವ ಹಕ್ಕುಗಳನ್ನು ಖಾತರಿಗೊಳಿಸುವಲ್ಲಿ ಮತ್ತೊಂದು ಹೆಜ್ಜೆ

ಜಿ.ಎನ್.ನಾಗರಾಜ್

ಉನ್ಮತ್ತೋಂಧ ವರ್ಜ್ಯ, (ಮಾನಸಿಕ ರೋಗಿಗಳನ್ನು, ದೃಷ್ಟಿದೋಷವುಳ್ಳವರನ್ನು ದೂರವಿಡಿ)

ಅನಂಶೌ ಜಾತ್ಯಂಧ ಬಧಿರೌ ತಥಾ ಉನ್ಮತ್ತ ಜಡ ಮೂಕಾಶ್ಚ ಯೇಕೆಚಿನ್ನಿರಿಂದ್ರಿಯಾ(ದೃಷ್ಟಿದೋಷವಳ್ಳವರು, ಶ್ರವಣದೋಷವುಳ್ಳವರು, ಮಾನಸಿಕ ರೋಗಿಗಳು, ಬುದ್ಧಿಮಾಂದ್ಯರು, ಮಾತು ಬಾರದವರು, ಊನಾಂಗರು ಇವರಿಗೆ ಅಸ್ತಿಯಲ್ಲಿ ಪಾಲಿಲ್ಲ.)

ಅಂಗವಿಕಲರ ಬಗ್ಗೆ ಮನುಸ್ಮೃತಿಯ ಈ ಮನಸ್ಥಿತಿಯಿಂದ ಹೊರಬರಲು ನಮ್ಮ ಸಮಾಜ ಇನ್ನೂ ಬಹಳ ಶ್ರಮ ಪಡುತ್ತಿದೆ. ಅವರಿಗೆ ಪ್ರಜಾಪ್ರಭುತ್ವದ ಮಾನವ ಹಕ್ಕುಗಳಿನ್ನೂ ದಕ್ಕಬೇಕಾಗಿದೆ. ಈ ದಿಸೆಯಲ್ಲಿ ಮತ್ತೊಂದು ಹೆಜ್ಜೆ ಇತ್ತೀಚೆಗೆ ಸಂಸತ್ತು ಅಂಗೀಕರಿಸಿದ ಹೊಸ ಕಾಯಿದೆ. ಹತ್ತು ವರ್ಷಗಳ ಸುದೀರ್ಘ ಹೋರಾಟದ ನಂತರ ಅಂಗೀಕಾರವಾದ ಈ ಕಾಯಿದೆ ಆ ಕಾರಣಕ್ಕಾಗಿಯೇ ಸಂತಸ ತಂದಿದೆ. ಹಾಗೆಯೇ ಅಂಗವಿಕಲರ ಆಶಯಗಳನ್ನು ಮತ್ತು ವಿಶ್ವಸಂಸ್ಥೆಯ ನಿರ್ದೇಶನಗಳನ್ನು ಪೂರೈಸಿಲ್ಲವೆಂಬ ಟೀಕೆಗಳಿಗೂ ಒಳಗಾಗಿದೆ.

ಈ ಕಾಯಿದೆಯಲ್ಲಿ 1995ರ ಕಾಯಿದೆಯ ಕೇವಲ ಏಳು ರೀತಿಯ ಅಂಗವಿಕಲತೆಗಳನ್ನು ವಿಸ್ತರಿಸಿ 21 ಬಗೆಗಳನ್ನು ಗುರುತಿಸಲಾಗಿದೆ. ಹೊಸ ಅಂಗವಿಕಲತೆಗಳಲ್ಲಿ ಆಸಿಡ್ ಧಾಳಿಗೊಳಗಾದವರು, ಆಟಿಸಂ, ತಾರೆ ಜಮೀನ್ ಪರ್ ಸಿನೆಮಾದ ಬಾಲಕ ನಾಯಕನಂತೆ ಕಲಿಕೆಯ ಸಮಸ್ಯೆಗಳಿಗೊಳಗಾದವರು, ಕುಬ್ಜರು, ಸೆರೆಬ್ರಲ್ ಪಾಲ್ಸಿ, ಪಾರ್ಕಿನ್ಸನ್, ಹೀಮೋಫೀಲಿಯಾ, ತಲಸ್ಸೇಮಿಯಾ, ಸಿಲ್ ಸೆಲ್ ಅನೀಮಿಯಾ, ಮಲ್ಟಿಪಲ್ ಸ್ಕ್ಲೀರೋಸಿಸ್ ರೋಗಗಳ ಬಾಧಿತರು, ಬಹು ವಿಧ ಅಂಗವಿಕಲತೆಯುಳ್ಳವರು, ದೃಷ್ಟಿದೋಷವುಳ್ಳವರಲ್ಲಿ ಮತ್ತು ಶ್ರವಣ ದೋಷವುಳ್ಳವರಲ್ಲಿ ಒಂದಕ್ಕಿಂತ ಹೆಚ್ಚು ವಿಧಗಳು ಇವುಗಳ ಜೊತೆಗೆ ದೈಹಿಕ ಅಂಗವಿಕಲತೆಯುಳ್ಳವರು, ಕುಷ್ಟರೋಗದಿಂದ ಅಂಗವಿಕಲತೆಗೊಳಗಾದವರು, ಮಾನಸಿಕ ರೋಗಿಗಳು ಸೇರಿದ್ದಾರೆ.

ಅಂಗವಿಕಲತೆಯ ಬಗ್ಗೆ ಅರಿವುಳ್ಳ ಹಾಗೂ ಸಂವೇದನೆಯುಳ್ಳ ಪರಿಸರವನ್ನು ನಿರ್ಮಾಣ ಮಾಡುವುದು ಈ ಕಾಯಿದೆಯ ಮುಖ್ಯ ಅಂಶಗಳಲ್ಲೊಂದು. ವೈದ್ಯಕೀಯ, ನರ್ಸಿಂಗ್, ಇಂಜನಿಯರಿಂಗ್, ಆರ್ಕಿಟೆಕ್ಚರ್‌ನ ಪಠ್ಯಗಳಲ್ಲಿ ಅಂಗವಿಕಲತೆಯ ವಿಷಯಗಳು; ವಿ.ವಿ.ಗಳಲ್ಲಿ ಅಂಗವಿಕಲತೆಯ ಅಧ್ಯಯನ ಕೇಂದ್ರಗಳು ; ಶಾಸಕರು, ಪಂಚಾಯತ್ ಸದಸ್ಯರುಗಳು, ಆಡಳಿತಗಾರರು, ಪೋಲೀಸರು, ನ್ಯಾಯಾಧೀಶರು ಮೊದಲಾದವರಿಗೆ ತರಬೇತಿ ಅದರ ಅಂಗಗಳು.

ಶಿಕ್ಷಣಕ್ಕೆ ಸಂಬಂಧಿಸಿ ಹೆಚ್ಚು ಗಮನ ನೀಡುವ ಪ್ರಸ್ತಾವಗಳು ಕಾಯಿದೆಯಲ್ಲಿವೆ. ಒಂದು, ಪ್ರತಿ ಅಂಗವಿಕಲ ವಿದ್ಯಾರ್ಥಿಯ ಪ್ರಗತಿ, ಶಿಕ್ಷಣವನ್ನು ಪೂರ್ಣಗೊಳಿಸುವವರೆಗೆ ಉಸ್ತುವಾರಿ; ಹಿಂದಿನ ಕಾಯಿದೆಯಂತೆ ಕೇವಲ ಸರ್ಕಾರೀ ಶಿಕ್ಷಣ ಸಂಸ್ಥೆಗಳು ಮಾತ್ರವಲ್ಲದೆ ಮಾನ್ಯತೆ ಪಡೆದ ಎಲ್ಲಾ ಶಿಕ್ಷಣ ಸಂಸ್ಥೆಗಳೂ ಅಂಗವಿಕಲರಿಗೆ ಪ್ರವೇಶ ನೀಡಬೇಕು. ಸರ್ಕಾರದ ಸಂಸ್ಥೆಗಳಲ್ಲಿ ಇದ್ದ ಮೀಸಲಾತಿಯನ್ನು ಶೇ. 3 ರಿಂದ 5 ಕ್ಕೆ ಹೆಚ್ಚಿಸಲಾಗಿದೆ.

ಅಂಗವಿಕಲರ ಆರೋಗ್ಯ ರಕ್ಷಣೆಗೆ ಕೂಡ ಹಿಂದಿಗಿಂತ ಹೆಚ್ಚು ಗಮನ ನೀಡಲಾಗಿದೆ. ಮುಂದೆ ಸೂಚಿಸಲಾಗುವ ಅದಾಯದ ಮಿತಿಗೊಳಪಟ್ಟು ವೈದ್ಯಕೀಯ ಪರೀಕ್ಷೆಗಳು, ಸರ್ಜರಿ ಮೊದಲಾದ ಸೌಲಭ್ಯಗಳು ಉಚಿತ. ಎಲ್ಲ ಮಕ್ಕಳನ್ನು ಪ್ರತಿ ವರ್ಷವೂ ವೈದ್ಯಕೀಯ ಪರೀಕ್ಷೆಗೊಳಪಡಿಸಿ ಅಂಗವಿಕಲತೆಯನ್ನು ಆರಂಭದಲ್ಲಿಯೇ ಗುರುತಿಸುವುದು ಮತ್ತು ತಡೆಗಟ್ಟುವುದು, ಅದಕ್ಕಾಗಿ ಪ್ರಾಥಮಿಕ ಆಸ್ಪತ್ರೆಗಳ ಸಿಬ್ಬಂದಿಗೆ ತರಬೇತಿ

ಅಂಗವಿಕಲ ಮಹಿಳೆಯರ ಬಗ್ಗೆ ಪ್ರತ್ಯೇಕ ಗಮನ ನೀಡಲಾಗಿದೆ. ಅವರ ಮೇಲೆ ಎಸಗುವ ದೌರ್ಜನ್ಯಗಳ ಬಗ್ಗೆ ಕಠಿಣ ಶಿಕ್ಷೆ ವಿಧಿಸುವ ಬಗ್ಗೆ, ವಿವಿಧ ಸೌಲಭ್ಯಗಳಲ್ಲಿ ಮಹಿಳೆಯರಿಗೆ ಪಾಲು ದಕ್ಕುವಂತಹ ಕ್ರಮಗಳಿಗೆ ಒತ್ತು ನೀಡಲಾಗಿದೆ. ಹೆಚ್ಚು ಸಹಾಯ ಅಗತ್ಯವುಳ್ಳ ತೀವ್ರ ಅಂಗವಿಕಲರಿಗೆ ಅವರ ಕೋರಿಕೆಯ ಮೇಲೆ ವಿಶೇಷ ಸಹಾಯ ನೀಡಿಕೆಗೆ ಯೋಜನೆಗಳು, ಅವರ ಪಾಲಕರಿಗೆ ಭತ್ಯೆಗಳನ್ನು ನೀಡುವ ಬಗ್ಗೆ ಸೂಚನೆಯಿದೆ. ಅಂಗವಿಕಲರು ಸ್ವತಃ ನ್ಯಾಯಾಲಯಗಳಲ್ಲಿ ನ್ಯಾಯ ಪಡೆಯುವ ಹಕ್ಕನ್ನು ಕಾಯಿದೆ ಖಾತರಿಗೊಳಿಸುತ್ತದೆ. ಅವರು ತಮ್ಮ ಪಾಲಿನ ಆಸ್ತಿಯನ್ನು ಪಡೆಯುವ ಅದನ್ನು ನಿರ್ವಹಿಸುವ ಮತ್ತು ಅದಕ್ಕಾಗಿ ಸಾಲ ಪಡೆಯುವ ಹಕ್ಕುಗಳನ್ನು ಉಲ್ಲೇಖಿಸಿದೆ.

ಅಂಗವಿಕಲತೆಗಳ ವೈವಿಧ್ಯತೆಗಳಿಗನುಗುಣವಾಗಿ ಕ್ರೀಡೆಗಳನ್ನು ರೂಪಿಸುವುದು, ಸಾಹಸ ಕ್ರೀಡೆಗಳಲ್ಲಿ ಭಾಗವಹಿಸಲು ಪ್ರೋತ್ಸಾಹ, ಅಂಗವಿಕಲ ಸಾಹಿತಿಗಳು–ಕಲಾವಿದರುಗಳು ಸೌಕರ್ಯಗಳು, ವಿಶೇಷ ತರಬೇತಿಗಳು, ಮನರಂಜನಾ ಕೇಂದ್ರಗಳು ಕೂಡ ಕಾಯಿದೆಯಲ್ಲಿ ನಮೂದಿಸಲಾಗಿದೆ.

ಈ ಕಾಯಿದೆಯಲ್ಲಿ ಒಂದು ಬಹು ಮುಖ್ಯವಾದ ಹೊಸ ಅಂಶವೆಂದರೆ ಅಂಗವಿಕಲರನ್ನು ಸಾರ್ವಜನಿಕವಾಗಿ ದೂಷಿಸಿದರೆ, ಅವಮಾನಪಡಿಸಿದರೆ, ಬೆದರಿಸಿದರೆ, ಅವರ ಉಸ್ತುವಾರಿ ವಹಿಸುತ್ತಿರುವವರು ಆಹಾರ,ನೀರು ಮೊದಲಾದ ಅಗತ್ಯಗಳನ್ನು ನೀಡದಿದ್ದರೆ ಮತ್ತು ಹಿಂಸೆಗೊಳಪಡಿಸಿದರೆ ಆರು ತಿಂಗಳಿನಿಂದ ಐದು ವರ್ಷಗಳವರೆಗೆ ಶಿಕ್ಷೆ ವಿಧಿಸುವುದಕ್ಕೆ ಕಾಯಿದೆ ಅವಕಾಶ ನೀಡಿದೆ. ಇಂತಹ ಸಂದರ್ಭಗಳಲ್ಲಿ ಬಾಧಿತ ಅಂಗವಿಕಲರಲ್ಲದೆ ಬೇರೆಯ ವ್ಯಕ್ತಿ ಅಥವಾ ಸಂಸ್ಥೆಗಳೂ ಕೂಡ ದೂರು ನೀಡಬಹುದಾಗಿದೆ. ಕಾಯಿದೆಯ ವಿರುದ್ಧ ಪ್ರವರ್ತಿಸುವ ಸರ್ಕಾರಿ ಅಧಿಕಾರಿಗಳು ಮತ್ತು ಖಾಸಗಿ ಕಂಪನಿಗಳಿಗೆ ಕೂಡ ದಂಡ ಹತ್ತು ಸಾವಿರದಿಂದ ಐದು ಲಕ್ಷದವರೆಗೆ ದಂಡ ವಿಧಿಸಲು ಕಾಯಿದೆ ಅವಕಾಶ ನೀಡಿದೆ. ಈ ಎರಡೂ ಕೆಲ ಮಟ್ಟಿಗೆ ಅಂಗವಿಕಲರಿಗಾಗುತ್ತಿರುವ ಅನ್ಯಾಯವನ್ನು ತಡೆಯುವ ಸಾಧನವಾಗಬಹುದಾಗಿವೆ.

ಅದೇ ಸಮಯದಲ್ಲಿ ಅಂಗವಿಕಲರ ಆಶಯಗಳನ್ನು ಪೂರೈಸುವಲ್ಲಿ ಹಾಗೂ ವಿಶ್ವಸಂಸ್ಥೆಯ ಒಡಂಬಡಿಕೆಯನ್ನು ಜಾರಿ ಮಾಡುವಲ್ಲಿ ಈ ಕಾಯಿದೆಯಲ್ಲಿ ಗಂಭೀರ ಕೊರತೆಗಳಿವೆ. ಅಂಗವಿಕಲರು ಘನತೆಯ ಜೀವನ ನಡೆಸುವುದಕ್ಕೆ ಅಗತ್ಯವಾದ ಉದ್ಯೋಗ ಮೀಸಲಾತಿಯಲ್ಲಿ ಹೆಚ್ಚೇನೂ ಬದಲಾವಣೆಯಿಲ್ಲ. ವಿದೇಶಗಳಲ್ಲಿನಂತೆ ಸಾರ್ವಜನಿಕ ಮತ್ತು ಖಾಸಗಿ ಕಾರ್ಖಾನೆಗಳಲ್ಲಿ ಅಂಗವಿಕಲರಿಗೇ ಪ್ರತ್ಯೇಕ ಶೆಡ್‌ಗಳಲ್ಲಿ ಕೆಲಸ ಮತ್ತಿತರ ಮಾರ್ಗಗಳ ಮೂಲಕ ಉದ್ಯೋಗಾವಕಾಶಗಳನ್ನು ಬೃಹತ್ತಾಗಿ ವಿಸ್ತರಿಸುವ ಬಗ್ಗೆ ಯೋಚನೆಯೇ ಇಲ್ಲವಾಗಿದೆ..

ಇಡೀ ಕಾನೂನಿನಲ್ಲಿ ಅಧಿಕಾರಶಾಹಿಯದೇ ದರ್ಬಾರು. ಕೇಂದ್ರ ಹಾಗೂ ರಾಜ್ಯ ಮಟ್ಟಗಳಲ್ಲಿ ಕಾನೂನು ಜಾರಿಗೊಳಿಸುವ ಅಧಿಕಾರವಿರುವ ಸ್ವಾಯತ್ತ ಅಂಗವಿಕಲರ ಪ್ರಾಧಿಕಾರವನ್ನು ಅಸ್ತಿತ್ವಕ್ಕೆ ತರುವ ಬದಲಾಗಿ ಸರ್ಕಾರದ ಬಾಲಂಗೋಚಿಯಾದ ಮತ್ತು ಅಧಿಕಾರಿಗಳಿಂದ ಹಾಗೂ ನೇಮಕಾತಿಗಳಿಂದ ತುಂಬಿತುಳುಕುವ ಸಲಹಾ ಮಂಡಳಿಗಳನ್ನು ಅಸ್ತಿತ್ವಕ್ಕೆ ತರಲಾಗಿದೆ. ಕಾನೂನಿನ ಜಾರಿಯಲ್ಲಿ ಅಂಗವಿಕಲರಿಗೆ, ಅವರ ಸಂಘ ಸಂಸ್ಥೆಗಳಿಗೆ ಯಾವ ಪಾತ್ರವೂ ಇಲ್ಲ. ಅಂಗವಿಕಲರ ಗುರುತಿನ ಚೀಟಿ ಈ ಕಾಯಿದೆಯ ಪ್ರಕಾರ ಯಾವುದೇ ಅನುಕೂಲ ಪಡೆಯಲು ಮೂಲಭೂತ ಅಗತ್ಯ, ಆದರೆ ಈ ಕಾಯಿದೆಯ ಪ್ರಕಾರ ಅಂಗವಿಕಲರೆಲ್ಲರಿಗೆ ಗುರುತಿನ ಚೀಟಿಯನ್ನು ನೀಡುವುದು ಸರ್ಕಾರಗಳ ಹೊಣೆಯಲ್ಲ. ಅಂಗವಿಕಲರು ಗುರುತಿನ ಚೀಟಿ ಪಡೆಯಲೂ ಕೂಡ ಅರ್ಜಿ ಸಲ್ಲಿಸಬೇಕು ನಂತರ ಸಂಬಂಧಪಟ್ಟ ಅಧಿಕಾರಿಗಳು ಅದನ್ನು ನೀಡುತ್ತಾರೆ. ಮನೆಯಿಂದ ಹೊರಬರಲಾಗದ, ಬರೆಯಲು ಆಗದ ಅಂಗವಿಕರಿಂದ ಈ ನಿರೀಕ್ಷೆ ಅಮಾನವೀಯ. ಅವರ ಮನೆ ಬಾಗಿಲಿನಲ್ಲಿ ಗುರುತಿನ ಚೀಟಿ ತಲುಪಿಸುವುದು ಸರ್ಕಾರದ ಹೊಣೆಯಾಗಬೇಕು.

ಅಂಗವಿಕಲರ ಸಾಮಾಜಿಕ ಭದ್ರತೆ ಮತ್ತಿತರ ಯೋಜನೆಗಳಿಗೆ ನೀಡುವ ಹಣ ಸಂಪನ್ಮೂಲಗಳ ಬಗ್ಗೆ 1995ರ ಕಾನೂನಿಂತೆಯೇ ಆಯಾ ಹಂತದ ಸರ್ಕಾರಗಳ ಆರ್ಥಿಕ ಸಾಮರ್ಥ್ಯವನ್ನು ನೆಪವಾಗಿಸಿ ಕೇವಲ ತೋರಿಕೆಯ ಕ್ರಮಗಳಿಗೆ ಸೀಮಿತವಾಗುವ ಹೇರಳ ಅವಕಾಶವನ್ನು ಈ ಕಾಯಿದೆಯೂ ನೀಡುತ್ತದೆ. ಅಂಗವಿಕಲರ ಸ್ವಸಹಾಯ ಗುಂಪುಗಳು, ಸಹಕಾರ ಸಂಘಗಳು, ಶಾಳಾಭಿವೃದ್ಧಿ ಸಂಸ್ಥೆಗಳು ಮತ್ತು ಪಂಚಾಯತ್ ಸಂಸ್ಥೆಗಳು ಅಂಗವಿಕಲರ ಬದುಕಿಗೆ ಆಧಾರವಾಗಬಹುದಾದ ಸಾಧ್ಯತೆಗಳ ಬಗ್ಗೆ ಗಮನವೇ ಇಲ್ಲ.

ಈ ಕಾಯಿದೆ ಒದಗಿಸುವ ಅವಕಾಶಗಳ ಪೂರ್ಣ ಪ್ರಯೋಜನ ಪಡೆಯಲು ಮತ್ತು ಅಂಗವಿಕಲರ ಘನತೆಯ ಜೀವನಕ್ಕೆ ಅತ್ಯಗತ್ಯವಾದ ನೆರವು ನೀಡಬಹುದಾದ ಕಾನೂನನ್ನು ರೂಪಿಸಿಕೊಳ್ಳಲು ಅಂಗವಿಕಲರ ಚಳುವಳಿ ಬಲಿಷ್ಠವಾಗಬೇಕಾಗಿದೆ. ●

ದಲಿತರ ಮೀಸಲಾತಿ, ಒಳ ಮೀಸಲಾತಿ............ ಪುಟ 6 ರಿಂದ

ನ್ಯಾಯಮೂರ್ತಿ ಸದಾಶಿವ ಆಯೋಗದ ವರದಿ ಇನ್ನೂ ಪ್ರಕಟವಾಗದೇ ಇರುವುದರಿಂದ, ವಾಸ್ತಾವಂಶ ವರದಿ ಪ್ರಕಟವಾದ ನಂತರವಷ್ಟೇ ತಿಳಿಯಬೇಕಾಗಿದೆ. ಒಳ ಮೀಸಲಾತಿ ಹಂಚಿಕೆ ಕಾಯಿದೆಯನ್ನು ಸಂವಿಧಾನಾತ್ಮಕವಾಗಿ ಸಂಸತ್ತು ಚರ್ಚಿಸಿ ತೀರ್ಮಾನಿಸಬೇಕಾಗಿದೆ. ರಾಷ್ಟ್ರಪತಿಗಳು ಅಂಗೀಕಾರ ನೀಡಬೇಕು. ರಾಜ್ಯ ಸರ್ಕಾರ ಈ ವರದಿ ಬಗ್ಗೆ ಚರ್ಚಿಸಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದಾಗಿದೆ. ರಾಜ್ಯ ಸರ್ಕಾರವೂ ಅಭಿಪ್ರಾಯಗಳನ್ನು ನೀಡಬಹುದು ಅಷ್ಟೆ. ಈ ಸಂವಿಧಾನದ ನಡವಳಿಕೆ ನಂತರವಷ್ಟೇ ಇದರ ಜಾರಿ ಆಗಲು ಸಾಧ್ಯ..

ಏನೇ ಇರಲಿ, ಡಾ॥ಬಿ.ಆರ್.ಅಂಬೇಡ್ಕರ್‌ರವರು ಸಂವಿದಾನಾತ್ಮಕ ಮೀಸಲಾತಿ ಕಟ್ಟ ಕಡೆಯ ವ್ಯಕ್ತಿಗೂ ಸಮಾನವಾಗಿ ಸಿಗಬೇಕೆಂದು ಸೂಚಿಸಿದ್ದಾರೆ. ಆಗ ಮಾತ್ರ ಸಾಮಾಜಿಕ ನ್ಯಾಯ ಒದಗಿಸುವಂತಾಗುತ್ತದೆಂದು ಸ್ಪಷ್ಟವಾಗಿ ತಿಳಿಸಿದ್ದಾರೆ.

ಜಾಗತೀಕರಣ ಮತ್ತು ಮೀಸಲಾತಿ ಅಸ್ತಿತ್ವ :

ಜಾಗತೀಕರಣ ನಮ್ಮ ದೇಶವನ್ನು ಆವರಿಸಿಕೊಂಡು ದೇಶದ ಆರ್ಥಿಕ ಕ್ಷೇತ್ರದಲ್ಲಿ ವಿಜೃಂಭಿಸುತ್ತಿದೆ. ನಮ್ಮ ದೇಶದ ನವರತ್ನಗಳೆಂದೇ ಕರೆಯಲ್ಪಡುವ ಸಾರ್ವಜನಿಕ ಉದ್ದಿಮೆಗಳಲ್ಲಿ ಈ ನೀತಿಗಳಿಂದಾಗಿ ಉದ್ಯೋಗಗಳು ಕಡಿಮೆಯಾಗುತ್ತಿರುವುದನ್ನು ಕಾಣುತ್ತಿದ್ದೇವೆ. ಕೇಂದ್ರ ಸರ್ಕಾರ ಸಾರ್ವಜನಿಕ ಉದ್ದಿಮೆಗಳು ಖಾಸಗಿ ಬಂಡವಾಳದೊಂದಿಗೆ 51:49 ಪ್ರಮಾಣದಲ್ಲಿ ಶೇರುಗಳನ್ನು ಹೊಂದಿ ನಡೆಸಲು ಪ್ರಯತ್ನಿಸುತ್ತಿದೆ. ಈ ಸಂದರ್ಭಗಳಲ್ಲಿ ಸ್ವಲ್ಪ ಹುದ್ದೆಗಳು ಇರುತ್ತವೆ. ಮೀಸಲಾತಿ ಪಡೆಯುವ ಹೋರಾಟವೂ ಜೀವಂತವಾಗಿರುತ್ತದೆ.

ರಾಜ್ಯ ಸರ್ಕಾರಗಳಲ್ಲಿ ಗುತ್ತಿಗೆ, ಅರೆ ಗುತ್ತಿಗೆ ಇತ್ಯಾದಿ ನೀತಿಗಳಿಂದ ಲಕ್ಷಾಂತರ ಸರ್ಕಾರಿ ಹುದ್ದೆಗಳು ಕಳೆದು ಹೋಗಿವೆ. ಈ ಸಂದರ್ಭದಲ್ಲಿ ಮೀಸಲಾತಿ ಉಳಿಸಿಕೊಳ್ಳುವ ಹೋರಾಟ ಗಟ್ಟಿಗೊಳಿಸಲು ಎಲ್ಲಾ ಪರಿಶಿಷ್ಟ ಜಾತಿ ಗುಂಪುಗಳು ಒಗ್ಗಟ್ಟಿನ ಹೋರಾಟ ಅನಿವಾರ್ಯವಾಗುತ್ತದೆ. ಈ ಪ್ರಜ್ಞೆ ನಮ್ಮೆಲರಿಗೂ ಇರಬೇಕಲ್ಲವೇ. ಒಳ ಮೀಸಲಾತಿ ಹೋರಾಟದಿಂದ ಶಕ್ತಿ ಕುಂದಿಸಿಕೊಂಡರೆ ಆಗುವ ಅಪಾರ ಪ್ರಮಾಣದ ಹಾನಿಗೆ ಪರಿಶಿಷ್ಠರೆಲ್ಲರು ಕಾರಣರಾಗುವುದಿಲ್ಲವೇ.

ಮೀಸಲಾತಿ ಆರಂಭದಿಂದಲೂ ಕೇಂದ್ರ, ರಾಜ್ಯ ಸರ್ಕಾರಗಳ ಅಬ್ಬರದ ಪ್ರಚಾರಗಳು ವ್ಯಾಪಕ ಪ್ರಚಾರ ಪಡೆದು ಮೀಸಲಾತಿ ಸೌಲಭ್ಯಗಳಿಂದ ದಲಿತರೆಲ್ಲಾ ತುಂಬಾ ಅಭಿವೃದ್ಧಿ ಸಾಧಿಸಿಬಿಟ್ಟಿದ್ದಾರೆಂಬ ಭಾವನೆಯನ್ನು ಮೇಲ್ವರ್ಗದವರಲ್ಲಿ ಬಿಂಬಿಸಿಬಿಟ್ಟಿದೆ! ಇದರಿಂದ ದೇಶದಲ್ಲಿ ದಲಿತರ ಈ ಮೀಸಲಾತಿ ರದ್ದುಗೊಳಿಸಬೇಕೆಂದು ಹೋರಾಟಕ್ಕೂ ಇಳಿದು ಬಿಟ್ಟಿದ್ದಾರೆ. ವಾಸ್ತವವಾಗಿ 10 ವರ್ಷಗಳ ಗಡುವು ಮುಗಿದು ನಂತರದಲ್ಲಿ ದಶಕಗಳೇ ಕಳೆದು ಹೋಗಿದೆ. ಆದರೆ ಶೇ.18 ಮೀಸಲಾತಿ ಇದುವರೆವಿಗೂ ಜಾರಿಯಾಗಿಲ್ಲವೆಂಬ ದೇಶದ ಬಹುಜನಕ್ಕೆ ತಿಳಿದಿಲ್ಲ.

ಪ್ರಸ್ತುತ ದೇಶದ ಜನಸಂಖ್ಯೆಯಲ್ಲಿ ಶೇ.22.8ರಷ್ಟು ದಲಿತರಿದ್ದಾರೆಂದು ಅಂಕಿಅಂಶಗಳು ಹೇಳುತ್ತವೆ. ಸರಕಾರಿ, ಸಾರ್ವಜನಿಕ ಉದ್ದಿಮೆ ಮತ್ತು ರಾಷ್ಟ್ರೀಕೃತ ಬ್ಯಾಂಕುಗಳ ಉದ್ಯೋಗಗಳಲ್ಲಿ ಕೇವಲ ಡಿ ವರ್ಗದಲ್ಲಿ (ಕ್ಲಾಸ್–4ರಲ್ಲಿ) ಮಾತ್ರ ಶೇ.18 ಮೀಸಲಾತಿ ಜಾರಿಯಾಗಿದೆ. ಕಾರಣ ಅದು ಕೆಳ ಮಟ್ಟದ ಕೆಲಸವಾಗಿದೆ. ಉಳಿದ ಎ,ಬಿ,ಸಿ (ಕ್ಲಾಸ್–1ರಿಂದ 3) ಹುದ್ದೆಗಳಲ್ಲಿ ಪರಿಶಿಷ್ಟ ಜಾತಿಗೆ ಮೀಸಲಾತಿ ಜಾರಿಯಲ್ಲಿ ಸರ್ಕಾರಗಳು ದಲಿತರಿಗೆ ಬಗೆದ ದ್ರೋಹ ಹೊರಹೊಮ್ಮುತ್ತದೆ.

ಸಾರ್ವಜನಿಕ ಉದ್ದಿಮೆಗಳಲ್ಲಿ (ಮತ್ತು ರಾಷ್ಟ್ರೀಯ ಬ್ಯಾಂಕುಗಳಲ್ಲಿ ಸಹ ಸ್ವಲ್ಪಮಟ್ಟಿಗೆ) 1980ರ ದಶಕದ ಮಧ್ಯಭಾಗದ ನಂತರ ಮಧ್ಯಮ ಮತ್ತು ಕೆಳವರ್ಗಗಳ ಉದ್ಯೋಗಗಳಲ್ಲಿ ಪ.ಜಾ./ಪ.ಪಂ.ಗಳ ಪ್ರಮಾಣ ಸ್ಥಗಿತವಾಗಿರುವುದು ಅಥವಾ ಕುಗ್ಗುತ್ತಿರುವುದನ್ನು ಕಾಣಬಹುದು.

ಈ ಮೇಲಿನ ಅಂಕಿ ಅಂಶಗಳು ದೇಶದ ದಲಿತರಿಗೆ ಮೀಸಲಾತಿ ಜಾರಿಗೊಳಿಸುವ ಸತ್ಯಾಂಶಗಳನ್ನು ಬಯಲಿಗೆಳೆಯುತ್ತದೆ. ಇಂತಹ ದುಸ್ಥಿತಿ ಇರುವಾಗ ಪರಿಶಿಷ್ಟ ಜಾತಿಯ ಎಲ್ಲ ಗುಂಪುಗಳು ಮೀಸಲಾತಿ ಉಳಿವಿಗಾಗಿ ಹೋರಾಟ ನಡೆಸಬೇಕಾಗಿದೆ. ಒಳ ಮೀಸಲಾತಿ ಸಾಮಾಜಿಕ ನ್ಯಾಯ ಪಡೆಯುವ ಜೊತೆಯಲ್ಲೇ ಮೀಸಲಾತಿ ಪೂರ್ಣ ಜಾರಿಗೊಳಿಸುವ ಹೋರಾಟ ಬಲಗೊಳಿಸುವ ಪ್ರಜ್ಞಾವಂತಿಕೆ ಮೈಗೂಡಿಸಿಕೊಳ್ಳಬೇಕಾಗಿದೆ. ಅದಕ್ಕಾಗಿ ಮೀಸಲಾತಿಯ ಲಾಭಗಳನ್ನು ಕಿತ್ತುಕೊಳ್ಳುವುದಕ್ಕೆ ಅನೇಕ ಜಾತಿಗಳು ಪ್ರಯತ್ನ ನಡೆಸುತ್ತಿರುವ ಆಪಾಯಕಾರಿ ಬೆಳವಣಿಗೆಯನ್ನು ಗಂಭೀರವಾಗಿ ಗಮನಿಸಬೇಕಾಗಿದೆ.

ನಮ್ಮ ದೇಶದ ದಲಿತರಿಗೆ ಮೀಸಲಾತಿ ಮೂಲಕ ಅವಕಾಶ ಕೊಡುವ ಪ್ರಯತ್ನಗಳನ್ನು ಕಾಂಗ್ರೆಸ್, ಬಿಜೆಪಿ ಪಕ್ಷಗಳ ಸರ್ಕಾರಗಳು ಮಾಡಲಿಲ್ಲವೆಂಬ ಸತ್ಯಾಂಶ ಅರಿಯಬೇಕಾಗಿದೆ. ಪ್ರಗತಿಪರ ಸುಧಾರಣೆಯನ್ನು ಜಾರಿಗೊಳಿಸದ ಈ ಸರ್ಕಾರಗಳು ಕೃಷಿ ಕ್ಷೇತ್ರದಲ್ಲಿ ದಲಿತರಿಗೆ ಭೂಮಿಯನ್ನು ನೀಡಿರುವುದಿಲ್ಲ. ದೇಶದ ಶೇಕಡಾ 80ರಷ್ಟು ದಲಿತರು ಇನ್ನೂ ಕೃಷಿಕೂಲಿಕಾರರಾಗಿದ್ದಾರೆ. ಈ ಕ್ಷೇತ್ರದಲ್ಲಿ ಮೀಸಲಾತಿ ಕೇಳುವ ಹೋರಾಟ ಬಲಿಷ್ಠವಾಗಿ ನಡೆಸಬೇಕಾಗಿದೆ. ಕೊಟ್ಯಾಂತರ ದಲಿತರ ಈ ಹೀನ ಸ್ಥಿತಿಯನ್ನು ಬದಲಿಸಿ ದಲಿತರ ಮೇಲೆ ನಡೆಯುವ ದೌರ್ಜನ್ಯ, ದಬ್ಬಾಳಿಕೆ, ಅಸ್ಪೃಶ್ಯತೆ, ಜಾತಿ ತಾರತಮ್ಯ ಹಿಮ್ಮೆಟ್ಟಿಸುವ ಜವಾಬ್ದಾರಿ ಪರಿಶಿಷ್ಟರ ಮೇಲಿದೆ. ಅದಕ್ಕಾಗಿ ಸಂಘಟಿತ ಹೋರಾಟ ಅಗತ್ಯವಾಗಿದೆ. ಈ ಹೋರಾಟದಲ್ಲಿ ಪ್ರಜಾವಂತ, ಪ್ರಗತಿ, ಸಮಾನತೆ ಬಯಸುವ ಎಲ್ಲಾ ಜಾತಿಯ ವರ್ಗದ ಜನರೊಂದಿಗೆ ಐಕ್ಯತೆ ಸಾಧಿಸಿ ಹೋರಾಟ ರೂಪಿಸಬೇಕಾಗಿದೆ. ■

JANASHAKTHI KANNADA VARA PATRIKE JAN 08, 2017 Price : Rs. 10/-
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026
RNI No. KARKAN /2006/17926 Posted on every Satuarday
Licensed to Post without prepayment License No. WPP-283

'ನೀಟ್'ಗಿಲ್ಲ ಕನ್ನಡದಲ್ಲಿ ಅವಕಾಶ, ರಾಜ್ಯ–ಕೇಂದ್ರ ವಿರುದ್ಧ ವಿದ್ಯಾರ್ಥಿಗಳ ಪ್ರತಿಭಟನೆ

ಮುಂದಿನ ವರ್ಷ ವೈದ್ಯ ಮತ್ತು ದಂತವೈದ್ಯ ಕೋರ್ಸ್ ದಾಖಲಾತಿಗೆ ನಡೆಯುವ ನೀಟ್ ಪರೀಕ್ಷೆಯಲ್ಲಿ ಕನ್ನಡ ಭಾಷೆಗೆ ಅವಕಾಶ ನೀಡದಿರುವುದನ್ನು ಖಂಡಿಸಿ ಹಾಗೂ ಸಂವಿಧಾನಿಕ ಭಾಷೆಯಲ್ಲಿ ಬರೆಯಲು ಅವಕಾಶ ನೀಡಬೇಕು ಎಂದು ಒತ್ತಾಯಿಸಿ ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್ಎಫ್ಐ) ಡಿಸೆಂಬರ್ 28ರಂದು ಬೆಂಗಳೂರಿನ ಮೈಸೂರು ಬ್ಯಾಂಕ್ ವೃತ್ತದ ಬಳಿ ಪ್ರತಿಭಟನೆ ನಡೆಸಿದರು.



ಪ್ರತಿಭಟನೆಯನ್ನುದ್ದೇಶಿಸಿ ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿ ಗುರುರಾಜ್ ದೇಸಾಯಿ ಮಾತನಾಡಿ "ರಾಜ್ಯ ಸರಕಾರ ಮತ್ತು ರಾಜ್ಯದ ಸಂಸದರ ನಿರ್ಲಕ್ಷ್ಯದಿಂದಾಗಿ ನೀಟ್ ಪರೀಕ್ಷೆಯನ್ನು ಕನ್ನಡದಲ್ಲಿ ಬರೆಯುವುದು ತಪ್ಪಿದಂತಾಗಿದೆ. ಇವರ ಕನ್ನಡ ವಿರೋಧಿ ನೀತಿಯನ್ನು ಖಂಡಿಸುತ್ತೇವೆ. ಮೇ ತಿಂಗಳಲ್ಲಿ ಎಲ್ಲಾ ರಾಜ್ಯಗಳ ಆರೋಗ್ಯ ಸಚಿವರ ಮತ್ತು ಸಂಸದರ ಜೊತೆಯಲ್ಲಿ ಮಾತುಕತೆ ನಡೆಸಿರುವುದಾಗಿ ಕೇಂದ್ರ ಸರಕಾರ ಹೇಳುತ್ತಿದೆ. ಆ ಮಾತುಕತೆಗೆ ರಾಜ್ಯ ಸರಕಾರ ಯಾಕೆ ಆರೋಗ್ಯ ಸಚಿವರನ್ನು ಕಳುಹಿಸಿರಲಿಲ್ಲ ಎಂಬ ಪ್ರಶ್ನೆಗೆ ಉತ್ತರ ಕೊಡಬೇಕಿದೆ.

ರಾಜ್ಯದ ಸಂಸದರೂ ಆ ಸಭೆಯಲ್ಲಿ ಭಾಗಿಯಾಗಿದ್ದು ಯಾಕೆ ಬಾಯಿ ಬಿಡಲಿಲ್ಲ? ಕರ್ನಾಟಕವನ್ನು ಪ್ರತಿನಿಧಿಸಿ ಶ್ರೀ ಅನಂತ್ ಕುಮಾರ್ ಮತ್ತು ಶ್ರೀ ಸದಾನಂದಗೌಡ ರವರು ಕೇಂದ್ರ ಸಚಿವರಾಗಿದ್ದಾರೆ. ಇವರಾದರೂ ಕನ್ನಡ ಭಾಷೆಯಲ್ಲಿ ಪರೀಕ್ಷೆ ಬರೆಯಲು ಒತ್ತಡವನ್ನು ಹೇರಬಹುದಿತ್ತು. ವೈದ್ಯಕೀಯ ಶಿಕ್ಷಣ ಇಲಾಖೆಯು ತನ್ನ ಜವಾಬ್ದಾರಿಯನ್ನು ಮರೆತಿದೆ. ಇಲಾಖೆಯ ಕಾರ್ಯದರ್ಶಿಯವರು ಕನ್ನಡ ವಿರೋಧಿ ನೀತಿಯನ್ನು ಅನುಸರಿಸಿದ್ದಾರೆ ಎಂದು ಟೀಕಿಸಿದರು.

ರಾಜ್ಯ ಮುಖಂಡರಾದ ಎಸ್.ವೆಂಕಟೇಶ್‌ರವರು ಮಾತನಾಡಿ "ರಾಜ್ಯ ಸರಕಾರ ಮತ್ತು ರಾಜ್ಯದ ಸಂಸದರು ಮಾಡಿದ ತಪ್ಪಿಗೆ ಪೋಷಕರು ಮತ್ತು ವಿದ್ಯಾರ್ಥಿಗಳು ಪರದಾಡುವಂತಾಗಿದೆ. ಕೂಡಲೇ ಸರಕಾರ ಮಧ್ಯ ಪ್ರವೇಶಿಸಿ ಕನ್ನಡದಲ್ಲಿ ನೀಟ್ ಪರೀಕ್ಷೆ ಬರೆಯಲು ಕೇಂದ್ರದ ಮೇಲೆ ಒತ್ತಡ ಹೇರಬೇಕು ಎಂದರು. ಬರುವ ವರ್ಷದಿಂದ ಸಿಇಟಿ ಪರೀಕ್ಷೆಯನ್ನು ಕನ್ನಡದಲ್ಲಿ ನಡೆಸುವುದಾಗಿ ರಾಜ್ಯ ಸರಕಾರ ಹೇಳಿರುವುದು ಸ್ವಾಗತಾರ್ಹ ಬೆಳವಣಿಗೆ. ಆದರೆ ವಿಜ್ಞಾನ ವಿಭಾಗದ ಪಠ್ಯಕ್ರಮಗಳನ್ನು ಕನ್ನಡಕ್ಕೆ ತರುವ ಯೋಜನೆ ಇನ್ನೂ ನೆನೆಗುದಿಗೆ ಬಿದ್ದಿದೆ. ಈಗಾಗಲೇ ಹಂಪಿ ವಿಶ್ವವಿಧ್ಯಾಲಯ ಕನ್ನಡಕ್ಕೆ ಅನುವಾದಿಸಿ 2012ರಲ್ಲಿಯೇ ರಾಜ್ಯ ಸರಕಾರಕ್ಕೆ ಸಲ್ಲಿಕೆ ಮಾಡಿದೆ. ಆದರೆ ರಾಜ್ಯ ಸರಕಾರ ಈ ಕುರಿತು ಇನ್ನು ಚಿಂತನೆ ನಡೆಸಿಲ್ಲ.

ಕೂಡಲೇ ಶಿಕ್ಷಣ ತಜ್ಞರ, ಪ್ರಾಂಶುಪಾಲರ, ವಿಷಯವಾರು ಉಪನ್ಯಾಸಕರ, ವಿದ್ಯಾರ್ಥಿ–ಪೋಷಕರ ಸಂಘಟನೆಗಳ ಸಭೆ ಕರೆದು ಕನ್ನಡ ಪಠ್ಯಕ್ರಮದ ಸಾಧಕ ಮತ್ತು ಬಾದಕಗಳ ಕುರಿತು ಚರ್ಚಿಸಬೇಕು ಎಂದರು.

ಪೋಷಕರ ಸಂಘಟನೆಯ ಮುಖಂಡರಾದ ಡಿ.ಚಂದ್ರಶೇಖರ್ ಮಾತನಾಡಿ "ಆರೋಗ್ಯ ಸಚಿವಾಲಯದ ಅಧಿಕೃತ ಮಾಹಿತಿ ಪ್ರಕಾರ ಅಸ್ಸಾಮಿ, ಬಂಗಾಳಿ, ಗುಜರಾತಿ, ತಮಿಳು, ಮರಾಠಿ, ತೆಲುಗು ಭಾಷೆಯಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡಿದೆ. ಬದಲಾವಣೆ ತರುವುದಾಗಿ ಹೇಳುವ ಮೋದಿಯವರು ಕನ್ನಡ ಸೇರಿದಂತೆ ಇತರೆ ಅನೇಕ ಭಾಷೆಗಳನ್ನು ಸಂವಿಧಾನ ರಾಷ್ಟ್ರೀಯ ಭಾಷೆಗಳೆಂದು ಒಪ್ಪಿಕೊಂಡಿರುವುದು ನೆನಪಿಗೆ ಬಾರಲಿಲ್ಲವೆ? ಉನ್ನತ ಶಿಕ್ಷಣದ ಬಗ್ಗೆ ಕಳಕಳಿ ಇದೆ ಎಂದು ಡೋಂಗಿ ಮಾತಗಳನ್ನಾಡುವ ಪ್ರಧಾನಿಯವರು ಕನ್ನಡ ಸೇರಿದಂತೆ ಇತರೆ ಸಂವಿಧಾನಿಕ ಭಾಷೆಗಳಿಗೆ ಅವಮಾನ ಮಾಡಿರುವುದನ್ನು ಖಂಡಿಸಿದರು.

ಪ್ರತಿಭಟನೆ ನಂತರದಲ್ಲಿ ಸಹಾಯಕ ಆಯುಕ್ತರಾದ ಜಿ.ವಿ. ನಾಗರಾಜ್ ರವರನ್ನು ಭೇಟಿ ಮಾಡಿ ರಾಷ್ಟ್ರಪತಿಗಳಿಗೆ ಮನವಿಪತ್ರವನ್ನು ರವಾನಿಸಬೇಕೆಂದು ಪತ್ರವನ್ನು ಸಲ್ಲಿಸಿದರು. ಪ್ರತಿಭಟನೆಯಲ್ಲಿ ಎಸ್.ಎಫ್.ಐ ರಾಜ್ಯ ಉಪಾಧ್ಯಕ್ಷ ಬಸವರಾಜ್ ಪೂಜಾರ, ಮುಖಂಡರಾದ ಚಿಕ್ಕರಾಜು ಎಸ್, ವೇಗಾನಂದ್, ನರೇಂದ್ರ.ಬಿ, ಸಿ.ಅಮರೇಶ್, ಪೋಷಕರ ಸಂಘಟನೆಯ ಮುಖಂಡರಾದ ಶ್ರೀನಿವಾಸ್, ನರಸಿಂಹಮೂರ್ತಿ, ಗಂಗರಾಜು, ವೇಣುಗೋಪಾಲ್, ಸೇರಿದಂತೆ ಅನೇಕರಿದ್ದರು.

ಎಸ್.ಎಫ್ಐ ನೇತೃತ್ವದಲ್ಲಿ ಹಾವೇರಿ ಜಿಲ್ಲೆಯಲ್ಲಿ ಡಿಸೆಂಬರ್ 27ರಂದು ಸರ್ಕಾರಿ ಪಿ.ಯು. ಬಾಲಕರ ಕಾಲೇಜಿನಿಂದ ಮೆರವಣಿಗೆ ಹೊರಟು ಜಿ.ಎಚ್.ಪಟೇಲ್ ಸರ್ಕಲ್‌ನಲ್ಲಿ ಪ್ರತಿಭಟನೆ ನಡೆಸಿದರು. ಜಿಲ್ಲಾಧ್ಯಕ್ಷರಾದ ರೇಣುಕಾ ಕಹಾರ, ತಾಲ್ಲೂಕು ಕಾರ್ಯದರ್ಶಿ ಪ್ರದೀಪ ಅಕ್ಕಿವಳ್ಳಿ ಮಾತನಾಡಿದರು.

ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ಸೇರಿದಂತೆ ವಿವಿದೆಡೆ ಪ್ರತಿಭಟನೆಗಳು ನಡೆದಿದೆ.

ಪ್ರತಿಭಟನೆಯಲ್ಲಿ ತಾಲ್ಲೂಕು ಉಪಾಧ್ಯಕ್ಷ ವಿನಾಯಕ ಯಲಗಚ್ಚಿ, ಪುನೀತ್, ಬಸವರಾಜ ಮಡಿವಾಳರ ಖಲೀಮ, ರಸ್ಸುಲ್ ಬಿ, ಮಂಜುನಾಥ ಪಿ, ನಾಗರಾಜ, ಬಸವರಾಜ, ಸಮಿವುಲ್ಲಾ, ಸಂತೋಷ ಶ್ರೀನಿವಾಸ, ಮೈಲಾರಪ್ಪ, ಈರಪ್ಪ, ದೀಲಿಪ್, ಶಿವರಾಜ್, ಮನೋಜ್, ಅನಂತರಾಜ್, ಅಭಿಷೇಕ, ಮಾಲತೇಶ, ನೀಲಪ್ಪ ನೂರಾರು ಜನ ವಿಧ್ಯಾರ್ಥಿಗಳು ಭಾಗವಹಿಸಿದರು.

ಕೊಪ್ಪಳ ಜಿಲ್ಲೆಯ ಗಂಗಾವತಿ ಡಿಸೆಂಬರ್ 26ರಂದು ಎಸ್ಎಫ್ಐ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ರಾಜ್ಯ ಕಾರ್ಯದರ್ಶಿ ಗುರುರಾಜ ದೇಸಾಯಿ, ಜಿಲ್ಲಾಧ್ಯಕ್ಷರಾದ ಅಮರೇಶ್ ಕಡಗದ್, ಮುಖಂಡರಾದ ದುರಗೇಶ್ ಡಗ್ಗಿ, ಮಂಜುನಾಥ್ ಡಗ್ಗಿ, ನಾಗರಾಜ್ ಉತನೂರ್, ನಾಗರಾಜ್ ಪೂಜಾರ್ ಸೇರಿದಂತೆ ಹಲವರು ಭಾಗವಹಿಸಿದ್ದರು.

ತೊಗರಿ: ರೂ.7,500 ಬೆಲೆ ನಿಗದಿಗೆ ಒತ್ತಾಯ

ಪ್ರತಿ ಕ್ವಿಂಟಲ್ ತೊಗರಿಗೆ ರೂ.7,500 ಬೆಂಬಲ ಬೆಲೆ ನಿದಿಪಡಿಸಬೇಕು ಎಂಬುದು ಸೇರಿದಂತೆ ಹಲವು ನಿರ್ಣಯಗಳನ್ನು ಡಿಸೆಂಬರ್ 27ರಂದು ಕಲಬುರ್ಗಿ ಜಿಲ್ಲೆಯ ಡಾ॥ಎಸ್.ಎಂ.ಪಂಡಿತ ರಂಗಮಂದಿರದಲ್ಲಿ ಮಂಗಳವಾರ ನಡೆದ ರಾಜ್ಯ ಮಟ್ಟದ ತೊಗರಿ ಬೆಳೆಗಾರರ ಸಮಾವೇಶದಲ್ಲಿ ಕೈಗೊಳ್ಳಲಾಯಿತು.



ಡಾ॥ಎಂ.ಎಸ್.ಸ್ವಾಮಿನಾಥನ್ ವರದಿ ಶಿಫಾರಸಿನಂತೆ ಕ್ವಿಂಟಲ್ ತೊಗರಿಗೆ ರೂ.7,500 ಬೆಲೆ ನಿಗದಿಪಡಿಸುವಂತೆ ರಾಜ್ಯ ಸರ್ಕಾರದ ಮೇಲೆ ಒತ್ತಡ ಹೇರಲು ತೀರ್ಮಾನಿಸಲಾಯಿತು. ಆರ್ಥಿಕ ಸಲಹೆಗಾರ ಡಾ॥ಅರವಿಂದ ಸುಬ್ರಮಣಿಯನ್ ಅವರ ಶಿಫಾರಸಿನ ಬಹುಭಾಗ ತಿರಸ್ಕರಿಸಬೇಕು. ತಂತ್ರಜ್ಞಾನ, ಸಂಶೋಧನೆಯ ಕುರಿತ ವಿವರಗಳನ್ನು ಗ್ರಾಮ ಪಂಚಾಯತಿ ಮಟ್ಟದಲ್ಲಿ ರೈತರಿಗೆ ನೀಡಬೇಕು. ಕೆಎಂಎಫ್ ಮಾದರಿಯಲ್ಲಿ ರೈತರನ್ನು ಒಳಗೊಂಡಂತೆ ತೊಗರಿ ಮಂಡಳಿಯನ್ನು ಪುನರ್ ರಚಿಸಬೇಕು ಎಂಬ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ಹೆಚ್.ಕೆ.ಸಿ.ಸಿ.ಐ. ನ ಸಂತೋಷ್ ಲಂಗಾರ್ ರವರು ಮಾತನಾಡಿ 'ಕರ್ನಾಟಕ ಹಾಲು ಮಹಾಮಂಡಲ(ಕೆಎಂಎಫ್) ಮಾದರಿಯಲ್ಲಿ ತೊಗರಿ ಮಂಡಳಿಯನ್ನು ಬಲಪಡಿಸಿದಾಗ ಮಾತ್ರ ರೈತರಿಗೆ ಅನುಕೂಲವಾಗುತ್ತದೆ' ಎಂದು ಹೇಳಿದರು.

ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್ಎಸ್)ದ ರಾಜ್ಯಾಧ್ಯಕ್ಷರಾದ ಮಾರುತಿ ಮಾನ್ಪಡೆ ಮಾತನಾಡಿ, 'ತೊಗರಿಗೆ ಬೆಂಬಲ ಬೆಲೆ ನಿಗದಿಪಡಿಸುವಂತೆ ರಾಜ್ಯ ಸರ್ಕಾರದ ಮೇಲೆ ಒತ್ತಡ ಹೇರಲು ಜನವರಿ ಮೊದಲ ವಾರದಲ್ಲಿ ಬೀದರ್, ಕಲಬುರ್ಗಿ, ಯಾದಗಿರಿ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ರಸ್ತೆ ತಡೆ ನಡೆಸಲಾಗುವುದು. ಜನವರಿ 15ರ ನಂತರ ಎಪಿಎಂಸಿ ಬಂದ್ ಮಾಡಲಾಗುವುದು. ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಲು ಜನವರಿ 26ರ ಬಳಿಕ ನವದೆಹಲಿಯಲ್ಲಿ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗುವುದು' ಎಂದು ಹೇಳಿದರು. ಅಖಿಲ ಭಾರತ ಕಿಸಾನ್ ಸಭಾದ ಜಂಟಿ ಕಾರ್ಯದರ್ಶಿ ವಿಜು ಕೃಷ್ಣನ್ ಸಮಾವೇಶವನ್ನು ಉದ್ಘಾಟಿಸಿದರು.

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷರಾದ ಭೀಮಸೀ ಕಲಾದಗಿ, ರಾಯಚೂರು ಕೃಷಿ ವಿಶ್ವಿವಿದ್ಯಾಲಯದ ಪ್ರಾಧ್ಯಾಪಕ ಲೋಕೇಶ್, ಕೆಪಿಆರ್ಎಸ್ ಜಿಲ್ಲಾ ಅಧ್ಯಕ್ಷ ಶರಣಬಸಪ್ಪ ಮಮಶೆಟ್ಟಿ, ಎಂ.ಎಸ್.ಸಾಗರ್, ಶಾಂತಪ್ಪಾ ಪಾಟೀಲ, ಸತೀಶ ಕಾಂತಾ ಚಿತ್ತಾಪುರ, ಮಂಜುನಾಥ್ ಗೌಡ್ರು ಉಪಸ್ಥಿತರಿದ್ದರು.

JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086 Editor : **G.V.SRIRAMA REDDY**